

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 18 ಗುರುವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 63 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ದಟ್ಟಗಳ್ಳಿ ರೆಸ್ಟೋ ಬಾರ್ ಅಗ್ನಿ ದುರಂತದಲ್ಲಿ ಇಬ್ಬರು ಸಜೀವ ದಹನ ಪ್ರಕರಣ

ಉಪ ಅಧೀಕ್ಷಕ ಸೇರಿ ಐವರು ಅಬಕಾರಿ ಅಧಿಕಾರಿಗಳ ಅಮಾನತು

- ಕರ್ತವ್ಯ ಲೋಪದಡಿ ಐವರ ಅಮಾನತು ಆದೇಶ ಹೊರಡಿಸಿದ ಅಬಕಾರಿ ಆಯುಕ್ತರು
- ನಗರಾಭಿವೃದ್ಧಿ ಸಚಿವರ ಶಿಫಾರಸ್ಸಿನನ್ವಯ ಅಬಕಾರಿ ಡಿಸಿ ವಿರುದ್ಧವೂ ಶೀಘ್ರ ಕ್ರಮ!?

ಮೈಸೂರು, ಜೂ.17(ಎಂಕೆ)– ಮೈಸೂರಿನ ದಟ್ಟಗಳ್ಳಿಯ ರಿಂಗ್ ರಸ್ತೆಯಲ್ಲಿರುವ 'ಮಾರಾ' ರೆಸ್ಟೋ ಬಾರ್ (ಫಾಕ್ಸ್ ಡೆನ್) ಪಬ್‌ನಲ್ಲಿ ಜೂ.15ರಂದು ನಡೆದ ಅತೀ ಘೋರ ಅಗ್ನಿ ಅವಘಡ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪ ಹಾಗೂ ನಿರ್ಲಕ್ಷ್ಯದ ಆರೋಪದಡಿ ಮೈಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕ ಸೇರಿದಂತೆ ಐದು ಮಂದಿ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಅಮಾನತುಗೊಳಿಸಿ ಆದೇಶಿಸಲಾಗಿದೆ.

ಕಟ್ಟಡದ ರೂಫ್ ಟಾಪ್‌ನಲ್ಲಿ ಅನುಮತಿ ಪಡೆಯದೆ ಒಣ ಹುಲ್ಲು, ಗರಿಗಳು ಹಾಗೂ ಬಿದಿರಿಂದ ನಿರ್ಮಿಸಿ 'ಮಾರಾ' ರೆಸ್ಟೋಬಾರ್(ಬಾರ್ ಅಂಡ್ ರೆಸ್ಟೋರೆಂಟ್) ನಡೆಸುತ್ತಿದ್ದು, ಈ ಸಂಬಂಧ ಪರಿಶೀಲಿಸದೆ ಕರ್ತವ್ಯ ಲೋಪ ಎಸಗಿರುವ ಆರೋಪದ ಮೇರೆಗೆ ಮೈಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕ ಹೆಚ್.ಕೆ. ರಮೇಶ್, ಮೈಸೂರು ವಲಯ ನಂ.3ರ ಅಬಕಾರಿ ನಿರೀಕ್ಷಕ ಆಶಿಶ್, ಅಬಕಾರಿ ಉಪ ನಿರೀಕ್ಷಕರಾದ ರಂಗನಾಥ್ ಮತ್ತು ದಿಲೀಪ್‌ಕುಮಾರ್ ಹಾಗೂ ಕಾನ್‌ಸ್ಟೇಬಲ್ ರಾಜೇಶ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಪಡಿಸಿ ಬೆಂಗಳೂರು ಅಬಕಾರಿ ಆಯುಕ್ತರು ಆದೇಶ ಹೊರಡಿಸಿದ್ದಾರೆ. ಜೂ.15ರ ಸೋಮವಾರ ಮಧ್ಯಾಹ್ನದ ವೇಳೆಗೆ ಸಂಭವಿಸಿದ ಭಾರೀ ಅಗ್ನಿ ಅವಘಡದಲ್ಲಿ 'ಮಾರಾ' ರೆಸ್ಟೋಬಾರ್‌ನಲ್ಲಿ ಅಡುಗೆ ಕೆಲಸ ಮಾಡುತ್ತಿದ್ದ ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಮೂಲದ ಸಾಹಿನ್ (26) ಹಾಗೂ ನೇಪಾಳ ಮೂಲದ

■ 6ನೇ ಪುಟಕ್ಕೆ



ಮೈಸೂರು ಅಬಕಾರಿ ಡಿಸಿಯೂ ಶೀಘ್ರ ಅಮಾನತು?

'ಮಾರಾ' ರೆಸ್ಟೋ ಬಾರ್ ಅಗ್ನಿ ದುರಂತಕ್ಕೆ ಸಂಬಂಧಿಸಿದಂತೆ ಈಗ ಐವರು ಅಬಕಾರಿ ಅಧಿಕಾರಿಗಳ ತಲೆದಂಡವಾಗಿದೆ. ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ, ಸ್ಥಳ ಪರಿಶೀಲನೆ ವೇಳೆ ಪ್ರಕರಣದಲ್ಲಿ ಅಬಕಾರಿ ಡಿಸಿ ವಿರುದ್ಧ ಕ್ರಮಕ್ಕೆ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ ಎಂದು ಮಾಧ್ಯಮಗಳಿಗೆ ತಿಳಿಸಿದ್ದರು. ಆದರೆ ಈಗ ಐವರಷ್ಟೇ ಅಮಾನತಾಗಿದ್ದು, ಇವರ ಮೇಲೆ ಅಯುಕ್ತರ ಹಂತದಲ್ಲಿ ಕ್ರಮವಾಗಿದೆ. ಮೈಸೂರು ಅಬಕಾರಿ ಡಿಸಿಗೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ಕ್ರಮವಾಗಬೇಕಿದ್ದು, ಶೀಘ್ರವೇ ಅವರನ್ನು ಅಮಾನತುಪಡಿಸಲಾಗುತ್ತಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ.

ಪ್ರಭಾವಿಗಳ ಕೈವಾಡ ಬರೀ ಊಹಾಪೋಹ...!

'ಮಾರಾ' ರೆಸ್ಟೋಬಾರ್‌ಗೆ ಅಬಕಾರಿ ಲೈಸೆನ್ಸ್ ನೀಡುವಲ್ಲಿ ಹಾಗೂ ಅನುಮತಿ ಪಡೆಯದೆ ಮದ್ಯ ಮಾರಾಟ ಮಾಡುತ್ತಿರುವುದರ ಹಿಂದೆ ಪ್ರಭಾವಿಗಳ ಕೈವಾಡ ಇದೆ ಎನ್ನಲಾಗಿದೆ. ಕೆಲ ಅಬಕಾರಿ ಇಲಾಖೆ ಅಧಿಕಾರಿಗಳೇ ಹೇಳುವಂತೆ, ಅಬಕಾರಿ ಡಿಸಿ (ಮೈಸೂರು ನಗರ) ಅವರ ಪಾಲುದಾರಿಕೆ ಇದೆ ಎಂಬ ಮಾತುಗಳು ಕೇಳಿಬಂದಿವೆ. ಆದರೆ, ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅಬಕಾರಿ ಡಿಸಿ(ಮೈಸೂರು ನಗರ) ನಾಗರಾಜ್, ಇವೆಲ್ಲಾ ಊಹಾಪೋಹದ ಮಾತುಗಳು. ಕರ್ತವ್ಯ ಲೋಪ ಯಾರಿಂದಾಗಿದೆ ಎಂದು ಇಲಾಖೆಯ ಹಿರಿಯ ಅಧಿಕಾರಿಗಳು ಪರಿಶೀಲಿಸಿ, ಈಗ ಅಮಾನತು ಆದೇಶ ಹೊರಡಿಸಿದ್ದಾರೆ. ಈಗ ಅಮಾನತಾಗಿರುವವರು ಈ ಹಿಂದೆಯೂ ಕರ್ತವ್ಯ ಲೋಪದಿಂದ ಅಮಾನತುಗೊಂಡಿದ್ದರು.

ರೆಸ್ಟೋಬಾರ್ ಕಟ್ಟಡಕ್ಕೆ ಬೀಗ

- ಅಬಕಾರಿ, ಪೊಲೀಸ್ ಇಲಾಖೆ ಜಂಟಿ ಕ್ರಮ
- ಸ್ಥಳದಲ್ಲಿ ವೈಜ್ಞಾನಿಕ ಸಾಕ್ಷಿ ಸಂಗ್ರಹ

ಮೈಸೂರು, ಜೂ.17(ಎಂಟಿವೈ)– ಅಗ್ನಿ ದುರಂತ ಸಂಭವಿಸಿ, ಇಬ್ಬರ ಸಾವಿಗೆ ಕಾರಣವಾದ ಮೈಸೂರಿನ ದಟ್ಟಗಳ್ಳಿಯ ರಿಂಗ್ ರಸ್ತೆಯ ರೆಸ್ಟೋಬಾರ್ ಕಟ್ಟಡಕ್ಕೆ ಪೊಲೀಸ್ ಹಾಗೂ ಅಬಕಾರಿ ಇಲಾಖೆ ಬೀಗ(ಸೀಲ್ಡ್) ಜಡಿದಿದ್ದಾರೆ.

ಸೋಮವಾರ(ಜೂ.15) ಮಧ್ಯಾಹ್ನ ಸಂಭವಿಸಿದ ಅಗ್ನಿ ದುರಂತದಲ್ಲಿ ರೆಸ್ಟೋಬಾರ್‌ನಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಸಿಬ್ಬಂದಿ ಮೃತಪಟ್ಟರೆ, ಏಳು ಮಂದಿ ಗಾಯಗೊಂಡಿದ್ದರು. ಅಲ್ಲದೆ, 35ಕ್ಕೂ ಹೆಚ್ಚು ಮಂದಿ ಪ್ರಾಣಾಪಾಯದಿಂದ ಪಾರಾಗಿದ್ದರು. ಅನುಮತಿ(ಲೈಸೆನ್ಸ್) ಪಡೆಯದೆ ಕಾನೂನು ಬಾಹಿರವಾಗಿ ರೆಸ್ಟೋಬಾರ್ ನಡೆಸುತ್ತಿದ್ದದ್ದು ಖಚಿತವಾದ ಹಿನ್ನೆಲೆಯಲ್ಲಿ ಇದೀಗ ಪೊಲೀಸ್ ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳು ಜಂಟಿಯಾಗಿ ರೆಸ್ಟೋಬಾರ್ ನಡೆಯುತ್ತಿದ್ದ ಕಟ್ಟಡಕ್ಕೆ ಬೀಗ ಹಾಕಿದ್ದಾರೆ. ಈಗಾಗಲೇ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ರೆಸ್ಟೋಬಾರ್ ಮಾಲೀಕ, ನಟ ಪ್ರೀತಮ್ ಪುನೀತ್ ಹಾಗೂ ಕಟ್ಟಡದ ಮಾಲೀಕ ಕೇಶವಮೂರ್ತಿ ಕೇಸ್ ಜಡಿದಿದ್ದಾರೆ.

ವೈಜ್ಞಾನಿಕ ಸಾಕ್ಷಿ ಸಂಗ್ರಹ: ಅಗ್ನಿ ಅನಾಹುತದಲ್ಲಿ ಇಬ್ಬರು ಮೃತಪಟ್ಟ ಹಿನ್ನೆಲೆಯಲ್ಲಿ ಘಟನೆಗೆ ನಿಖರ ಕಾರಣ ಪತ್ತೆ ಮಾಡಲು ಸೋಕೊ ತಂಡ ಬೆಂಕಿಗೆ ಆಹುತಿಯಾದ ರೆಸ್ಟೋಬಾರ್‌ಗೆ ಭೇಟಿ ನೀಡಿ ಪರಿಶೀಲಿಸಿದೆ. ಬೆಂಕಿಗೆ ಕಾರಣ, ಬೇರೆ ಏನಾದರು ಕಾರಣ ಇದೆಯಾ ಎಂದು ಪರಿಶೀಲಿಸುವುದರೊಂದಿಗೆ ವೈಜ್ಞಾನಿಕ ಸಾಕ್ಷಿ ಸಂಗ್ರಹಿಸಿದೆ. ಪ್ರಕರಣದಲ್ಲಿ ಪೆಟ್ರೋಲ್, ಡೀಸೆಲ್, ಗ್ಯಾಸ್ ಸೋರಿಕೆ,

■ 6ನೇ ಪುಟಕ್ಕೆ



ಮೈಸೂರಿನ ದಟ್ಟಗಳ್ಳಿಯಲ್ಲಿ ಅಗ್ನಿಗೆ ಆಹುತಿಯಾದ ರೆಸ್ಟೋಬಾರ್ ಕಟ್ಟಡಕ್ಕೆ ಬೀಗ ಹಾಕಿರುವುದು.

ತನಿಖೆ ಚುರುಕಾಗಿದೆ

ದಟ್ಟಗಳ್ಳಿಯ ರೆಸ್ಟೋಬಾರ್ ಅಗ್ನಿ ದುರಂತದ ಸ್ಥಳಕ್ಕೆ ಸೋಕೊ ತಂಡ ಭೇಟಿ ನೀಡಿ ವೈಜ್ಞಾನಿಕ ಸಾಕ್ಷಿ ಸಂಗ್ರಹಿಸಿದೆ. ಸಂಗ್ರಹವಾದ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ತನಿಖೆ ಚುರುಕಾಗಿ ನಡೆಯುತ್ತಿದೆ. ಈಗಾಗಲೇ ರೆಸ್ಟೋಬಾರ್ ಮಾಲೀಕ ಹಾಗೂ ಕಟ್ಟಡದ ಮಾಲೀಕರ ವಿರುದ್ಧ ಪ್ರಕರಣ ದಾಖಲಾಗಿದೆ.

– ಪ್ರಕಾಶ್, ಎಸಿಪಿ, ಕೆ.ಆರ್.ವಿಭಾಗ

ಗಾಯಾಳುಗಳು ಚೇತರಿಕೆ

ದುರಂತದಲ್ಲಿ ಸುಟ್ಟಗಾಯದಿಂದ ಮೈಸೂರಿನ ಜೆಎಸ್‌ಎಸ್ ಹಾಗೂ ಸುಯೋಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳುಗಳ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ. ಅಲ್ಲದೆ, ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೆಸ್ಟೋಬಾರ್ ಮಾಲೀಕ ಪ್ರೀತಂ ಪುನೀತ್ ಆರೋಗ್ಯವೂ ಸುಧಾರಿಸುತ್ತಿದ್ದು, ಇನ್ಫೆಕ್ಷನ್ ಆಗಬಹುದೆಂದು ಅವರ ಕುಟುಂಬದ ಇಬ್ಬರು ಸದಸ್ಯರನ್ನು ಹೊರತುಪಡಿಸಿ ಬೇರೆ ಯಾರು ಪ್ರೀತಂ ಪುನೀತ್ ಅವರನ್ನು ಭೇಟಿ ಮಾಡಲು ಅವಕಾಶ ನೀಡುತ್ತಿಲ್ಲ.

ಮೊದಲ ಬಾರಿ ಶಾಸಕರಾದವರಿಗೆ ಮಂತ್ರಿ ಸ್ಥಾನ ಸಿಗಲ್ಲ

- ಸಿಎಂ ಡಿ.ಕೆ.ಶಿವಕುಮಾರ್ ಸ್ಪಷ್ಟನೆ
- ತಿಂಗಳಾಂತ್ಯಕ್ಕೆ ಸಂಪುಟಕ್ಕೆ 18 ಮಂದಿ ಸೇರ್ಪಡೆ
- ಜೂ.23ಕ್ಕೆ ವರಿಷ್ಠರ ಭೇಟಿ ವೇಳೆ ಪಟ್ಟಿ ಅಂತಿಮ
- ಸಚಿವ ಸ್ಥಾನ ಸಿಗದ ಶಾಸಕರಿಗೆ ನಿಗಮ ಮಂಡಳಿ ಸ್ಥಾನಮಾನ

ಬೆಂಗಳೂರು, ಜೂ.17(ಕೆಎಂಶಿ)–ವಿಧಾನ ಸಭೆಗೆ ಮೊದಲ ಬಾರಿ ಆಯ್ಕೆಗೊಂಡವರಿಗೆ ಮಂತ್ರಿ ಸ್ಥಾನ ನೀಡಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಬಿಡದಿ ರೆಸಾರ್ಟ್‌ನಲ್ಲಿ ತಂಗಿರುವ ಕಾಂಗ್ರೆಸ್ ಶಾಸಕರನ್ನು ಉದ್ದೇಶಿಸಿ ಮಾತನಾಡಿದ ಅವರು, ಮಂತ್ರಿಮಂಡಲ ವಿಸ್ತರಣೆ ಸಂಬಂಧ ಚರ್ಚಿಸಲು ವರಿಷ್ಠರು ಜೂನ್ 23ರಂದು ದೆಹಲಿಗೆ ಕರೆದಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರಿಗೂ ದೆಹಲಿ ಆಹ್ವಾನ ಇದೆ.

ನಾವುಗಳು ಒಟ್ಟಿಗೆ ಕುಳಿತು ವರಿಷ್ಠರೊಂದಿಗೆ ಚರ್ಚಿಸಿ ಸಂಪುಟಕ್ಕೆ 18 ಮಂದಿಯನ್ನು ತಿಂಗಳಾಂತ್ಯದೊಳಗೆ ಸೇರ್ಪಡೆ ಮಾಡಿಕೊಳ್ಳುವುದಾಗಿ ತಿಳಿಸಿದ್ದಾರೆ.

ವರಿಷ್ಠರ ತೀರ್ಮಾನದಂತೆ ಮೊದಲ ಬಾರಿ ಆಯ್ಕೆಗೊಂಡವರಿಗೆ ಅವಕಾಶ ಇಲ್ಲ. ಹಾಗೆಂದ ತಕ್ಷಣ ನಿಮಗೆ ಅರ್ಹತೆ ಇಲ್ಲ ಎಂಬ ಭಾವನೆ ಬೇಡ. ಮುಂದೆ ನಿಮಗೆ ಅವಕಾಶಗಳು ದೊರೆಯುತ್ತವೆ.

ಜಿಲ್ಲೆ, ಜಾತಿ, ಅನುಭವ ಆಧಾರದ ಮೇಲೆ ವರಿಷ್ಠರೇ ಸಚಿವರ ಪಟ್ಟಿಯನ್ನು ಸಿದ್ಧಗೊಳಿಸಲಿದ್ದಾರೆ. ಇದರಲ್ಲಿ ನನ್ನ ಪಾತ್ರವೂ ಇರುವುದಿಲ್ಲ.

ಮಂತ್ರಿಯಾಗಲು ಪಕ್ಷದ 136 ಶಾಸಕರಿಗೂ ಅರ್ಹತೆ ಇದೆ. ಆದರೆ, ಅವಕಾಶ ಇಲ್ಲ. ಸಂಪುಟದಲ್ಲಿ ಸ್ಥಾನ ದೊರೆಯದವರಿಗೆ ನಿಗಮ–ಮಂಡಳಿಗಳಲ್ಲಿ ಅವಕಾಶ ಮಾಡಿಕೊಡಲಾಗುವುದು. ಕೆಲವು ನಿಗಮಗಳು ಮಂತ್ರಿ ಪದವಿಗಿಂತ ಹೆಚ್ಚಿನ ಅಧಿಕಾರ ಹೊಂದಿವೆ

ಬಿಜೆಪಿ ನಿಮ್ಮ ಮತ ಕಸಿಯುವ ಷಡ್ಯಂತ್ರ ನಡೆಸಿದೆ...!



ಬೆಂಗಳೂರು, ಜೂ.17(ಕೆಎಂಶಿ)– ದೆಹಲಿ ಬಿಜೆಪಿ ನಾಯಕರ ರಾಜಕೀಯ ಷಡ್ಯಂತ್ರದಿಂದ ಎಚ್ಚೆತ್ತುಕೊಳ್ಳದಿದ್ದರೆ ಜೀವಮಾನದಲ್ಲೇ ವಿಧಾನ ಸಭೆ ಪ್ರವೇಶಿಸಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಕಾಂಗ್ರೆಸ್ ಶಾಸಕರಿಗೆ ಕಿವಿಮಾತು ಹೇಳಿದ್ದಾರೆ.

ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಕಳೆದ ಎರಡು ದಿನಗಳಿಂದ ಬಿಡದಿಯ ರೆಸಾರ್ಟ್ ಒಂದರಲ್ಲಿ ಬಿಡಾರ ಹೂಡಿರುವ ಪಕ್ಷದ ಶಾಸಕರನ್ನು ಎರಡು ಬಾರಿ ಉದ್ದೇಶಿಸಿ ಮಾತನಾಡಿರುವ ಮುಖ್ಯ ಮಂತ್ರಿ, ಕಾಂಗ್ರೆಸ್‌ನ ಪಾರಂಪರಿಕ ಮತ ಗಳನ್ನು ಕದಿಯಲು ಬಿಜೆಪಿ ಬೃಹತ್ ಯೋಜನೆಯನ್ನೇ ರೂಪಿಸಿದೆ ಎಂದರು.

ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ನೆಪದಲ್ಲಿ ನಿಮ್ಮ ಮತಗಳನ್ನು ಕಸಿಯಲು ಹೊರಟಿದೆ, ಇದನ್ನೇ ಮುಂದಿಟ್ಟುಕೊಂಡು ನನ್ನನ್ನೂ ಕನಕಪುರ ಕ್ಷೇತ್ರದಲ್ಲಿ ಸೋಲಿಸುವ ಹುನ್ನಾರ ನಡೆದಿದೆ. ನನಗೆ ಎಲ್ಲಾ ಮಾಹಿತಿ ತಿಳಿದಿದ್ದು, ನೀವು ನಿಮ್ಮ ಕ್ಷೇತ್ರಗಳಲ್ಲಿ ಬಿಡಾರ ಹೂಡಿ ಅಭಿವೃದ್ಧಿ ಜೊತೆಗೆ ನಿಮ್ಮ ಬೆಂಬಲಿತ ಮತಗಳನ್ನು ಉಳಿಸಿಕೊಳ್ಳಲು ಗಮನ ಕೊಡಿ. ಎಚ್ಚರ ತಪ್ಪಿದರೆ ನಿಮ್ಮ ಶಾಸಕ ಸ್ಥಾನ ಇಲ್ಲಿಗೇ ಕೊನೆಯಾಗುತ್ತದೆ. ಕೇಂದ್ರ ಸರ್ಕಾರ ಮತ ಕದಿಯಲು ದೊಡ್ಡ ಹುನ್ನಾರ ನಡೆಸಿದೆ.

ಕೇಂದ್ರದ ಇಂತಹ ಕೃತ್ಯಗಳನ್ನು ತಲೆಕೆಳಗೆ ಮಾಡಲು ನಾವೂ ಪರ್ಯಾಯ ಮಾರ್ಗಗಳನ್ನು ಕಂಡುಕೊಂಡಿದ್ದೇವೆ. ಸರ್ಕಾರದ ಜೊತೆ ನೀವು ಕೈಜೋಡಿಸಿ ಕ್ಷೇತ್ರದಲ್ಲಿ ಕೆಲಸ ಮಾಡಿದರೆ, ನಮ್ಮ ಬೆಂಬಲಿತ ಮತಗಳನ್ನು ಉಳಿಸಿಕೊಳ್ಳಲು ಸಾಧ್ಯ. ನಾನು ಎರಡು–ಮೂರು ಬಾರಿ ಗೆದ್ದಿದ್ದೇನೆ. ಮುಂದೆಯೂ ಇದೇ ಭಾವನೆ ತಪ್ಪು ಎಂದಿದ್ದಾರೆ.

ಮೋದಿ ನೋಡೋಕೆ ಒಳ್ಳೇ ವ್ಯಕ್ತಿ, ಆದ್ರೆ ಕಿಲ್ಲರ್



ಫ್ರಾನ್ಸ್: ಫ್ರಾನ್ಸ್‌ನಲ್ಲಿ ನಡೆದ ಜಿ7 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಡಿ ಹೊಗಳಿದ್ದಾರೆ. ವಿಶ್ವ ನಾಯಕರು ಭಾಗವಹಿಸಿದ್ದ ಭೋಜನಕೂಟದಲ್ಲಿ ಮಾತನಾಡುತ್ತಾ, ನರೇಂದ್ರ ಮೋದಿ ನೋಡಲು ಶಾಂತ, ಒಳ್ಳೇ ವ್ಯಕ್ತಿಯಂತೆ ಕಾಣುತ್ತಾರೆ ಆದರೆ ಸಂಪೂರ್ಣ ಕಿಲ್ಲರ್ ಅವರು ಎಂದು ಟ್ರಂಪ್ ಬಣ್ಣಿಸಿದ್ದಾರೆ. ಜಿ7 ಶೃಂಗಸಭೆಯ ಸಂದರ್ಭದಲ್ಲಿ ನಡೆದ ಸಂವಾದದ ಸಂದರ್ಭದಲ್ಲಿ ಈ ಹೇಳಿಕೆಗಳು ಬಂದವು, ಅಲ್ಲಿ ಪ್ರಧಾನಿ

■ 6ನೇ ಪುಟಕ್ಕೆ

24 ಗಂಟೆಯಲ್ಲಿ 11 ರೋಗಿಗಳ ಸಾವು; ಮೈಸೂರು ಜಯದೇವ ಆಸ್ಪತ್ರೆಗೆ

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ ಭೇಟಿ

ಸರ್ಕಾರಕ್ಕೆ ವರದಿ ನೀಡಲು ಸೂಚನೆ

ಮೈಸೂರು, ಜೂ.17(ಪಿಎಂ)– ಮೈಸೂರು ಜಯದೇವ ಆಸ್ಪತ್ರೆಯಲ್ಲಿ 24 ಗಂಟೆಯಲ್ಲಿ 11 ರೋಗಿಗಳ ಸಾವು ಸಂಬಂಧ ಅನಲೈಸ್ ಮಾಡಲು ನಿರ್ದೇಶನ ನೀಡಿದ್ದೇನೆ. ಈ ಸಾವು ಪ್ರಕರಣಗಳ ಸಂಬಂಧ ವೈದ್ಯರ ಜೊತೆಗೆ ಚರ್ಚೆ ಮಾಡಿದ್ದು, ಇದರಲ್ಲಿ ಕೆಲವರು ಗಂಭೀರ ಸ್ಥಿತಿಯಲ್ಲಿ ಅಡ್ಮಿಟ್ ಆಗಿದ್ದಾರೆ. ಆದರೂ ಈ ಸಂಬಂಧ ಇಲ್ಲಿಯ ವೈದ್ಯರಿಗೆ ಕಮಿಟಿ ಮೂಲಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚನೆ ನೀಡಿದ್ದೇನೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ ಹೇಳಿದರು.

ಸಾಮಾಜಿಕ ಜಾಲತಾಣದಲ್ಲಿ ಜಯದೇವದಲ್ಲಿ 24 ಗಂಟೆಯಲ್ಲಿ 11 ಮಂದಿ ಸಾವಿಗೀಡಾಗಿದ್ದಾರೆ. ಇದಕ್ಕೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂಬ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಜಯದೇವ ಆಸ್ಪತ್ರೆಗೆ ಬುಧವಾರ ಭೇಟಿ ನೀಡಿ, ವೈದ್ಯರಿಂದ ಮಾಹಿತಿ ಪಡೆದು ಬಳಿಕ ಇಲ್ಲಿನ ಬೋರ್ಡ್ ರೂಮ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಆಸ್ಪತ್ರೆಯಲ್ಲಿನ ಯಾವುದೇ ಮರಣ ಸಂಬಂಧ ವೈದ್ಯರು ಚರ್ಚೆ ನಡೆಸಿ ಈ ಸಾವು ಏಕೆ ಸಂಭವಿಸಿತು. ಸಾವು ತಡೆಗಟ್ಟಬಹುದಿತ್ತ ಎನ್ನುವ ನಿಟ್ಟಿನಲ್ಲಿ ಅನಲೈಸ್ (ವಿಶ್ಲೇಷಣೆ) ಮಾಡಬೇಕು. ಜೊತೆಗೆ ಸುಧಾರಣಾ ಕ್ರಮಗಳ ಬಗ್ಗೆ ಅವಲೋಕಿಸಬೇಕು ಎಂದೂ ನಿರ್ದೇಶನ ನೀಡಿದ್ದೇನೆ ಎಂದು ತಿಳಿಸಿದರು.

ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ 24 ಗಂಟೆಯಲ್ಲಿ 11 ಸಾವು ಸಂಭವಿಸಿದೆ ಎಂಬ ಸುದ್ದಿ ಎಲ್ಲೆಡೆ ಹರಡಿರುವ ಕಾರಣ ವಸ್ತು ಸ್ಥಿತಿ ಬಗ್ಗೆ ಪರಿಶೀಲನೆ ಮಾಡಲು ಇಂದು ಇಲ್ಲಿಗೆ ಭೇಟಿ ನೀಡಿದ್ದೇನೆ. ದೇಶದ ಮಟ್ಟದಲ್ಲಿ ಕಾರ್ಡಿಯಾಕ್ ಕೇರ್‌ನಲ್ಲಿ ತಿಂಗಳು ಅವಧಿಯ ಮರಣದ ಸರಾಸರಿ ನೋಡಿದರೆ ಶೇ.9 ರಿಂದ 11ರಷ್ಟು ಇದೆ.

■ 6ನೇ ಪುಟಕ್ಕೆ



ಮೈಸೂರಿನ ಜಯದೇವ ಆಸ್ಪತ್ರೆಗೆ ಬುಧವಾರ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ ಭೇಟಿ ನೀಡಿ ಪರಿಶೀಲಿಸಿದರು.

> ಇಲ್ಲಿ ಯಾವುದೇ ಅಸಾಧಾರಣ ಸಾವು ಸಂಭವಿಸಿಲ್ಲ. ಹಾಗಾಗಿ ರಾಜ್ಯದ ಜನತೆ ಈ ಬಗ್ಗೆ ಭಯಭೀತರಾಗುವುದು ಬೇಡ. ಆಸ್ಪತ್ರೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಉತ್ತಮ ಚಿಕಿತ್ಸೆ ದೊರೆಯುತ್ತಿದೆ. ಯಾವುದೋ ಒಂದು ನಿರ್ಲಕ್ಷ್ಯದ ಕಾರಣಕ್ಕೆ ಇಲ್ಲಿ ಸಾವುಗಳು ಆಗಿಲ್ಲ. ಗಂಭೀರ ಸ್ಥಿತಿಯಲ್ಲಿಯೂ ರೋಗಿಗಳು ಬಂದಿರುವ ಸಾಧ್ಯತೆ ಇರುತ್ತದೆ. ರೋಗಿಗಳ ಆರೈಕೆಯಲ್ಲಿ ಯಾವುದೇ ಲೋಪ ಆಗುತ್ತಿಲ್ಲ ಎಂಬುದು ನನ್ನ ಗಮನಕ್ಕೆ ಬಂದಿದೆ.
>
> –ಡಾ.ಶರಣಪ್ರಕಾಶ್ ಆರ್.ಪಾಟೀಲ

ಕೊಡಗು ಜಿಲ್ಲೆಯಲ್ಲೂ ಜಯದೇವ ಆಸ್ಪತ್ರೆ

ಕೊಡಗು ಜಿಲ್ಲೆಯಲ್ಲಿ ಸಹ ಜಯದೇವ ಆಸ್ಪತ್ರೆ ಆರಂಭಿಸಲಾಗುವುದು ಎಂದು ಡಾ.ಶರಣಪ್ರಕಾಶ್ ಆರ್.ಪಾಟೀಲ ತಿಳಿಸಿದರು. ಈಗ ಕಲಬುರಗಿಯಲ್ಲಿ ಜಯದೇವ ಆಸ್ಪತ್ರೆ ಆರಂಭಿಸಲಾಗಿದೆ. 371 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆ ಅದು. ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಆಗಸ್ಟ್‌ನಲ್ಲಿ ಹುಬ್ಬಳ್ಳಿಯಲ್ಲಿ 400 ಹಾಸಿಗೆಗಳ ಜಯದೇವ ಆಸ್ಪತ್ರೆ ಉದ್ಘಾಟನೆಯಾಗಲಿದೆ. ಬೀದರ್‌ನಲ್ಲಿ ಕ್ಯಾತಲ್ಯಾಬ್ ಮಾಡಲಾಗಿದೆ.

ಮೈಸೂರು ಜಯದೇವ ಆಸ್ಪತ್ರೆ 400 ಹಾಸಿಗೆಗಳ ಸಾಮರ್ಥ್ಯವನ್ನು ಸದ್ಯ ಹೊಂದಿದ್ದು, ಈಗ ಹೆಚ್ಚುವರಿಯಾಗಿ 200 ಹಾಸಿಗೆಗಳ ಸೌಲಭ್ಯ ಕಲ್ಪಿಸಲಾಗುತ್ತಿದೆ. 180 ಕೋಟಿ ವೆಚ್ಚದ ಈ ಯೋಜನೆಯು ಈಗಾಗಲೇ ಟೆಂಡರ್ ಹಂತಕ್ಕೆ ತಲುಪಿದೆ.

■ 6ನೇ ಪುಟಕ್ಕೆ

ಮೈಸೂರು ಪೇಂಟ್ಸ್ ಗುತ್ತಿಗೆ ಕಾರ್ಮಿಕರಿಂದ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ ಕಾರ್ಖಾನೆ ಎದುರು ಎಐಯುಟಿಯುಸಿ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.17 (ಎಂಕೆ)– ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್‌ನಲ್ಲಿ ಕಳೆದ 25 ವರ್ಷಗಳಿಂದ ದುಡಿದ ಗುತ್ತಿಗೆ ಕಾರ್ಮಿಕರ ಕೆಲಸದಿಂದ ತೆಗೆದದ್ದು ಹಾಗೂ ಬಾಕಿ ಬೋನಸ್ ಪ್ರಕರಣ ಇತ್ಯರ್ಥವಾಗುವ ಮುನ್ನವೇ ಹೊಸ ಗುತ್ತಿಗೆ ಕಾರ್ಮಿಕರ ನೇಮಕ ಖಂಡಿಸಿ ಮೈಸೂರು ಡಿವಿಜನ್ ಯುನೈಟೆಡ್ ಇಂಡಸ್ಟ್ರಿಯಲ್ ವರ್ಕರ್ಸ್ ಯೂನಿಯನ್ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಬನ್ನಿಮಂಟಪದಲ್ಲಿರುವ ಮೈಲ್ಯಾಕ್ ಕಾರ್ಖಾನೆ ಮುಂಭಾಗ ಜಮಾವಣೆಗೊಂಡ ಯೂನಿಯನ್ ಕಾರ್ಯಕರ್ತರು, ಮೈಲ್ಯಾಕ್ ಆಡಳಿತ ಮಂಡಳಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಶ್ರೀ ನಿಮಿಷಾಂಬಾ ಸೆಕ್ಯೂರಿಟಿ ಬ್ಯೂರೋ ಅಂಡ್ ಯುಟಿಲಿಟಿ ಸರ್ವೀಸಸ್ ಮೂಲಕ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ 32 ಕಾರ್ಮಿಕರ ಕೆಲಸದಿಂದ ಕೈಬಿಟ್ಟ ನಿರ್ಧಾರ ಕೂಡಲೇ ಹಿಂಪಡೆದು ಅವರಿಗೆ ಕೆಲಸ ನೀಡಬೇಕು ಎಂದು ಆಗ್ರಹಿಸಿದರು.

ಗುತ್ತಿಗೆ ಕಾರ್ಮಿಕರಿಗೆ ಕಳೆದ 18 ವರ್ಷಗಳಿಂದ ಕಾನೂನುಬದ್ಧವಾಗಿ ನೀಡಬೇಕಾದ ಬೋನಸ್ ನೀಡಿಲ್ಲ ಎಂಬ ಆರೋಪದ ಜೊತೆಗೆ ವೇತನ ಸಮಾನತೆ, ಸೇವಾ ಭದ್ರತೆ ಹಾಗೂ ಇತರೆ ಕೈಗಾರಿಕಾ ವಿವಾದಗಳು ಕಾರ್ಮಿಕ ಇಲಾಖೆ ಮತ್ತು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿವೆ. ಪ್ರಕರಣಗಳು ಇತ್ಯರ್ಥವಾಗುವ ಮುನ್ನವೆ ಹೊಸದಾಗಿ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಂಡಿದ್ದು, ಅದರಲ್ಲಿಯೂ ಕೆಲಸ ಖಾಲಿ ಇಲ್ಲ ಎಂದೇಳಿ ಯಾವುದೇ ಲಿಖಿತ ನೋಟಿಸ್ ಅಥವಾ ಆದೇಶ ಹೊರಡಿಸದೆ 14 ಜನರ ಕೈಬಿಡಲಾಗಿದೆ.

ಮೈಲ್ಯಾಕ್‌ಗೆ ಸಂಬಂಧಪಟ್ಟ ಮೇಲಾಧಿಕಾರಿಗಳು ಹಾಗೂ ಸಚಿವರು ಕೂಡಲೇ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು. ಎಲ್ಲಾ ಕಾರ್ಮಿಕರನ್ನು ತಕ್ಷಣ ಕೆಲಸಕ್ಕೆ ಮರು ನೇಮಕ ಮಾಡಿಕೊಳ್ಳಬೇಕು. ಬಾಕಿ ವೇತನ ಪಾವತಿಸಬೇಕು. ಸೇವಾ ಖಾತರಿ ನೀಡಬೇಕು. ಕಳೆದ ಎಲ್ಲಾ ವರ್ಷಗಳ ಬಾಕಿ ಬೋನಸ್ ಪಾವತಿಸಬೇಕು. ಹಾಗೆಯೇ ಕಾರ್ಮಿಕರ ವಿರುದ್ಧದ ಪ್ರತೀಕಾರ ಕ್ರಮವನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು. ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್‌ನ ಚಂದ್ರಶೇಖರ್ ಮೇಟಿ, ಉಗ್ರನರಸಿಂಹೇಗೌಡ, ಯಶೋಧರ, ಮುದ್ದುಕೃಷ್ಣ, ಸಂಧ್ಯಾ ಮತ್ತಿತರರು ಉಪಸ್ಥಿತರಿದ್ದರು.

ರೈಲ್ವೆ ಹಳಿಗಳ ಪಕ್ಕದ ಮರಗಳ ಹನನ ಖಂಡಿಸಿ ಪರಿಸರವಾದಿಗಳ ಪ್ರತಿಭಟನೆ

ಸಂಬಂಧಿಸಿದ ರೈಲ್ವೆ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ



ಮೈಸೂರಿನ ಕುಕ್ಕರಹಳ್ಳಿ ಕೆರೆ ಬಳಿ ರೈಲ್ವೆ ಹಳಿ ಪಕ್ಕ ಮರ ತೆರವು ಮಾಡಿದ್ದ ಸ್ಥಳದಲ್ಲಿ ಪರಿಸರವಾದಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ಜೂ.17(ಎಂಟಿವೈ)– ಮೈಸೂರಿನ ಕುಕ್ಕರಹಳ್ಳಿ ಕೆರೆ ಬಳಿ ಮೈಸೂರು–ಚಾಮರಾಜನಗರ ರೈಲ್ವೆ ಹಳಿ ಪಕ್ಕದಲ್ಲಿದ್ದ ಮರಗಳನ್ನು ಕಡಿದಿರುವ ರೈಲ್ವೆ ಇಲಾಖೆ ವಿರುದ್ಧ ಪರಿಸರವಾದಿಗಳು ಪ್ರತಿಭಟನೆ ನಡೆಸಿದರು.

ರೈಲ್ವೆ ಲೆವೆಲ್ ಕ್ರಾಸಿಂಗ್‌ನಲ್ಲಿ 'ಪರಿಸರಕ್ಕಾಗಿ ನಾವು' ಸಂಘಟನೆ ಸದಸ್ಯರು, ಪರಿಸರವಾದಿಗಳು ರೈಲ್ವೆ ಹಳಿ ಪಕ್ಕ ಮರಗಳನ್ನು ಧರೆಗುರುಳಿಸಿರುವುದನ್ನು ಪರಿಶೀಲಿಸಿದ ಬಳಿಕ ಪ್ರತಿಭಟನೆಗಿಳಿದರು.

ರೈಲ್ವೆ ಹಳಿ ಪಕ್ಕ 15 ರಿಂದ 40 ವರ್ಷದ ಹಲವು ಮರಗಳನ್ನು ವಿನಾಕಾರಣ ಕಡಿಯಲಾಗಿದೆ. ರೈಲುಗಳ ಸುಗಮ ಸಂಚಾರ ಮತ್ತು ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಹಳಿ ಪಕ್ಕದಲ್ಲಿರುವ ಮರಗಳ ಕೊಂಬೆ ಹಾಗೂ ವಿದ್ಯುತ್ ತಂತಿಗಳ ಮೇಲೆ ಬೀಳುವ ಒಣಗಿದ ಮರಗಳನ್ನು ಅರಣ್ಯ ಇಲಾಖೆ ಅನುಮತಿ ಪಡೆದು ಕಡಿಯಬಹುದು. ಆದರೆ ಹಳಿಗಳಿಂದ ದೂರವೇ ಇರುವ ಬೃಹತ್ ಆರೋಗ್ಯಕರ ಮರಗಳನ್ನು ಅರಣ್ಯ ಇಲಾಖೆಯ ಅನುಮತಿ ಪಡೆಯದೆ ಕಡಿದುರುಳಿಸಿದೆ. ಇದು ರೈಲ್ವೆ ಇಲಾಖೆಯ ಬೇಜವಾಬ್ದಾರಿಯ ಮತ್ತು ಕಾನೂನು ಬಾಹಿರ ಕೆಲಸವಾಗಿದೆ. ಇದಕ್ಕೆ ಕಾರಣರಾದ ರೈಲ್ವೆ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ, ಅರಣ್ಯ ಇಲಾಖೆಯು ವೃಕ್ಷ ಸಂರಕ್ಷಣಾ ಕಾಯ್ದೆ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪರಿಸರವಾದಿಗಳು ಆಗ್ರಹಿಸಿದರು.

ಇಂತಹ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಇಲಾಖಾ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ವಿಭಾಗೀಯ ರೈಲ್ವೆ ವ್ಯವಸ್ಥಾಪಕರು ಮುಂದಾಗಬೇಕು ಎಂದು ಮನವಿ ಮಾಡಿದರು. ಈಗಾಗಲೇ ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ವೈಪರೀತ್ಯದ ಭೀಕರ ಪರಿಣಾಮ ಮನುಷ್ಯ ಸೇರಿದಂತೆ ಸಕಲ ಜೀವಸಂಕುಲವನ್ನು ತೀವ್ರವಾಗಿ ಕಾಡುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರತಿಯೊಂದು ಗಿಡ–ಮರ ಸಂರಕ್ಷಿಸಬೇಕಾದ ಅನಿವಾರ್ಯತೆ ಇದೆ. ಹೆಚ್ಚು ಹೆಚ್ಚು ಗಿಡ ನೆಟ್ಟು ಬೆಳೆಸಬೇಕಾದ ತುರ್ತು ಪರಿಸ್ಥಿತಿ ಇದೆ. ಸಂವಿಧಾನದ ಆರ್ಟಿಕಲ್ 51 ಎ(ಜಿ) ಪ್ರಕಾರ, ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯವೂ ಕೂಡ. ರೈಲ್ವೆ ಇಲಾಖೆಯು ಇದನ್ನು ಅರಿತು ಕರ್ತವ್ಯ ನಿರ್ವಹಿಸಲಿ ಎಂದು ಪರಿಸರವಾದಿಗಳು ಆಶಿಸಿದರು.

ಈ ವೇಳೆ 'ಪರಿಸರಕ್ಕಾಗಿ ನಾವು' ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ, ಸದಸ್ಯರಾದ ಪ್ರೊ.ಕಾಳಚನ್ನೇಗೌಡ, ಲೀಲಾ ಶಿವಕುಮಾರ್, ಪ್ರೊ.ಶ್ಯಾಮಲಾ, ವಿಶ್ವನಾಥ್, ಬಾನು ಪ್ರಶಾಂತ್, ಸುಧೀರ್ ಗಣಪತಿ, ಅಕ್ಬರ್, ಗುರುಸ್ವಾಮಿ, ಕೃಷ್ಣ, ಗಣೇಶ್, ಓಂ ಶಿವ ಚರಣ್, ಸಾರ್ಥಕ್, ಮಹಾಂತೇಶ್ ಇದ್ದರು.

ಅರಣ್ಯ ಇಲಾಖೆಯಿಂದ ಪರಿಶೀಲನೆ

ಪರಿಸರವಾದಿಗಳು ದೂರು ನೀಡಿದ್ದರಿಂದ ಡಿಆರ್‌ಎಫ್‌ಓ ಸಂಜೀವ್ ಕೆ. ಪಾಟೀಲ ಹಾಗೂ ಅರಣ್ಯ ಗಸ್ತು ಸಿಬ್ಬಂದಿ ನಾಗರಾಜ ಅವರು ಸ್ಥಳಕ್ಕೆ ಬಂದು ಕಡಿದಿದ್ದ ಮರ ಹಾಗೂ ತೆರವುಗೊಳಿಸಿದ್ದ ಮರಗಳ ಕೊಂಬೆಗಳನ್ನು ಪರಿಶೀಲಿಸಿ, ದಾಖಲೆಯಲ್ಲಿ ನಮೂದಿಸಿಕೊಂಡರು.

ಕಾವೇರಿ ನದಿ ರಕ್ಷಣಾ ಸಮಿತಿ ಸದಸ್ಯರಿಂದ ದೇವೇಗೌಡರ ಭೇಟಿ


ಕಾವೇರಿ ನದಿ ನೀರು ಹಂಚಿಕೆ ತೀರ್ಪಿನ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಕೆಯಾಗಿರುವ ರಿಟ್ ಅರ್ಜಿಯು ವಿಚಾರಣೆಗೆ ಲಿಸ್ಟ್ ಆಗಿರುವ ಹಿನ್ನೆಲೆಯಲ್ಲಿ ಈ ಅರ್ಜಿ ಮುಂದಿನ ತಿಂಗಳು ವಿಚಾರಣೆಗೆ ಬರಲಿದೆ. ಈ ಸಂಬಂಧ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು, ಕಾವೇರಿ ನದಿ ರಕ್ಷಣಾ ಸಮಿತಿ ಸದಸ್ಯರು ಭೇಟಿ ಮಾಡಿ, ಚರ್ಚಿಸಿದ್ದಾರೆ. ಈ ವೇಳೆ ಸಮಿತಿ ಅಧ್ಯಕ್ಷ ಹೆಚ್.ಕೆ.ರಾಮು, ಸುಪ್ರೀಂ ಕೋರ್ಟ್ ಹಿರಿಯ ವಕೀಲ ಬ್ರಿಜೇಶ್ ಕಾಳಪ್ಪ, ನೀರಾವರಿ ತಜ್ಞ, ಮಾಜಿ ಮುಖ್ಯಮಂತ್ರಿಗಳ ಸಲಹೆಗಾರರೂ ಆದ ನಿವೃತ್ತ ಅಧೀನ ಕಾರ್ಯದರ್ಶಿ ಕೆ.ಟಿ.ರಾಮು, ಸಮಿತಿಯ ಹಿರಿಯ ಉಪಾಧ್ಯಕ್ಷ ಲಗ್ಗೆರೆ ಅಂದಾನಪ್ಪ ಉಪಸ್ಥಿತರಿದ್ದರು.

ಪಿಹೆಚ್.ಡಿ ಪದವಿ


ಮೈಸೂರು, ಜೂ.17– ಡಾ.ನಾಗೇಂದ್ರ ಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಶಿವಸ್ವಾಮಿ ಎಂ.ಬಿ. ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ, ಸಾದರಪಡಿಸಿದ ಮಹಾ ಪ್ರಬಂಧವನ್ನು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

'ಆರೋಗ್ಯಕರ ವಯೋವೃದ್ಧಿಗಾಗಿ ಯೋಗ' ರಾಷ್ಟ್ರೀಯ ವಿಚಾರ ಸಂಕಿರಣ


ಮೈಸೂರಿನ ಬೃಂದಾವನ ಬಡಾವಣೆಯಲ್ಲಿರುವ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಸಭಾಂಗಣದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ 'ಆರೋಗ್ಯಕರ ವಯೋವೃದ್ಧಿಗಾಗಿ ಯೋಗ' ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು.

ಮೈಸೂರು,ಜೂ.17(ಎಂಕೆ)–ಮೈಸೂರಿನ ಬೃಂದಾವನ ಬಡಾವಣೆಯಲ್ಲಿರುವ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಸಭಾಂಗಣದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ 'ಆರೋಗ್ಯಕರ ವಯೋವೃದ್ಧಿಗಾಗಿ ಯೋಗ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು.

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ.ರೇಣುಕಾದೇವಿ, ಶಿಸ್ತು ವಿಕಾಸಕ್ಕೆ ಹಾಗೂ ಆರೋಗ್ಯಕರ ಜೀವನಶೈಲಿಗೆ ಯೋಗ ಸಹಕಾರಿ. ಪ್ರತಿದಿನ ಯೋಗಾಸನ ಮತ್ತು ಪ್ರಾಣಾಯಾಮ ಮಾಡುವುದರಿಂದ ಆತ್ಮ ವಿಶ್ವಾಸ ವೃದ್ಧಿಸಲಿದೆ. ತಂತ್ರ ಜ್ಞಾನದ ಯುಗದಲ್ಲಿ ಯೋಗ ಮತ್ತು ಧ್ಯಾನದಂತಹ ಅಭ್ಯಾಸದಿಂದ ಮನಶಾಂತಿ ಜೊತೆಗೆ ಸಮತೋಲನದ ಜೀವನಕ್ಕೆ ಸಹಕಾರಿ ಎಂದರು.

ಹಿಂದೆಲ್ಲಾ ಒತ್ತಡ ಎಂಬುದನ್ನು ವಿಜ್ಞಾನದ ಪುಸ್ತಕದಲ್ಲಷ್ಟೆ ಓದುತ್ತಿದ್ದೆವು. ಈಗ ಎಲ್ಲರ ಮಾತುಗಳಲ್ಲೂ ಆ ಪದ ಕೇಳಿಬರುತ್ತಿದೆ. ಹೀಗಾಗಿ, ಇಂದಿನ ಒತ್ತಡದ ಜೀವನದಲ್ಲಿ ಯುವಜನರಿಗೆ ಮಾರ್ಗದರ್ಶನದ ಅಗತ್ಯವಿದೆ. ನಿಯಮಿತ ಯೋಗಾಭ್ಯಾಸವು ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಹಕಾರಿಯಾಗಲಿದೆ. ಆದ್ದರಿಂದ ಯುವ ಮನಸ್ಸುಗಳಿಗೆ ಯೋಗದಂತಹ ಪಾರಂಪರಿಕ ಜ್ಞಾನವನ್ನು ತಿಳಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಸಂಪತ್ತಿನ ಬೆನ್ನು ಹತ್ತಿರುವ ಮನುಷ್ಯ ಹಲವು ದೌರ್ಬಲ್ಯಗಳಿಂದ ಬಳಲುತ್ತಿದ್ದು, ಮಾನಸಿಕ ಹಾಗೂ ದೈಹಿಕ ಆರೋಗ್ಯ ಕೆಡಿಸಿಕೊಂಡು ಉತ್ತಮ ಆರೋಗ್ಯವೇ ದೊಡ್ಡ ಸಂಪತ್ತು ಎಂಬುದನ್ನು ಮರೆತಿದ್ದಾನೆ. ರೋಗ ಮುಕ್ತ ಜೀವನವೇ ಸಾಧನೆಗೆ ಪ್ರೇರಣೆ. ಹಾಗಾಗಿ, ಆರೋಗ್ಯದ ಕಡೆಗೆ ಹೆಚ್ಚು ಒತ್ತು ನೀಡಬೇಕು. ಅದಕ್ಕಾಗಿ, ಪ್ರತಿದಿನವೂ ಯೋಗ ಮಾಡಬೇಕು ಎಂದು ಸಲಹೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಂಶುಪಾಲ ಡಾ.ಶ್ರೀವತ್ಸ ಮಾತನಾಡಿ, ವಿವಿಧ ಯೋಗದ ಆಸನಗಳು ಮತ್ತು ಪ್ರಾಣಾಯಾಮ ಮಾಡುವುದರಿಂದ ಮನುಷ್ಯನ ಆಯಸ್ಸು ವೃದ್ಧಿಯಾಗಲಿದೆ. ಭೂಮಿಯ ಮೇಲೆ ದೀರ್ಘಕಾಲ ಬದುಕುವ ಆಮೆ ಮತ್ತು ಆನೆಗಳಲ್ಲಿ ಉಸಿರಾಟದ ಕ್ರಿಯೆ ಉತ್ತಮವಾಗಿರುವುದರಿಂದಲೇ ಆ ಪ್ರಾಣಿಗಳ ಆಯುಸ್ಸು ಜಾಸ್ತಿ. ಆದ್ದರಿಂದ ಮನುಷ್ಯರಲ್ಲೂ ಉಸಿರಾಟದ ಕ್ರಿಯೆ ಉತ್ತಮವಾಗಬೇಕಾದರೆ ಯೋಗಾಭ್ಯಾಸ ಮಾಡಬೇಕು. ಹಾಗೆಯೇ ದೇಶದಲ್ಲಿಯೇ ಸರ್ಕಾರಿ ಯೋಗ ವೈದ್ಯಕೀಯ ಕಾಲೇಜು ಇರುವುದು ಮೈಸೂರಿನಲ್ಲಿ ಮಾತ್ರ. ವಿದ್ಯಾರ್ಥಿಗಳು ಇಲ್ಲಿ ನೀಡುವ ಶಿಕ್ಷಣವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮಹಾರಾಜ ಆಯುರ್ವೇದ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಆಸ್ಪತ್ರೆಯ ಪ್ರಾಂಶುಪಾಲ ಡಾ.ಎನ್.ವಿ. ಕೃಷ್ಣಮೂರ್ತಿ, ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಆಸ್ಪತ್ರೆ ಪ್ರಾಂಶುಪಾಲ ಡಾ.ಕೆ.ವಿ.ವೆಂಕಟಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಆರ್‌ಎಂಒ ಡಾ.ಡಿ.ಎಸ್.ಭಾರತೀಶ್, ಡಾ.ಗಗನ ಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು.

ನಾಮಫಲಕ ತೆರವು....




ಮೈಸೂರಿನ ಚಾಮರಾಜ ಕ್ಷೇತ್ರದ ವಾರ್ಡ್ ನಂ.21ರ ವ್ಯಾಪ್ತಿಯ ಸರಸ್ವತಿಪುರಂ ಪೊಲೀಸ್ ಠಾಣೆ ಎದುರಿರುವ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಸೌಹಾರ್ದ ಬಾಲಕಿಯರ ವಿದ್ಯಾರ್ಥಿನಿಲಯದ ನಾಮಫಲಕಕ್ಕೆ ಅಡ್ಡಲಾಗಿ ಅಳವಡಿಸಿದ್ದ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ವಿದ್ಯಾರ್ಥಿನಿಲಯದ ನಾಮಫಲಕ ತೆರವುಗೊಳಿಸಲಾಯಿತು. ಈ ವೇಳೆ ಮಾಜಿ ಸಂಸದ ಪ್ರತಾಪ್‌ಸಿಂಹ, ಮುಖಂಡರಾದ ದಿನೇಶ್‌ಗೌಡ, ಮಹೇಶ್, ಸುರೇಶ್, ಶ್ರೀನಿವಾಸ್, ಹರೀಶ್, ನಾಗೇಗೌಡ, ಕಾರ್ತಿಕ್, ಲಕ್ಷ್ಮೀಶ್, ರಾಜು ನಾಯಕ್ ಇನ್ನಿತರರಿದ್ದರು.

ಜೂ.21ಕ್ಕೆ ಮಧುಮೇಹ ಕುರಿತ ಕೃತಿ ಲೋಕಾರ್ಪಣೆ

ಮೈಸೂರು,ಜೂ.17(ಎಂಕೆ)– ಮೈಸೂರಿನ ಕುವೆಂಪುನಗರದಲ್ಲಿರುವ ಗಾನ ಭಾರತೀ ಸಭಾಂಗಣದಲ್ಲಿ ಜೂ.21 ರಂದು ಬೆಳಗ್ಗೆ 10.30ಕ್ಕೆ ಮಧುಮೇಹ ತಜ್ಞರಾದ ಡಾ.ವಿ.ಲಕ್ಷ್ಮಿನಾರಾಯಣ್ ಹಾಗೂ ಡಾ.ಸೂರಜ್ ತೇಜಸ್ವಿ ರಚಿತ 'ಮಧುಮೇಹ ಮನುಕುಲದ ಅಗೋಚರ ಶತ್ರು' ಕೃತಿ ಲೋಕಾರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕೃತಿ ಲೋಕಾರ್ಪಣೆ ಮಾಡಲಿದ್ದು, ಶಾಸಕ ಟಿ.ಎಸ್.ಶ್ರೀವತ್ಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತಿ ಡಾ.ಪ್ರಧಾನ್ ಗುರುದತ್ ಕೃತಿ ಕುರಿತು ಮಾತನಾಡಲಿದ್ದು, ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ, ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಸ್ಥೆಯ ಡಾ.ಹೆಚ್.ಬಸವನಗೌಡ, ಹಿರಿಯ ಪತ್ರಕರ್ತ ರವೀಂದ್ರ ಭಟ್ಟ, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ, ಚುಟುಕು ಸಾಹಿತಿ ಎಂಜಿಆರ್ ಅರಸ್ ಹಾಗೂ ಸಪ್ನ ಬುಕ್ ಹೌಸ್ ಮುಖ್ಯಸ್ಥ ಆರ್.ದೊಡ್ಡೇಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ


ಮೈಸೂರು,ಜೂ.17–ವಿವಿ ಮೊಹಲ್ಲಾ ವಿಭಾಗದ ವ್ಯಾಪ್ತಿಯಲ್ಲಿ ನಿರ್ವಹಣಾ ಕೆಲಸದ ನಿಮಿತ್ತ ಜೂ.18 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಜಯಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ವರಾರ್ಕಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಗೋಪಾಲಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಉದ್ಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಧನಗಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಹಾರೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಗೋಕುಲಂ 1ನೇ ಮತ್ತು 2ನೇ ಹಂತ, ಮಹದೇಶ್ವರ ಬಡಾವಣೆ, ವಿಜಯನಗರ 1ನೇ ಮತ್ತು 2ನೇ ಹಂತ, ಹಿನಕಲ್, ಯಾದವಗಿರಿ, ಮಂಜುನಾಥಪುರ, ಮಹಾಜನ ಲೇಔಟ್, ಒಂಟಿಕೊಪ್ಪಲ್, ಗೋಕುಲಂ 3ನೇ ಹಂತ, ಜಯಲಕ್ಷ್ಮಿಪುರಂ, ಆಕಾಶವಾಣಿ, ಇ.ಎಸ್.ಐ ಆಸ್ಪತ್ರೆ, ಹಸುಕರು ಪಾರ್ಕ್, ಗೋಕುಲಂ ಪಾರ್ಕ್, ಕಾಳಿದಾಸ ರೋಡ್, ಯಾದವಗಿರಿ ಕೈಗಾರಿಕಾ ಪ್ರದೇಶ, ವಿಜಯನಗರ ವಾಟರ್ ಸಪ್ಲೈ, ಆದಿಪಂಪಾ ರಸ್ತೆ, ಜನರಲ್ ತಿಮ್ಮಯ್ಯರಸ್ತೆ, ಬೃಂದಾವನ ಬಡಾವಣೆ, ಯೋಗನರಸಿಂಹಸ್ವಾಮಿ ದೇವಸ್ಥಾನ, ಆಯಿಸ್ಬಾರ್ ಬೇ, ಸಿ.ಎಸ್.ಆರ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಶ್ರೀರಾಂಪುರ 2ನೇ ಹಂತ, ರಮಾಭಾಯಿ ನಗರ, ಮಹದೇವಪುರ, ಜಯನಗರ 1ರಿಂದ 20ನೇ ಕ್ರಾಸ್, ಪರಸಯ್ಯನಹುಂಡಿ, ಶಿವಪುರ, ಕುವೆಂಪುನಗರ ಕೆ ಬ್ಲಾಕ್, ಅಪೋಲೊ ಆಸ್ಪತ್ರೆಯ ಸುತ್ತಮುತ್ತಲಿನ ಪ್ರದೇಶಗಳು. ಚಿಕ್ಕಹರದನಹಳ್ಳಿ, ಗೊರೂರು, ಕಳಲವಾಡಿ, ಕೋಟೆಹುಂಡಿ, ಯಡಹಳ್ಳಿ, ರಾಯನಕೆರೆ, ಸರಸ್ವತಿಪುರಂ 1ನೇ ಮುಖ್ಯರಸ್ತೆ ಯಿಂದ 6ನೇ ಮುಖ್ಯರಸ್ತೆ, ಭಾಗಶಃ ಕೆ.ಜಿ.ಕೊಪ್ಪಲು ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.06.2026 ಗುರುವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ** : ಮಕ್ಕಳಿಗಾಗಿ ಸ್ವರ್ಣಪ್ರಾಶನ ಕಾರ್ಯಕ್ರಮ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ರಿಂದ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್, ಯೋಗ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಹಾಗೂ ಬೆನ್ನು ನೋವು ತಪಾಸಣಾ ಚಿಕಿತ್ಸಾ ಶಿಬಿರ, ಸಯಾಟೀಕ್/ಗೃಧ್ರಸಿ ರೋಗದ ಚಿಕಿತ್ಸಾ ಶಿಬಿರ, ಅಸೃಗ್ದರ (ಗರ್ಭಾಶಯ ರಕ್ತಸ್ರಾವ) ಚಿಕಿತ್ಸಾ ಶಿಬಿರ, ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ. ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ**: ರುಮಾಟಾಯ್ಡ್ ಅರ್ಥ್ರೈಟಿಸ್ (ಆಮವಾತ), ತುರಿಕೆ, ಮಕ್ಕಳಲ್ಲಿ ಕಂಡು ಬರುವ ಕೆಮ್ಮು, ಜ್ವರ, ಅಸ್ತಮಾ ಸಮಸ್ಯೆಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಮೈಸೂರು, ಬೆಳಗ್ಗೆ 9.30 ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ** : ಸರ್ದಾರ್ ವಲ್ಲಭಭಾಯ್ ಪಟೇಲ್‌ರವರ 150ನೇ ಜನ್ಮ ದಿನದ ಕಾರ್ಯಕ್ರಮ, ಸ್ಥಳ: ವ್ಯವಸ್ಥಾಪನಾ ಮಂಡಳಿ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು** : ಪ್ರಥಮ ವರ್ಷದ ವಿದ್ಯಾರ್ಥಿಗಳ ಸೇರ್ಪಡೆ ಕಾರ್ಯಕ್ರಮ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಪ್ರಿನ್ಸಿಪಾಲ್ ಡಾ. ಎಂ. ಶಿವಲಿಂಗೇಗೌಡ, ಸ್ಥಳ: ಹೆಚ್.ಕೆ. ಕೆಂಪೇಗೌಡ ಒಳಾಂಗಣ ಕ್ರೀಡಾ ಆವರಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಾರಿಯರ್ಸ್, ಕೆಎಸ್‌ಸಿಎ, ಸೈಕಲ್ ಪ್ಯೂರ್ ಅಗರಬತ್ತಿ** : ಮಾಜಿ ಕ್ರಿಕೆಟರ್ ಜಾವಗಲ್ ಶ್ರೀನಾಥ್ ಅವರಿಂದ ಮೈಸೂರು ವಾರಿಯರ್ಸ್ ತಂಡದ ಪರಿಚಯ ಮತ್ತು ಕೆಎಸ್‌ಸಿಎ ಮಹಾರಾಜ ಟ್ರೋಫಿ ಆಂಥೆಮ್ ಬಿಡುಗಡೆ, ಉಪಸ್ಥಿತರು : ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್, ಮೈಸೂರು ವಲಯ ಸಂಚಾಲಕ ಶ್ರೀನಿವಾಸ ಪ್ರಸಾದ್, ಸ್ಥಳ: ರ್‍ಯಾಡಿಸನ್ ಬ್ಲೂ ಹೋಟೆಲ್, ಎಂ.ಜಿ. ರಸ್ತೆ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ** : ಡಾ.ಬಾಬು ಜಗಜೀವನರಾಮ್‌ರವರ ದೂರದೃಷ್ಟಿ ಮತ್ತು ಆಧುನಿಕ ಸಮಾಜಕ್ಕೆ ಅವರ ಕೊಡುಗೆಗಳು ಕುರಿತು ರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ: ಡಾ.ಬಾಬು ಜಗಜೀವನರಾಮ್ ಸಂಶೋಧನಾ ಸಂಸ್ಥೆ ನಿರ್ದೇಶಕ ರಾಜೇಶ್ ಜಿ.ಗೌಡ, ಪ್ರಧಾನ ಭಾಷಣ : ಮಾಜಿ ಚುನಾವಣಾ ಆಯುಕ್ತ ಎನ್.ಸಿ.ಮುನಿಯಪ್ಪ, ಮುಖ್ಯ ಅತಿಥಿಗಳು : ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಉಪಸ್ಥಿತರು : ಕರಾಮುವಿವಿ ಡೀನ್ (ಶೈಕ್ಷಣಿಕ) ಪ್ರೊ.ಎಂ.ರಾಮನಾಥಮ್ ನಾಯುಡು, ಹಣಕಾಸು ಅಧಿಕಾರಿ ಪ್ರೊ. ನಿರಂಜನ್‌ರಾಜ್, ಡೀನ್ (ಅಧ್ಯಯನ ಕೇಂದ್ರ) ಡಾ. ಎನ್. ಆನಂದ್‌ಗೌಡ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11.15ಕ್ಕೆ.

■ **ಕನ್ನಡ ಚಳವಳಿ ಕೇಂದ್ರ ಸಮಿತಿ** : ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಸಮಾರಂಭ, ಪುಷ್ಪಾರ್ಚನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಉಪಸ್ಥಿತರು: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಧಾರ್ಮಿಕ ಕ್ಷೇತ್ರ ಪೋಷಕರಾದ ರವಿಶಾಸ್ತ್ರಿ, ಪ್ರಶಸ್ತಿ ಪುರಸ್ಕೃತರು: ಡಾ.ಕೆ.ಬಿ.ಲಿಂಗರಾಜ್, ಬಿ.ಆರ್.ನಟರಾಜ್ ಜೋಯಿಸ್, ಶ್ರೀದೇವ ಪ್ರಕಾಶ್, ಆದಿಶೇಷಗೌಡ, ಮಹೇಂದ್ರ ದೇವನೂರು, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ಮಧ್ಯಾಹ್ನ 12ಕ್ಕೆ.

■ **ಸರ್ಕಾರಿ ಪ್ರೌಢಶಾಲೆ, ಒಂಟಿಕೊಪ್ಪಲು, ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ** : ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಹಿರಿಯ ಉಪನ್ಯಾಸಕ ಲಕ್ಷ್ಮೀಪತಿ, ಉದ್ಘಾಟನೆ: ಕ್ಷೇತ್ರ ಶಿಕ್ಷಣಾಧಿಕಾರಿ, ಮೈಸೂರು ಉತ್ತರ ಎಸ್. ರೇವಣ್ಣ, ಮುಖ್ಯ ಅತಿಥಿಗಳು : ಮುಖ್ಯ ಶಿಕ್ಷಕ ಕೆ.ಜಿ.ಮಹೇಶ್, ಪುರಸ್ಕಾರ ಪ್ರದಾನ : ವಿಶ್ರಾಂತ ಉಪನ್ಯಾಸಕರಾದ ಶ್ರೀಮತಿ ಕೆ.ಎನ್.ಕಲ್ಪನಾ, ಪ್ರಾಸ್ತಾವಿಕ ನುಡಿ: ಹಿಂದಿ ಭಾಷಾ ಸಂಪನ್ಮೂಲ ವ್ಯಕ್ತಿ ಡಾ. ವಿಜಿ, ಉಪಸ್ಥಿತರು: ಹಿರಿಗಾಮಿ ಕಲಾವಿದ ಹೆಚ್.ವಿ. ಮುರಳೀಧರ, ಕಾವೇರಿ ಬಳಗದ ಅಧ್ಯಕ್ಷೆ ಶ್ರೀಮತಿ ಎನ್.ಕೆ.ಕಾವೇರಿಯಮ್ಮ, ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: ಸರ್ಕಾರಿ ಪ್ರೌಢಶಾಲೆ, ಒಂಟಿಕೊಪ್ಪಲು, ಮಧ್ಯಾಹ್ನ 2.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗದತ್ತ ಜಗತ್ತು–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ, 8.45 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಹತಿ ಎಸ್.–ಹಾಡುಗಾರಿಕೆ–ಊತುಕ್ಕಾಡು ವೆಂಕಟಸುಬ್ಬ ಅಯ್ಯರ್ ರಚನೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಸುತ್ತಮುತ್ತ : ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಮುಖ ಸಭೆ ಸಮಾರಂಭಗಳ ಪರಿಚಯಾತ್ಮಕ ಕಾರ್ಯಕ್ರಮ. ಪ್ರಸ್ತುತಿ–ಚಂದನಾ .ಸಿ ಹಾಗೂ ಅರ್ಚನಾ. ಪಿ ಆರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. 'ಹಣ್ಣು ಹೊನ್ನು'– ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ. ತರಕಾರಿ ಬೆಳೆಗಳ ಸಸಿಮಡಿಯಲ್ಲಿ ಕೀಟರೋಗಗಳ ಸಮಗ್ರ ನಿರ್ವಹಣೆ ಕುರಿತು ಸಂವಾದ ಭಾಗವಹಿಸುತ್ತಾರೆ ಮೈಸೂರು ತಾಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರುಗಳಾದ ಡಾ. ಕೆ.ಸಿ.ಕಿರಣ್ ಕುಮಾರ್ ಹಾಗೂ ಡಾ. ಜಿ.ಕೆ. ರಾಮೇಗೌಡ, ಪ್ರಸ್ತುತಿ–ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಯುವವಾಣಿ, ಚರ್ಚೆ – 'ಕೃತಕ ಬುದ್ಧಿಮತ್ತೆ ಸಾಧಕ–ಬಾಧಕಗಳು' ಈ ಕುರಿತು ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳಾದ ಚರಣ್, ಶಶಿ, ರಮ್ಯ, ಜ್ಯೋತ್ಸ್ನಾ ಎಸ್. ಜಾನ್ ಇವರಿಂದ. ನಡೆಸಿಕೊಡುತ್ತಾರೆ–ಬಸವರಾಜ್, ನಿಮಗಿದು ಗೊತ್ತೇ, ಪ್ರಸ್ತುತಿ–ಶೀತಲ್ ಬೆಳಗಲಿ, 9.30 ಕನ್ನಡ ಭಾರತಿ, 10.00 ನಾಟಕ 'ಅಮ್ಮ', ನಿರ್ಮಾಣ–ಡಾ. ಬಿ. ಎಂ. ಶರಭೇಂದ್ರಸ್ವಾಮಿ, 10.30 ಸವಿನೆನಪು

24 ಗಂಟೆಗಳಲ್ಲಿ 11 ಮಂದಿ ಸಾವು

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷ್ಯ ಆರೋಪ

- ಆಸ್ಪತ್ರೆಯಲ್ಲಿ ಉದ್ವಿಗ್ನ ವಾತಾವರಣ
- ರಾತ್ರಿ ವೇಳೆ ವೈದ್ಯರೆ ಇರುವುದಿಲ್ಲ



ಮೈಸೂರು, ಜೂ.17(ಜಿಎ)– ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ರೋಗಿಗಳು ಸಾವನ್ನಪ್ಪುವ ಸ್ಥಿತಿ ಬಂದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಕಳೆದ ರಾತ್ರಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಕಳೆದ 24 ಗಂಟೆಗಳಲ್ಲಿ 11 ರೋಗಿಗಳು ಮೃತಪಟ್ಟಿದ್ದು, ತುರ್ತು ಸಂದರ್ಭಗಳಲ್ಲಿ ವೈದ್ಯರು ಲಭ್ಯವಿಲ್ಲ ಎಂದು ಆರೋಪಿಸಿ ರೋಗಿಗಳ ಸಂಬಂಧಿಕರು ಆಸ್ಪತ್ರೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಆಕ್ರೋಶಗೊಂಡ ಸಂಬಂಧಿಕರು ವಾರ್ಡ್‌ಗಳು ಹಾಗೂ ತುರ್ತು ಚಿಕಿತ್ಸಾ ವಿಭಾಗಗಳಿಗೆ ನುಗ್ಗಿ ವಿಡಿಯೋ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾತ್ರಿ ಪಾಳಿಯಲ್ಲಿ ವೈದ್ಯರು ಗೈರಾಗಿದ್ದು, ಬೆಳಿಗ್ಗೆಯೂ ತಡವಾಗಿ ಆಸ್ಪತ್ರೆಗೆ ಆಗಮಿಸುತ್ತಾರೆ. ಇದರಿಂದ ಹೃದಯಾಘಾತ ಸೇರಿದಂತೆ ತುರ್ತು ಸ್ಥಿತಿಯಲ್ಲಿರುವ ರೋಗಿಗಳಿಗೆ ಸಕಾಲದಲ್ಲಿ ಚಿಕಿತ್ಸೆ ದೊರೆಯುತ್ತಿಲ್ಲ ಎಂದು ರೋಗಿಗಳ ಸಂಬಂಧಿಕರು ಆರೋಪಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವ ವಿಡಿಯೋಗಳಲ್ಲಿ, 'ಗೋಲ್ಡನ್ ಅವರ್'ನಲ್ಲಿ ಹೃದಯಾಘಾತಕ್ಕೊಳಗಾದ ರೋಗಿಗಳನ್ನು ವೈದ್ಯರ ಬದಲು ಮುಖ್ಯವಾಗಿ ನರ್ಸ್‌ಗಳು ನೋಡಿಕೊಳ್ಳುತ್ತಿದ್ದಾರೆ ಎಂದು ಸಂಬಂಧಿಕರು ಆಸ್ಪತ್ರೆ ಸಿಬ್ಬಂದಿಯನ್ನು ಪ್ರಶ್ನಿಸಿರುವ ದೃಶ್ಯಗಳು ಕಂಡುಬಂದಿವೆ.

ರಾತ್ರಿ 10 ಗಂಟೆಯಿಂದ ಬೆಳಗ್ಗೆ 8 ಗಂಟೆಯವರೆಗೆ ಯಾವುದೇ ಹಿರಿಯ ವೈದ್ಯರು ಲಭ್ಯವಿರುವುದಿಲ್ಲ. ಬೆಳಗಿನ ರೌಂಡ್ಸ್‌ಗೂ ವೈದ್ಯರು ಸುಮಾರು 10 ಗಂಟೆಯ ನಂತರ ಬರುತ್ತಾರೆ. ಇದರಿಂದ ರೋಗಿಗಳು ಗಂಟೆಗಟ್ಟಲೆ ನರಳಬೇಕಾಗಿ ಬಂದಿದೆ ಎಂದು ಸಂಬಂಧಿಕರು ದೂರಿದರು. ತೀವ್ರ ಅಸ್ವಸ್ಥ ಹಾಗೂ ತುರ್ತು ಚಿಕಿತ್ಸೆಗೆ ಅಗತ್ಯವಿರುವ ಪ್ರಕರಣಗಳಿಗೂ ತಕ್ಷಣ ಸ್ಪಂದನೆ ಸಿಗುತ್ತಿಲ್ಲ ಎಂದು ಅವರು ಆರೋಪಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ, ವಿಷಯ ನನ್ನ ಗಮನಕ್ಕೆ ಬಂದಿದೆ. ಆಸ್ಪತ್ರೆಯ ವೈದ್ಯರು ಹಾಗೂ ಆಡಳಿತದಿಂದ ಸಂಪೂರ್ಣ ಮಾಹಿತಿ ಕೇಳಿದ್ದೇನೆ. ಎಲ್ಲಾ ವಿವರಗಳು ದೊರೆತ ಬಳಿಕವೇ ಪ್ರತಿಕ್ರಿಯೆ ನೀಡುತ್ತೇನೆ ಎಂದು ಹೇಳಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ, ಜಯದೇವ ಆಸ್ಪತ್ರೆ ನಮ್ಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಇದು ಸ್ವಾಯತ್ತ ಸಂಸ್ಥೆಯಾಗಿದ್ದು, ಬೆಂಗಳೂರಿನ ನಿರ್ದೇಶಕರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಕುರಿತು ಆಸ್ಪತ್ರೆ ನಿರ್ದೇಶಕರೇ ಸ್ಪಷ್ಟನೆ ನೀಡಬೇಕು ಎಂದರು.

ಜಯದೇವ ಆಸ್ಪತ್ರೆಯಲ್ಲಿ ವೈದ್ಯರು ನಿರ್ಲಕ್ಷ್ಯ ವಹಿಸಿಲ್ಲ

- ಗೋಲ್ಡನ್ ಅವರ್ ಮೀರಿದ, ವಯೋವೃದ್ಧರ ಸಾವು
- ಪ್ರತಿನಿತ್ಯ 900 ರೋಗಿಗಳಿಗೆ ಚಿಕಿತ್ಸೆ

ಮೈಸೂರು, ಜೂ.17(ಜಿಎ)– ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ಯಾವುದೇ ನಿರ್ಲಕ್ಷ್ಯ ಮಾಡಿಲ್ಲ ಎಂದು ಸಂಸ್ಥೆಯ ನಿರ್ದೇಶಕ ಡಾ.ದಿನೇಶ್ ಸ್ಪಷ್ಟಪಡಿಸಿದರು.

ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಸ್ಪತ್ರೆಯಲ್ಲಿ 24 ಗಂಟೆಗಳೂ ತುರ್ತು ಚಿಕಿತ್ಸಾ ಸೇವೆ ಲಭ್ಯವಿದೆ. ಪ್ರತಿಯೊಂದು ಪಾಳಿಯಲ್ಲೂ ಕರ್ತವ್ಯನಿರತ ವೈದ್ಯರು, ಹೃದ್ರೋಗ ತಜ್ಞರು ಹಾಗೂ ಸ್ನಾತಕೋತ್ತರ ವೈದ್ಯರು ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹೇಳಿದರು.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೋಗಳು ತಪ್ಪು ಭಾವನೆ ಮೂಡಿಸುವಂತಿವೆ. ವೈದ್ಯರು ವಿಶ್ರಾಂತಿ ಕೊಠಡಿಯಲ್ಲಿದ್ದಾಗ ಖಾಲಿ ಕುರ್ಚಿಗಳ ದೃಶ್ಯಗಳನ್ನು ಚಿತ್ರೀಕರಿಸಲಾಗಿದೆ. ಸಿಸಿಟಿವಿ ದೃಶ್ಯಾವಳಿಗಳು ವೈದ್ಯರು ಕರ್ತವ್ಯದಲ್ಲಿದ್ದುದನ್ನು ದೃಢಪಡಿಸುತ್ತವೆ ಎಂದು ಅವರು ಸ್ಪಷ್ಟಪಡಿಸಿದರು.

ಮೃತಪಟ್ಟಿರುವ 11 ಮಂದಿಯೂ ಒಂದೇ ದಿನ ದಾಖಲಾಗಿಲ್ಲ. ಎರಡು ಮೂರು ದಿನಗಳ ವ್ಯತ್ಯಾಸವಿದೆ. ಎಲ್ಲರ ಸ್ಥಿತಿ ಗಂಭೀರವಾಗಿತ್ತು. ಅವರು ಇಲ್ಲಿ ಬಂದು ದಾಖಲಾಗುವ ಸಂದರ್ಭದಲ್ಲೇ ಅವರ ಆರೋಗ್ಯ ಕ್ಷೀಣಿಸಿತ್ತು. ಇದರೊಟ್ಟಿಗೆ ಗೋಲ್ಡನ್ ಅವರ್ ಮೀರಿದ್ದರು. ಈ ಹಿನ್ನೆಲೆಯಲ್ಲಿ ಮೃತರಾದ ಎಲ್ಲರೂ ಬಹು ಅಂಗ ವೈಫಲ್ಯ ಸೇರಿದಂತೆ ಅತ್ಯಂತ ಗಂಭೀರ ಸ್ಥಿತಿಯಲ್ಲಿದ್ದ ರೋಗಿಗಳಾಗಿದ್ದರು ಎಂದು ತಿಳಿಸಿದರು. ಮೃತಪಟ್ಟ ಬಹುತೇಕ ರೋಗಿಗಳು 70 ರಿಂದ 80 ವರ್ಷದ ವಯೋಮಾನದವರಾಗಿದ್ದರು. ಕೆಲವರಿಗೆ ಹೃದಯಾಘಾತವಾದ 12 ಗಂಟೆಗಳ ನಂತರ ಆಸ್ಪತ್ರೆಗೆ ಕರೆತರಲಾಗಿತ್ತು. ಅವಾಗಲೇ 'ಗೋಲ್ಡನ್ ಅವರ್' ಕಳೆದುಹೋಗಿತ್ತು ಎಂದು ಅವರು ವಿವರಿಸಿದರು.



ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಡಾ.ದಿನೇಶ್ ಮಾತನಾಡಿದರು.

ವೈದ್ಯರು ಹಾಗೂ ಹಾಸಿಗೆಗಳ ಕೊರತೆ ಕುರಿತು ಮಾತನಾಡಿದ ಅವರು, ಜಯದೇವ ಆಸ್ಪತ್ರೆ ತೃತೀಯ ಹಂತದ ಆಸ್ಪತ್ರೆಯಾಗಿದ್ದು, ಮೈಸೂರು ಸೇರಿದಂತೆ ಐದು ಜಿಲ್ಲೆಗಳಿಂದ ಗಂಭೀರ ಹೃದ್ರೋಗಿಗಳನ್ನು ಮಾತ್ರ ಇಲ್ಲಿಗೆ ರವಾನಿಸಲಾಗುತ್ತದೆ. ಪ್ರಸ್ತುತ ಆಸ್ಪತ್ರೆಯಲ್ಲಿ 400 ಹಾಸಿಗೆಗಳಿದ್ದು, ರೋಗಿಗಳ ಸಂಖ್ಯೆಯ ಹೆಚ್ಚಳದಿಂದ 600 ಹಾಸಿಗೆಗಳಿಗೆ ವಿಸ್ತರಿಸಲು ಸರ್ಕಾರ 180 ಕೋಟಿ ವೆಚ್ಚದ ಯೋಜನೆಗೆ ಅನುಮೋದನೆ ನೀಡಿದೆ. ಆಸ್ಪತ್ರೆಯಲ್ಲಿ 65 ವೈದ್ಯರು, ಅದರಲ್ಲೂ 19 ಹೃದ್ರೋಗ ತಜ್ಞರು ಕಾರ್ಯನಿರ್ವಹಿಸುತ್ತಿದ್ದರೂ ಸಿಬ್ಬಂದಿ ಕೊರತೆ ಎದುರಾಗಿದೆ. ಆಸ್ಪತ್ರೆಯಲ್ಲಿ ಪ್ರತಿದಿನ ಸುಮಾರು 900 ಹೊರರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಹೆಚ್ಚುವರಿ ವೈದ್ಯರು ಮತ್ತು ಸಿಬ್ಬಂದಿಗಳ ನೇಮಕಾತಿಗೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ, ಬೆಂಗಳೂರು ಸಂಸ್ಥೆಯ ಅಧೀಕ್ಷಕ ಪ್ರೊ.ಪ್ರಭಾಕರ್, ಆರ್‌ಎಂಒ. ಡಾ.ಪಶುಪತಿ ಉಪಸ್ಥಿತರಿದ್ದರು.

ಡಾ. ಸದಾನಂದ: ಇದಕ್ಕೂ ಮುನ್ನ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ್ದ ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಸದಾನಂದ, ತೀವ್ರ ಹೃದಯಾಘಾತದಿಂದ ಬಂದ 11 ಮಂದಿಯೂ ಗೋಲ್ಡನ್ ಅವರ್‌ನಲ್ಲಿ ಬಂದಿದ್ದ ರೋಗಿಗಳಾಗಿದ್ದಾರೆ ಎಂದರು. ಇಲ್ಲಿ ಮೃತಪಟ್ಟಿರುವ 11 ಮಂದಿ ಸಂಬಂಧ ಜನರು ವೈದ್ಯರ ನಿರ್ಲಕ್ಷ್ಯ ಎಂದು ಹೇಳುತ್ತಿದ್ದಾರೆ. ಆದರೆ, ವಾಸ್ತವವಾಗಿ ಅವರೆಲ್ಲರೂ ತಡವಾಗಿ ಆಸ್ಪತ್ರೆಗೆ ಬಂದಿದ್ದಾರೆ. ಅವರಿಗೆ ತಕ್ಷಣ ಪ್ರಥಮ ಚಿಕಿತ್ಸೆ ನೀಡಿ ಐಸಿಯುಗೆ ದಾಖಲು ಮಾಡಿ ಎಲ್ಲಾ ರೀತಿಯ ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಲಾಗಿತ್ತು ಎಂದರು.

ಮುಖ್ಯವಾಗಿ ಹೃದಯಾಘಾತವಾದಾಗ ಪ್ರತಿಯೊಬ್ಬ ರೋಗಿಗೂ ಗೋಲ್ಡನ್ ಅವರ್ ಇರುತ್ತದೆ. ಆಗ ಅವರು ತಕ್ಷಣ ಸ್ಥಳೀಯ ಆಸ್ಪತ್ರೆಗೆ ಭೇಟಿ ನೀಡಬೇಕು. ಆದರೆ, ಈ ರೋಗಿಗಳು ನಿಯಮವನ್ನು ಪಾಲಿಸಿಲ್ಲ ಎಂದು ಸ್ಪಷ್ಟಪಡಿಸಿದರು. ತೀವ್ರತರ ಹೃದಯಾಘಾತಕ್ಕೊಳಗಾದ ರೋಗಿಗಳಿಗಾಗಿಯೇ ಜಯದೇವದಲ್ಲಿ 20 ಹಾಸಿಗೆಗಳನ್ನು ಮೀಸಲಿಡಲಾಗಿದೆ. ಅವರಿಗೆ ನುರಿತ ವೈದ್ಯರಿಂದ ಚಿಕಿತ್ಸೆ ನೀಡಲಾಗುತ್ತದೆ ಎಂದು ಅವರು ವಿವರಿಸಿದರು.

ಆಸ್ಪತ್ರೆಯ ಮರಣ ಪ್ರಮಾಣ ಆತಂಕ ಮಟ್ಟದಲ್ಲಿಲ್ಲ

ಆಸ್ಪತ್ರೆಯ ಅಂಕಿ–ಅಂಶಗಳ ಪ್ರಕಾರ, 2025ರಲ್ಲಿ 21,577 ರೋಗಿಗಳು ದಾಖಲಾಗಿದ್ದು, ಅವರಲ್ಲಿ 1,245 ಮಂದಿ ಮೃತಪಟ್ಟಿದ್ದಾರೆ. ಇದು 5.77 ಶೇಕಡಾ ಮರಣ ಪ್ರಮಾಣವಾಗಿದೆ. 2010ರಿಂದ 2025ರವರೆಗೆ 1,62,735 ರೋಗಿಗಳು ದಾಖಲಾಗಿದ್ದು, 10,767 ಸಾವುಗಳು ಸಂಭವಿಸಿವೆ. ಮರಣ ಪ್ರಮಾಣ ಶೇಕಡಾ 6.62 ದಾಖಲಾಗಿದೆ. 2026ರ ಜೂನ್ 15ರವರೆಗೆ 9,461 ರೋಗಿಗಳು ದಾಖಲಾಗಿದ್ದು, 499 ಮಂದಿ ಮೃತಪಟ್ಟಿದ್ದಾರೆ ಎಂದು ಅವರು ವಿವರಿಸಿದರು.

ಜೂನ್ 1ರಿಂದ 15ರವರೆಗೆ ಮಾತ್ರ 10,380 ಹೊರರೋಗಿಗಳಿಗೆ ಚಿಕಿತ್ಸೆ ನೀಡಲಾಗಿದ್ದು, 51 ಸಾವುಗಳು ವರದಿಯಾಗಿವೆ. ಈ ಅವಧಿಯ ಮರಣ ಪ್ರಮಾಣ 5.02 ಶೇಕಡಾ ಆಗಿದೆ. ತೃತೀಯ ಹಂತದ ರೆಫರಲ್ ಆಸ್ಪತ್ರೆಗಳಲ್ಲಿ ಅಂತರ ರಾಷ್ಟ್ರೀಯ ಮಾನದಂಡಗಳ ಪ್ರಕಾರ 6ರಿಂದ 8 ಶೇಕಡಾ ಮರಣ ಪ್ರಮಾಣವನ್ನು ಸ್ವೀಕಾರಾರ್ಹವೆಂದು ಪರಿಗಣಿಸಲಾಗುತ್ತದೆ. ನಮ್ಮ ಆಸ್ಪತ್ರೆಯ ಮರಣ ಪ್ರಮಾಣ ಅದಕ್ಕಿಂತ ಕಡಿಮೆ ಇದೆ ಎಂದು ಡಾ.ದಿನೇಶ್ ತಿಳಿಸಿದ್ದಾರೆ. ಸಂಸ್ಥೆಯಲ್ಲಿ ಬೆಡ್‌ಗಳ ಕೊರತೆ ಇದ್ದು, ಐಸಿಯುನಲ್ಲಿರುವ 80 ಬೆಡ್ ಸಂಜೆ ನಾಲ್ಕು ಗಂಟೆಯಲ್ಲೇ ಭರ್ತಿಯಾಗುತ್ತಿದೆ. ನಂತರ ಬರುವವರಿಗೆ ಸ್ಟ್ರೆಚ್ಚರ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಸಮಸ್ಯೆಗೆ ಸರ್ಕಾರ 200 ಬೆಡ್‌ಗಳನ್ನು ಘೋಷಣೆ ಮಾಡಲಾಗಿದೆ ಎಂದು ತಿಳಿಸಿದರು.

ಮೈಸೂರಲ್ಲಿ ಧಾರಾಕಾರ ಮಳೆ



ಹಳೇ ಡಿಸಿ ಕಚೇರಿ ಮುಂಭಾಗ ಬುಧವಾರ ಸಂಜೆ ಸುರಿದ ಮಳೆ.

ಮೈಸೂರು, ಜೂ.17 (ವಿವಿಹೆಚ್)– ನಗರದಲ್ಲಿ ಬುಧವಾರ ಸಂಜೆ ಎರಡು ಗಂಟೆಗೂ ಅಧಿಕ ಕಾಲ ಸುರಿದ ಧಾರಾಕಾರ ಮಳೆಯಿಂದಾಗಿ ಹಲವು ತಗ್ಗು ಪ್ರದೇಶ, ರಸ್ತೆಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಆದರೆ ಯಾವುದೇ ಆಸ್ತಿಪಾಸ್ತಿಗೆ ಹಾನಿಯಾಗಿರುವ ಬಗ್ಗೆ ವರದಿಯಾಗಿಲ್ಲ.

ಬೆಳಗ್ಗೆಯಿಂದ ಬಿರು–ಬಿಸಿಲಿನ ಬೇಗೆಯಲ್ಲಿ ತತ್ತರಿಸಿದ ಮೈಸೂರು ಜನರಿಗೆ ಸಂಜೆ ವೇಳೆಗೆ ಮೋಡ ಕವಿದ ವಾತಾವರಣದ ನಡುವೆ ಆರಂಭವಾದ ಮಳೆ ಕೆಲವೇ ನಿಮಿಷಗಳಲ್ಲಿ ಬಿರುಸು ಪಡೆದುಕೊಂಡಿತು. ನಗರದ ಪ್ರಮುಖ ರಸ್ತೆಗಳಲ್ಲಿ ನೀರು ಹರಿದರೆ, ತಗ್ಗು ಪ್ರದೇಶಗಳಲ್ಲಿ ಮಳೆ ನೀರು ಸಂಗ್ರಹವಾಗಿ ವಾಹನ ಸವಾರರು ಹಾಗೂ ಪಾದಚಾರಿಗಳು ಪರದಾಡುವಂತಾಯಿತು.

ದೇವರಾಜ ಅರಸು ರಸ್ತೆ, ಜಯಲಕ್ಷ್ಮೀಪುರಂ, ಕುವೆಂಪುನಗರ, ವಿಜಯನಗರ, ಸಿದ್ಧಾರ್ಥನಗರ, ರಾಮಸ್ವಾಮಿ ವೃತ್ತ, ಬನ್ನಿಮಂಟಪ, ಹೆಬ್ಬಾಳ ಸೇರಿದಂತೆ ಹಲವು ಕಡೆಗಳಲ್ಲಿ ಮಳೆಯ ಅಬ್ಬರ ಕಂಡುಬಂತು.

ಮಳೆಯಿಂದ ರಕ್ಷಣೆಗಾಗಿ ದ್ವಿಚಕ್ರ ವಾಹನ ಸವಾರರು ಬಸ್ ನಿಲ್ದಾಣಗಳು, ಅಂಗಡಿಗಳ ಮುಂಭಾಗದಲ್ಲಿ ಹಾಗೂ ಮರಗಳ ಕೆಳಗೆ ಆಶ್ರಯ ಪಡೆದರು. ನಗರದ ಹಲವು ವೃತ್ತಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಸಂಚಾರಕ್ಕೆ ಅಡ್ಡಿಯಾಗಿತ್ತು. ಎರಡು ಗಂಟೆಗೂ ಅಧಿಕ ಕಾಲ ಸುರಿದ ಮಳೆಯಿಂದ ನಗರದಲ್ಲಿ ತಂಪಾದ ವಾತಾವರಣ ನಿರ್ಮಾಣವಾಗಿದ್ದು, ಬೇಸಿಗೆಯ ಬಿಸಿಲಿನಿಂದ ಬಳಲಿದ್ದ ನಾಗರಿಕರು ಸದ್ಯ ನಿರಾಳರಾಗಿದ್ದಾರೆ.

ದರ್ಶನ್ ದೋಶಿ ಅವರಿಂದ ಡ್ರಮ್ಸ್ ವಾದನ ಕಾರ್ಯಾಗಾರ

ಮೈಸೂರು, ಜೂ. 17– ಹೊರೈಜನ್ ಸ್ಕೂಲ್ ಆಫ್ ಡ್ರಮ್ಸ್ ಸಂಸ್ಥೆಯು 'ಗ್ರೂವ್ ಎಕ್ಸ್ 4ನೇ ಅಧ್ಯಾಯ'ದ ಅಂಗವಾಗಿ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಜೂ. 20 ರಂದು ಬೆಳಗ್ಗೆ 10ರಿಂದ 1ರವರೆಗೆ ಡ್ರಮ್ಸ್ ವಾದನ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ. ಭಾರತದ ಹೆಸರಾಂತ ಡ್ರಮ್ಸ್ ವಾದಕ ದರ್ಶನ್ ದೋಶಿ ಈ ಕಾರ್ಯಾಗಾರವನ್ನು ನಡೆಸಿಕೊಡಲಿದ್ದಾರೆ. ಕಾರ್ಯಾಗಾರದಲ್ಲಿ ಭಾಗವಹಿಸಲಿಚ್ಛಿಸುವವರು ಮೊಬೈಲ್ ಸಂಖ್ಯೆ 9620960051/ 9061643272 ಅನ್ನು ಸಂಪರ್ಕಿಸಬಹುದಾಗಿದೆ. ಅದೇ ದಿನ ಸಂಜೆ 7.30ಕ್ಕೆ ದರ್ಶನ್ ದೋಶಿ ಅವರ ಡ್ರಮ್ಸ್ ವಾದನ ಕಾರ್ಯಕ್ರಮವಿರುತ್ತದೆ.

ಅಫ್ಘನ್ ವಿರುದ್ಧ ಸರಣಿ ಗೆದ್ದ ಭಾರತ



ಅಫ್ಘನ್ ವಿರುದ್ಧ ಚೊಚ್ಚಲ ಪಂದ್ಯದಲ್ಲಿ ವಿಕೆಟ್ ಪಡೆದ ಪ್ರಿನ್ಸ್ ಯಾದವ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು.


ಲಕ್ನೋ, ಜೂ.17 (ವಿವಿಹೆಚ್)– ನಾಯಕ ಶುಭ್‌ಮನ್ ಗಿಲ್, ಇಶಾನ್ ಕಿಶನ್ ಹೊಡಿಬಡಿ ಬ್ಯಾಟಿಂಗ್‌ನಿಂದಾಗಿ ಅಫ್ಘಾನಿಸ್ತಾನ ವಿರುದ್ಧ ನಡೆದ ಎರಡನೇ ಏಕದಿನ ಪಂದ್ಯದಲ್ಲಿ ಆತಿಥೇಯ ಭಾರತ ತಂಡವು 170 ರನ್‌ಗಳ ಭರ್ಜರಿ ಗೆಲುವು ದಾಖಲಿಸಿದೆ.

ಇದರೊಂದಿಗೆ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಇನ್ನು ಒಂದು ಪಂದ್ಯ ಇರುವಂತೆಯೇ 2–0 ಅಂತರದಲ್ಲಿ ಸರಣಿ ವಶಪಡಿಸಿ ಕೊಂಡಿದೆ. ಇಲ್ಲಿನ ಏಕನಾ ಕ್ರೀಡಾಂಗಣ ದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 49.5 ಓವರ್‌ಗಳಲ್ಲಿ ತನ್ನೆಲ್ಲ ವಿಕೆಟ್ ಕಳೆದುಕೊಂಡು 402 ರನ್ ಗಳಿಸಿತು. ಈ ಬೃಹತ್ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಅಫ್ಘನ್ 44.3 ಓವರ್‌ಗಳಿಗೆ ಆಲ್‌ಔಟ್ ಆಗಿ 232 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಮೊದಲು ಬ್ಯಾಟಿಂಗ್ ಮಾಡಿದ ಭಾರತದ ಆರಂಭ ಉತ್ತಮವಾಗಿರಲಿಲ್ಲ. ಯಶಸ್ವಿ ಜೈಸ್ವಾಲ್ (4) ವಿಕೆಟ್ ಬೇಗನೇ ಪತನವಾಯಿತು. ಆದರೆ ಬಿರುಸಿನ ಬ್ಯಾಟಿಂಗ್ ಪ್ರದರ್ಶಿಸಿದ ರೋಹಿತ್ 39 ಎಸೆತಗಳಲ್ಲಿ ಆರು ಬೌಂಡರಿ ಹಾಗೂ ಎರಡು ಸಿಕ್ಸರ್‌ಗಳಿಂದ 48 ರನ್ ಗಳಿಸಿದರು.

ಬಳಿಕ ಇಶಾನ್ ಕಿಶನ್ ಅವರೊಂದಿಗೆ ಜೊತೆಗೂಡಿದ ನಾಯಕ ಗಿಲ್ ತಂಡವನ್ನು ಮುನ್ನಡೆಸಿದರು. ಅವರಿಬ್ಬರು ಮೂರನೇ ವಿಕೆಟ್‌ಗೆ 224 ರನ್‌ಗಳ ಅಮೂಲ್ಯ ಜೊತೆಯಾಟ ಕಟ್ಟಿದರು. ಅಫ್ಘನ್ ಬೌಲರ್‌ಗಳನ್ನು ದಂಡಿಸಿದ ನಾಯಕ ಗಿಲ್ ಹಾಗೂ ಕಿಶನ್ ಶತಕ ಬಾರಿಸಿದರು. ಗಿಲ್ 110 ಎಸೆತಗಳಲ್ಲಿ 22 ಬೌಂಡರಿ, 2 ಸಿಕ್ಸರ್ ಸಹಿತ 154 ರನ್ ಹಾಗೂ ಇಶಾನ್ 79 ಎಸೆತಗಳಲ್ಲಿ 14 ಬೌಂಡರಿ, 7 ಸಿಕ್ಸರ್ ಸಹಿತ 125 ರನ್ ಗಳಿಸಿ ಅಬ್ಬರಿಸಿದರು.

ಉಳಿದಂತೆ ಶ್ರೇಯಸ್ ಅಯ್ಯರ್ 26, ವಾಷಿಂಗ್ಟನ್ ಸುಂದರ್ 19 ರನ್ ಗಳಿಸಿದರು. ಕೆ.ಎಲ್. ರಾಹುಲ್ ಶೂನ್ಯಕ್ಕೆ ಔಟ್ ಆದರು. ಗುರ್ನೂರ್ ಬ್ರಾರ್ 3, ಅರ್ಷ್‌ದೀಪ್ 3, ಕುಲ್ದೀಪ್ ಯಾದವ್ ಅಜೇಯ 3 ಹಾಗೂ ಪ್ರಿನ್ಸ್ ಯಾದವ್ 5 ರನ್ ಗಳಿಸಿದರು.



224 ರನ್‌ಗಳ ಜೊತೆಯಾಟವಾಡಿ ದಾಖಲೆ ಬರೆದ ಇಶಾನ್ ಕಿಶನ್ ಹಾಗೂ ಟೀಂ ಇಂಡಿಯಾ ನಾಯಕ ಶುಭ್‌ಮನ್ ಗಿಲ್.

ಅಫ್ಘನ್ ಪರ ನಂಗೆಯಾಲಿಯಾ ಖರೋಟಿ 4 ವಿಕೆಟ್, ರಶೀದ್ ಖಾನ್ 3 ವಿಕೆಟ್, ಫಜನ್‌ಫರ್, ಸಲೀಂ ಸಫಿ ತಲಾ ಒಂದೊಂದು ವಿಕೆಟ್ ಪಡೆದರು. 402 ರನ್‌ಗಳ ಗುರಿ ಬೆನ್ನಟ್ಟಿದ ಅಫ್ಘಾನಿಸ್ತಾನ ಪರ ರಹಮಾನುಲ್ಲಾ ಗುರ್ಬಾಜ್ ಮತ್ತು ಇಬ್ರಾಹಿಂ ಜದ್ರಾನ್ ಉತ್ತಮ ಆರಂಭ ನೀಡಿದರು. ಇವರಿಬ್ಬರು ಮೊದಲ ವಿಕೆಟ್‌ಗೆ 52 ರನ್‌ಗಳ ಪಾಲುದಾರಿಕೆಯನ್ನು ನೀಡಿದರು. ರಹಮಾನುಲ್ಲಾ 41 ರನ್‌ಗಳಿಗೆ ಔಟಾದರೆ, ಇಬ್ರಾಹಿಂ ಜದ್ರಾನ್ 21 ರನ್‌ಗಳಿಗೆ ಸುಸ್ತಾದರು.

ಸೆಡಿಕುಲ್ಲಾ ಅಟಲ್ ಅವರ ಆಟವೂ 42 ರನ್‌ಗಳಿಗೆ ಕೊನೆಗೊಂಡಿತು. ಇತ್ತ ದರ್ವಿಶ್ ರಸೂಲ್ ಗಾಯದಿಂದ ರಿಟೈರ್ಡ್ ಹರ್ಟ್ ಆಗಿ ಡಗೌಟ್ ಸೇರಿಕೊಂಡರು. ಆ ಬಳಿಕ ಬಂದ ಹಶ್ಮತುಲ್ಲಾ ಶಾಹಿದಿ 4 ರನ್ ಗಳಿಸಲಷ್ಟೇ ಶಕ್ತರಾದರೆ, ನಂಗಿಯಾಲಿಯಾ ಖರೋಟಿ 6, ರಶೀದ್ ಖಾನ್ 12 ಮತ್ತು ಎಎಮ್ ಗಜನ್‌ಫರ್ 1 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಇತ್ತ ಏಕಾಂಗಿ ಹೋರಾಟ ನಡೆಸಿದ ರಹಮತ್ ಶಾ 89 ಎಸೆತಗಳಲ್ಲಿ 79 ರನ್‌ಗಳಿಸಿಯೂ ತಂಡವನ್ನು ಗೆಲುವಿನ ದಡ ಮುಟ್ಟಿಸಲು ಸಾಧ್ಯವಾಗಲಿಲ್ಲ.

ಟೀಂ ಇಂಡಿಯಾ ಪರ ಅರ್ಷ್‌ದೀಪ್, ಗುರ್ನೂರ್ ಬ್ರಾರ್ ತಲಾ 3 ವಿಕೆಟ್, ಪ್ರಿನ್ಸ್ ಯಾದವ್ 2, ವಾಷಿಂಗ್ಟನ್ ಸುಂದರ್ ಒಂದು ವಿಕೆಟ್ ಪಡೆದು ಗಮನ ಸೆಳೆದರು.

ನೆದರ್ಲ್ಯಾಂಡ್ಸ್ ವಿರುದ್ಧ ಭಾರತಕ್ಕೆ 91 ರನ್‌ಗಳ ಭಾರೀ ಅಂತರದ ಜಯ



ಟೀಂ ಇಂಡಿಯಾ ಆಟಗಾರರ ಸಂಭ್ರಮ.

ಹೆಡಿಂಗ್ಲೆ, ಜೂ.17(ವಿವಿಹೆಚ್)– ಭಾರತ ವನಿತೆಯರ ತಂಡದ ಆಲ್‌ರೌಂಡರ್ ಪ್ರದರ್ಶನದ ನೆರವಿನಿಂದ ನೆದರ್ಲ್ಯಾಂಡ್ಸ್ ವಿರುದ್ಧ 95 ರನ್‌ಗಳ ಐತಿಹಾಸಿಕ ಗೆಲುವು ಸಾಧಿಸಿದೆ. ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಈವರೆಗೆ ದಾಖಲಾದ ಗರಿಷ್ಠ ರನ್‌ಗಳ ಅಂತರ ಈಗ ಭಾರತ ತಂಡದ ಹೆಸರಿನಲ್ಲಿದೆ.

ಇಲ್ಲಿನ ಲೀಡ್ಸ್ ಮೈದಾನದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 209 ರನ್ ಗಳಿಸಿತು. ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ನೆದರ್ಲ್ಯಾಂಡ್ಸ್ 17.3 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 114 ರನ್ ಗಳಿಸಲಷ್ಟೆ ಶಕ್ತವಾಯಿತು.

ಭಾರತ ಪರ ಕಣಕ್ಕಿಳಿದ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಜೋಡಿ ಉತ್ತಮ ಆರಂಭ ಒದಗಿಸಿತು. ಈ ಜೋಡಿ 70 ಎಸೆತಗಳಲ್ಲಿ 115 ರನ್‌ಗಳ ಆರಂಭಿಕ ಪಾಲುದಾರಿಕೆಯನ್ನು ಹಂಚಿಕೊಂಡರು. ಶೆಫಾಲಿ 38 ಎಸೆತಗಳಲ್ಲಿ 10 ಬೌಂಡರಿಗಳೊಂದಿಗೆ 55 ರನ್ ಗಳಿಸಿ ಔಟಾದರು.

ನಂತರ ಮಂದಾನ ಹಾಗೂ ಜೆಮಿಮಾ ರೊಡ್ರಿಗಸ್ 26 ಎಸೆತಗಳಲ್ಲಿ ಎರಡನೇ ವಿಕೆಟ್‌ಗೆ 47 ರನ್ ಸೇರಿಸಿದರು. ಮಂದಾನ 47 ಎಸೆತಗಳಲ್ಲಿ ಒಂದು ಸಿಕ್ಸ್ ಮತ್ತು 11 ಬೌಂಡರಿಗಳು ಸೇರಿದಂತೆ 74 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ರೋಡ್ರಿಗ್ರಸ್ 19 ರನ್ ಗಳಿಸಿ ಔಟಾದರು.

ಉಳಿದಂತೆ ಯಸ್ತಿಕಾ ಭಾಟಿಯಾ 3, ರಿಚಾ ಘೋಷ್ ಅಜೇಯ 20, ನಾಯಕಿ ಹರ್ಮನ್‌ಪ್ರೀತ್ ಕೌರ್ 12, ದೀಪ್ತಿ ಶರ್ಮಾ ಅಜೇಯ 10 ರನ್ ಗಳಿಸಿದರು.

ನೆದರ್ಲ್ಯಾಂಡ್ಸ್ ಪರ, ಕ್ಯಾರೋಲಿನ್ ಡಿ ಲ್ಯಾಂಗ್ 2 ವಿಕೆಟ್, ಐರಿಸ್ ಜ್ವಿಲ್ಲಿಂಗ್, ಹೀದರ್ ಸೆಗೆರ್ಸ್ ಮತ್ತು ಮೆರ್ಟೆ ವ್ಯಾನ್ ಡೆನ್ ರಾಡ್ ತಲಾ ಒಂದೊಂದು ವಿಕೆಟ್ ಪಡೆದರು. ಈ ಬೃಹತ್ ಗುರಿ ಬೆನ್ನತ್ತಿದ ನೆದರ್ಲ್ಯಾಂಡ್ಸ್ ಮಹಿಳಾ ತಂಡ ಆರಂಭಿಕ ಕುಸಿತ ಕಂಡಿತು. ಹೀದರ್ 21 ರನ್, ನಾಯಕಿ ಬಾಬೆಟ್ ಡಿ ಲೀಡೆ 28 ರನ್ ಗಳಿಸಿದರು. ಉಳಿದಂತೆ ನೆದರ್ಲ್ಯಾಂಡ್ಸ್ ತಂಡದ 7 ಬ್ಯಾಟರ್‌ಗಳು ಒಂದಂಕಿ ಮೊತ್ತಕ್ಕೆ ಔಟಾಗುವ ಮೂಲಕ ತಂಡಕ್ಕೆ ಹಿನ್ನಡೆ ತಂದುಕೊಟ್ಟರು. ಮಧ್ಯಮ ಕ್ರಮಾಂಕದ ದಿಢೀರ್ ಕುಸಿತ ನೆದರ್ಲ್ಯಾಂಡ್ಸ್ ಸೋಲಿಗೆ ಪ್ರಮುಖ ಕಾರಣವಾಯಿತು.

ಟೀಂ ಇಂಡಿಯಾ ಪರ ಶ್ರೀಚಾರಣಿ 4 ವಿಕೆಟ್, ಶಫಾಲಿ ವರ್ಮಾ 3 ವಿಕೆಟ್‌ಗಳನ್ನು ಪಡೆದರು. ನಂದಿನಿ ಶರ್ಮಾ 2, ದೀಪ್ತಿ ಶರ್ಮಾ ಒಂದು ವಿಕೆಟ್ ಪಡೆದು ಮಿಂಚಿದರು.

ದುಬಾರೆ ಆನೆ ಶಿಬಿರದ ದುರಂತದ ಹಿನ್ನೆಲೆ

ಸಾಕಾನೆ ಶಿಬಿರಗಳಲ್ಲಿ ಪ್ರವಾಸಿಗರ ಸುರಕ್ಷತೆ; ಸಿಬ್ಬಂದಿಗೆ ಎಚ್ಚರಿಕಾ ನಿಯಮಾವಳಿ ಜಾರಿ

ಪ್ರವಾಸಿಗರು ಅಂತರ ಕಾಯ್ದುಕೊಳ್ಳುವುದು ಕಡ್ಡಾಯ; ಆನೆ ಮುಟ್ಟುವುದು, ಆಹಾರ ನೀಡುವುದು ನಿಷಿದ್ಧ



ಸಂಗ್ರಹ ಚಿತ್ರ

ಮೈಸೂರು, ಜೂ.17(ಎಂಟಿವೈ)– ಕೊಡಗಿನ ದುಬಾರೆ ಆನೆ ಶಿಬಿರದಲ್ಲಿ ನಡೆದ ಸಾಕಾನೆಗಳ ಕಾಳಗ ಹಾಗೂ ಪ್ರವಾಸಿ ಮಹಿಳೆ ಸಾವು ದುರಂತದ ಹಿನ್ನೆಲೆಯಲ್ಲಿ ಇದೀಗ ಅರಣ್ಯ ಇಲಾಖೆ ಸಾಕಾನೆ ಶಿಬಿರಗಳಿಗೆ ಎಸ್‌ಓಪಿ ಬಿಡುಗಡೆ ಮಾಡಿದ್ದು, ಪ್ರವಾಸಿಗರು ಆನೆಗಳ ಮುಂದೆ ಸೆಲ್ಫಿ ತೆಗೆದುಕೊಳ್ಳುವುದು, ಆಹಾರ ನೀಡುವುದನ್ನು ನಿರ್ಬಂಧಿಸಿ ಸುರಕ್ಷತಾ ನಿಯಮ ಪಾಲಿಸುವಂತೆ ನಿರ್ದೇಶಿಸಿದೆ.

ಕರ್ನಾಟಕದ ಪ್ರಸಿದ್ಧ ಸಾಕಾನೆ ಶಿಬಿರ ಎನಿಸಿದ್ದ ದುಬಾರೆ ಆನೆ ಶಿಬಿರದಲ್ಲಿ ಮೇ 18ರಂದು ದಸರಾ ಆನೆ ಕಂಜನ್‌ಗೆ ಕಾವೇರಿ ನದಿಯಲ್ಲಿ ಸ್ನಾನ ಮಾಡಿಸುವ ವೇಳೆ ಇದ್ದಕ್ಕಿದ್ದಂತೆ ಪಕ್ಕದಲ್ಲೇ ಸ್ನಾನ ಮಾಡಿಸುತ್ತಿದ್ದ ಮಕ್ಣ ಆನೆ ಐರಾವತ ಮೇಲೆ ದಾಳಿ ಮಾಡಿತ್ತು. ಈ ವೇಳೆ ತಮಿಳುನಾಡು ಮೂಲದ ಪ್ರವಾಸಿ ಮಹಿಳೆ ಜಿನ್ನು, ಆನೆ ಅಡಿ ಸಿಲುಕಿ ಮೃತಪಟ್ಟಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಐರಾವತ ಆನೆ ಮರುದಿನ(ಮೇ 19) ಮೃತಪಟ್ಟಿತ್ತು. ಈ ಹಿನ್ನೆಲೆಯಲ್ಲಿ ದುಬಾರೆ ಸಾಕಾನೆ ಶಿಬಿರಕ್ಕೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿತ್ತು. ಇದೀಗ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ಹಾಗೂ ತಜ್ಞರು ಚರ್ಚಿಸಿ, ಸಾಕಾನೆ ಶಿಬಿರಗಳಲ್ಲಿ ಅನಾಹುತ ಮರುಕಳಿಸದಂತೆ ಕಟ್ಟೆಚ್ಚರ ವಹಿಸುವುದರೊಂದಿಗೆ ಪ್ರವಾಸಿಗರ ಸುರಕ್ಷತೆಗೆ ನಿಯಮ ರೂಪಿಸಿದೆ. ಅಲ್ಲದೆ, ಕರ್ನಾಟಕ ಸಾಕಾನೆ ಶಿಬಿರಗಳಿಗೆ ಭೇಟಿ ನೀಡುವ ಪ್ರವಾಸಿಗರು ಕಡ್ಡಾಯವಾಗಿ 10 ನಿಯಮಗಳನ್ನು ಪಾಲನೆ ಮಾಡಬೇಕು.

ಹೊಸ ಸುರಕ್ಷತಾ ನಿಯಮ ಕುರಿತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕುಮಾರ್ ಪುಷ್ಕರ್ ಮಾತನಾಡಿ, ಪ್ರವಾಸಿಗರ ಸುರಕ್ಷತೆಗಾಗಿ ಹೊಸ ನಿಯಮ ರೂಪಿಸಲಾಗಿದೆ. ಅಲ್ಲದೆ, ಆನೆಗಳ ಆರೋಗ್ಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹೊಸ ನಿಯಮ ಸಹಕಾರಿಯಾಗಲಿದೆ. ಶಿಬಿರಕ್ಕೆ ಬರುವ ಪ್ರವಾಸಿಗರು ಆನೆಗಳನ್ನು ಮುಟ್ಟುವ, ಅವುಗಳಿಗೆ ಆಹಾರ ನೀಡುವ, ಸ್ನಾನ ಮಾಡಿಸುವ ಹಾಗೂ ಸೆಲ್ಫೀ ತೆಗೆದುಕೊಳ್ಳುವುದನ್ನು ನಿರ್ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ. ಶಿಬಿರಗಳಲ್ಲಿ ಪ್ರವಾಸಿಗರು ಆನೆ ವೀಕ್ಷಣೆಗೆ ಬ್ಯಾರಿಕೇಡ್ ಅಳವಡಿಸಿ, ಅಲ್ಲಿ ಹಸಿರು ವಲಯ ನಿರ್ಮಾಣ ಮಾಡಬೇಕು. ಆನೆ ಕಾರ್ಯಾಚರಣೆ ವಲಯವನ್ನು ಕೆಂಪು ವಲಯ, ಸಿಬ್ಬಂದಿ ಓಡಾಟಕ್ಕೆ ಕೇಸರಿ ವಲಯ ಪ್ರತ್ಯೇಕಿಸಲಾಗುತ್ತದೆ. ಶಿಬಿರಗಳಲ್ಲಿ ಆನೆಗಳನ್ನು ವೀಕ್ಷಿಸಲು ಕನಿಷ್ಠ 10 ಮೀಟರ್ ಅಂತರದ ವ್ಯವಸ್ಥೆ ಮಾಡಿ, ಡಬ್ಬಲ್ ಬ್ಯಾರಿಕೇಡ್ ಅಳವಡಿಸಬೇಕು. ಪ್ರವಾಸಿಗರ ವೀಕ್ಷಣೆಗೆ ಒಂದು ಬಾರಿ ಕೇವಲ 10 ಆನೆಗಳನ್ನು ಮಾತ್ರ ನಿಲ್ಲಿಸಬೇಕು. ಅಲ್ಲದೆ, ಪ್ರವಾಸಿಗರ ವೀಕ್ಷಣೆಗೆ ಹಸಿರು ವರ್ಗದ ಆನೆ(ಸೌಮ್ಯ ಸ್ವಭಾವಿ)ಗಳನ್ನು ಮಾತ್ರ ಬಳಸಬೇಕು.

ಸಿಬ್ಬಂದಿಗೆ ಎಚ್ಚರಿಕೆ ಪಾಠ: ಮಸ್ತ್ ಅಥವಾ ಮದದ ಲಕ್ಷಣ ಇರುವ, ಆಕ್ರಮಣಕಾರಿ ಮನೋಭಾವ, ಗಾಯಗೊಂಡಿರುವ, ಅನಾರೋಗ್ಯ ಪೀಡಿತ, ದಣಿದ, ಒತ್ತಡಕ್ಕೆ ಒಳಗಾದ, ಹೊಸದಾಗಿ ಸೆರೆ ಹಿಡಿದ ಅಥವಾ ಮಾವುತ, ಕಾವಾಡಿಗಳ ಆಜ್ಞೆ ಪಾಲಿಸದ ಆನೆಗಳನ್ನು ಪ್ರವಾಸಿಗರ ವೀಕ್ಷಣೆಗೆ ತರಬಾರದು. ಆರು ತಿಂಗಳ ಮರಿಯಿರುವ ತಾಯಿ ಆನೆಯನ್ನು ಪ್ರವಾಸಿಗರ ವೀಕ್ಷಣೆಯಿಂದ ದೂರ ಇರಿಸಬೇಕು. ಶಿಬಿರಕ್ಕೆ ಬರುವ ಪ್ರವಾಸಿಗರು ಹಸಿರು ವಲಯ ದಾಟದಂತೆ ಎಚ್ಚರ ವಹಿಸಬೇಕು. ಸಾರ್ವಜನಿಕರು ಇದ್ದಾಗ ಶಿಬಿರದ ಆನೆಗಳನ್ನು ಪರಸ್ಪರ ತಳ್ಳಿಸುವ, ತಿವಿಸುವ ಹಾಗೂ ಸ್ಥಳಾಂತರ ಮಾಡದಂತೆ ನಿಗಾ ವಹಿಸಬೇಕು.

ಆನೆಗಳನ್ನು ಸ್ನಾನ ಮಾಡಿಸುವಾಗ ಪ್ರವಾಸಿಗರು ಹಸಿರು ವಲಯದ ಗ್ಯಾಲರಿಯಿಂದ ನೋಡಬೇಕು. ಯಾವುದೇ ಕಾರಣಕ್ಕೂ ಹತ್ತಿರಕ್ಕೆ ಹೋಗಿ ನೋಡುವ ಹಾಗೂ ಅವರೇ ಸ್ನಾನ ಮಾಡಿಸುವುದಕ್ಕೆ ಬಿಡಬಾರದು. ಶಿಬಿರದಲ್ಲಿ ಸಿಸಿ ಕ್ಯಾಮರಾ ಅಳವಡಿಸಿ, ಅದರ ದೃಶ್ಯಾವಳಿ ಮೇಲ್ವಿಚಾರಣೆ ಮಾಡಬೇಕು. ದೈನಂದಿನ ದೃಶ್ಯಾವಳಿ ಕಡ್ಡಾಯವಾಗಿ ಸಂರಕ್ಷಿಸಬೇಕು.

ಆನೆಯ ನಡವಳಿಕೆ, ಜನಸಂದಣಿ ನಿಯಂತ್ರಣ, ಸಿಬ್ಬಂದಿ ಲಭ್ಯತೆ, ಹವಾಮಾನ, ನದಿಯ ಸುರಕ್ಷತೆ, ಸಿಸಿ ಟಿವಿ, ಕಂಟ್ರೋಲ್ ರೂಂ ಸಿದ್ಧತೆ ಹಾಗೂ ಇನ್ನಿತರ ಅಡಚಣೆ ಕಂಡು ಬಂದರೆ ಕೂಡಲೇ ಶಿಬಿರಕ್ಕೆ ಪ್ರವಾಸಿಗರ ಭೇಟಿ ಸ್ಥಗಿತಗೊಳಿಸಬಹುದು ಎಂದು ಹೊಸ ನಿಯಮಾವಳಿಯಲ್ಲಿ ತಿಳಿಸಲಾಗಿದೆ.

ಜೂ.24ಕ್ಕೆ ಉದ್ಯೋಗ ಮೇಳ

ಮೈಸೂರು, ಜೂ.17(ಎಂಕೆ)– ಜಿಲ್ಲೆಯ ಪಿರಿಯಾಪಟ್ಟಣ ತಾಲೂಕು ಅಬ್ಬೂರು ಗ್ರಾಮದ ಬಿ.ಜಿ.ಎಸ್ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಜೂ.24 ರಂದು ಉದ್ಯೋಗ ಮೇಳ ಆಯೋಜಿಸಲಾಗಿದೆ.

ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನೇತೃತ್ವದಲ್ಲಿ ಉದ್ಯೋಗ ಮೇಳ ಆಯೋಜನೆಗೊಂಡಿದ್ದು, ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದ 18 ರಿಂದ 35 ವರ್ಷದೊಳಗಿನ ಉದ್ಯೋಗಾಕಾಂಕ್ಷಿಗಳು ಭಾಗವಹಿಸಲು ಮುಕ್ತ ಅವಕಾಶ ನೀಡಲಾಗಿದೆ. ಅಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಉದ್ಯೋಗ ಮೇಳ ನಡೆಯಲಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ.ನಂ. 9965563361, 9036356862, 8748984360 ಹಾಗೂ ದೂ.ಸಂ.0821–2970815ಗೆ ಸಂಪರ್ಕಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ಕೋರಲಾಗಿದೆ.

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಭೂಮಿಗೂ, ಚಂದ್ರನಿಗೂ ಏನ್ ಸಂಬಂಧ?
ಗುಂಡ : ಅಣ್ಣ–ತಂಗಿ ಸಂಬಂಧ ಸಾರ್.
ಮೇಷ್ಟ್ರು : ಅದ್ಹೇಗೆ?
ಗುಂಡ : ಭೂಮಿಯನ್ನು ತಾಯಿ ಅಂತ, ಚಂದ್ರನನ್ನು ಮಾಮ ಅಂತ ಕರೀತೀವಿ ಸಾರ್... ಅದಕ್ಕೆ

ಮೈಸೂರು ಮಿತ್ರ
ಗುರುವಾರ, ಜೂನ್ 18, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕೇವಲ ನಿನ್ನಲ್ಲಿರುವ ತಪ್ಪುಗಳನ್ನೇ ಹುಡುಕುವವರಿಗೆ ನಿನ್ನಲ್ಲಿರುವ ಒಳ್ಳೆಯತನ ಎಂದಿಗೂ ಅರ್ಥವಾಗುವುದಿಲ್ಲ..!

ವೇದ ಸುಳ್ಳಾದರೂ } ಬುದ್ಧಿ ಇದ್ದವನಲ್ಲಿ ಶ್ರದ್ಧೆ,
ಗಾದೆ ಸುಳ್ಳಾಗದು } ನಿದ್ದೆ ಬಾರದವನಲ್ಲಿ ವಿದ್ಯೆ.

ನಿಮ್ಮ ಪತ್ರಗಳು

ಚಾಮುಂಡಿಬೆಟ್ಟದಲ್ಲಿ ಅವ್ಯವಸ್ಥೆಯ ಆಗರ

ಮಾನ್ಯರೆ,

ಮೈಸೂರು ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಾಲಯ ಅವ್ಯವಸ್ಥೆಯ ಆಗರವಾಗಿದೆ. ದಿನಾಂಕ 15–06–2026 ರಂದು ಅಮವಾಸ್ಯೆ ದಿನ ಚಾಮುಂಡಿ ಬೆಟ್ಟಕ್ಕೆ ಹೋದಾಗ ಇಲ್ಲಿಗೆ ಬಿ.ಪಿ, ಷುಗರ್ ಇದ್ದವರು ಯಾರಾದರೂ ಬಂದರೆ ಅವರಿಗೆ ತಲೆ ಸುತ್ತು ಬರುವುದು ಗ್ಯಾರಂಟಿ. ಕಾರಣ ಹಿಂದೆ ಧರ್ಮದರ್ಶನಕ್ಕೆ ಹೋಗಬೇಕಾದರೆ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಇರುವ ಸ್ಟೀಲ್ ಬ್ಯಾರಿಕೇಡ್‌ಗಳ ಮಾರ್ಗದ ಮೂಲಕ ಧರ್ಮದರ್ಶನಕ್ಕೆ ಹೋಗುತ್ತಿದ್ದೆವು. ಆದರೆ ಇಂದಿನ ಆಡಳಿತ ಮಂಡಳಿ ಆದೇಶದ ಮೇರೆಗೆ ದೇವಸ್ಥಾನದ ಹಿಂದೆ ಸುಮಾರು 10–12 ಕಬ್ಬಿಣದ ಬ್ಯಾರಿಕೇಡ್‌ಗಳನ್ನು ಜೋಡಿಸಿರುತ್ತಾರೆ. ಈ ಬ್ಯಾರಿಕೇಡ್‌ಗಳನ್ನು ಭಕ್ತಾದಿಗಳು ದಾಟಿ ಸರತಿ ಸಾಲು ಸೇರಬೇಕಾದರೆ ತಲೆ ಸುತ್ತಿ ಬೀಳುವುದು ಗ್ಯಾರಂಟಿ. ಮುಂಚೆ ಧರ್ಮದರ್ಶನಕ್ಕೆ ತೆರಳಬೇಕಾದರೆ 3–4 ಸ್ಟೀಲ್ ಬ್ಯಾರಿಕೇಡ್‌ಗಳನ್ನು ಸುತ್ತಿದರೆ ಸಾಕಾಗಿತ್ತು. ಈಗ ಒಂದೆರಡು ಸ್ಟೀಲ್ ಬ್ಯಾರಿಕೇಡ್‌ಗಳಿಗೆ ಬೀಗ ಹಾಕಿ ಸುಮಾರು 10–12 ಕಬ್ಬಿಣದ ಬ್ಯಾರಿಕೇಡ್ ಸುತ್ತಿದ ನಂತರ ಸ್ಟೀಲ್ ಬ್ಯಾರಿಕೇಡ್‌ಗಳು ಸುತ್ತಿ ಒಳಬರಬೇಕು.

ಸುಮಾರು 2–3 ಘಂಟೆ ಕಾದು ಅಮ್ಮನ ದರ್ಶನ ಪಡೆದು ಹೊರ ಬಂದ ನಂತರ ಭಕ್ತಾದಿಗಳಿಗೆ ಕುಂಕುಮದ ಖಾಲಿ ತಟ್ಟೆ ಒಂದು ಸ್ವಾಗತಿಸುತ್ತದೆ. ತಟ್ಟೆಯ ಪಕ್ಕದಲ್ಲಿ ಅರ್ಚಕರೊಬ್ಬರು ಖಾಲಿ ತಟ್ಟೆ ಇಟ್ಟು ಕುಂಕುಮ ಬೇಕಾದರೆ 10 ರೂ ಕೊಟ್ಟು ಕುಂಕುಮ ಕವರ್ ತೆಗೆದುಕೊಳ್ಳಿ ಎನ್ನುತ್ತಾರೆ. ಧರ್ಮದರ್ಶನ ಪಡೆದ ನಂತರ 10 ರೂ ಕೊಟ್ಟು ಕುಂಕುಮ ತೆಗೆದು ಕೊಳ್ಳಬೇಕು. ಭಕ್ತಾದಿಗಳು ಕುಂಕುಮ ಕೊಡಿ ಎಂದು ಕೇಳಿದಾಗ ಅಲ್ಲೆ ಇದ್ದ ಕುಂಕುಮವನ್ನು ಸ್ವಲ್ಪವು ಕೈಗೆ ಸಿಗದ ಹಾಗೆ ಕುಂಕುಮವನ್ನು ತಟ್ಟೆಗೆ ಎರಚುತ್ತಾರೆ. ಕುಂಕುಮ ಮಾರಾಟ ಮಾಡುವುದು ಆಡಳಿತ ಮಂಡಳಿಗೆ ಗೊತ್ತಿಲ್ಲವೆ? ಕುಂಕುಮವನ್ನು ಕೂಡಾ ದುಡ್ಡು ಕೊಟ್ಟು ಕೊಳ್ಳಬೇಕು. ಉಚಿತವಾಗಿ ಕುಂಕುಮ ಕೊಡಲು ಆರ್ಥಿಕ ಸಮಸ್ಯೆಯೇ? ಜೊತೆಗೆ ಇನ್ನೊಂದು ಮಹಾಮೋಸವಿದೆ. ತೆಂಗಿನ ಕಾಯಿ ಒಡೆದುಕೊಡುವ ಸ್ಥಳದ ಪಕ್ಕದಲ್ಲಿರುವ ಕಿಟಕಿ ಮೂಲಕ ದೇವರ ಪ್ರಸಾದ ಮಾರಾಟ ಮಾಡುತ್ತಾರೆ. ಒಂದು ಸಣ್ಣ ಬಾಕ್ಸ್ ಪ್ರಸಾದಕ್ಕೆ 25 ರೂ. ದೇವಸ್ಥಾನಗಳಲ್ಲಿ ಪ್ರಸಾದ ಮಾರುವುದನ್ನು ನಾನು ಇದೇ ಮೊದಲು ಬಾರೀ ನೋಡಿರೋದು. ಇನ್ನು ಮುಂದೆಯಾದರು ತಟ್ಟೆಯಲ್ಲಿ ಕುಂಕುಮ ಇಡುವಂತೆ ನಿಗಾವಹಿಸಲಿ. ಪ್ರಸಾದ ಮಾರುವುದನ್ನು ನಿಲ್ಲಿಸಿ ಉಚಿತವಾಗಿ ಕೊಡಲಿ. ಆಷಾಡ ಮಾಸ ಇನ್ನು 1 ತಿಂಗಳು ಇರುವಾಗಲೇ 10–12 ಕಬ್ಬಿಣದ ಬ್ಯಾರಿಕೇಡ್‌ಗಳನ್ನು ಜೋಡಿಸಿರುವುದನ್ನು ತೆಗೆದು ಹಾಕಲಿ ಮತ್ತು ಸಾರ್ವಜನಿಕರು ಯಾರಾದರು ತಲೆ ಸುತ್ತು ಮತ್ತು ಆಯಾಸ ಬಂದು ಬಿದ್ದು ಅಘಾತಕ್ಕೆ ಒಳಗಾದರೆ ಆಡಳಿತ ಮಂಡಳಿಯವರು ಹೊಣೆಯಾಗುತ್ತಾರೆಯೇ?

–ಎಂ.ಎನ್.ಧರಣಿ ವೆಂಕಟೇಶ, ಸಾಮಾಜಿಕ ಕಾರ್ಯಕರ್ತ, ಮೈಸೂರು

ಜನರ ನಂಬಿಕೆ ಬಗ್ಗೆ ಕೇವಲವಾಗಿ ಮಾತಾಡುವವನು ವಿಚಾರವಾದಿಯೇ?

ಮಾನ್ಯರೆ,

ಅಂತೂ ಕೊನೆಗೂ ಪ್ರಮುಖ ರಾಜಕಾರಣಿಯೊಬ್ಬರು ಈ ರಾಜ್ಯದ ಸ್ವಯಂ ಘೋಷಿತ ವಿಚಾರವಾದಿ (ವ್ಯಾಧಿ) ಕೆ.ಎಸ್.ಭಗವಾನ್ ವಿರುದ್ಧ ಧ್ವನಿಯೆತ್ತಿದ್ದಾರೆ. ಅವರೇ ಕಾಂಗ್ರೆಸ್ ನಾಯಕ ವಿ.ಎಸ್.ಉಗ್ರಪ್ಪ. ಕಳೆದ ಹಲವಾರು ವರ್ಷಗಳಿಂದ ಈ ವಿಚಾರವಾದಿಯು ಧಾರ್ಮಿಕ ಮುಖಂಡರು (ಹಿಂದೂ ಧಾರ್ಮಿಕ ಮುಖಂಡರನ್ನು ಮಾತ್ರ!), ದೇವರುಗಳನ್ನು ಮತ್ತು ದೇವರುಗಳನ್ನು ಪೂಜಿಸುವವರನ್ನು ಬಾಯಿಗೆ ಬಂದಂತೆ ಬೈದಾಡಿಕೊಂಡು ಓಡಾಡುತ್ತಿದ್ದರೂ ಯಾರೂ ಮಾತನಾಡುತ್ತಿರಲಿಲ್ಲ. ಎಲ್ಲರಿಗೂ ಅದೇನು ಮಂಕು ಕವಿದಿತ್ತೋ ಆ ಭಗವಂತನೇ (ಭಗವಾನ್?) ಬಲ್ಲ! ಆದರೆ ಕಾಂಗ್ರೆಸ್ ನಾಯಕ ವಿ.ಎಸ್. ಉಗ್ರಪ್ಪ ಸರಿಯಾಗಿಯೇ ಪ್ರಶ್ನಿಸಿದ್ದಾರೆ. ಈ ಭಗವಾನ್ ಕೊಡುಗೆ ನಾಡಿಗೆ, ದೇಶಕ್ಕೆ ಏನಿದೆ? ಏನೂ ಇಲ್ಲ. ಈತ ನಿವೃತ್ತನಾದ ದಿನದಿಂದ ಇಲ್ಲಿಯವರೆಗೆ ಪೆನ್ಷನ್ ರೂಪದಲ್ಲಿ ಪಡೆದಿರುವ ಲಕ್ಷಾಂತರ ರೂ ಹಣದಲ್ಲಿ ಬಡವರಿಗೆ ಎಷ್ಟು ಹಣ ಖರ್ಚು ಮಾಡಿರಬಹುದು? ಇಂಥವರು ನಾಡಿಗೆ ಕ್ಯಾನ್ಸರ್ ಇದ್ದ ಹಾಗೆ. ಜನರ ನಂಬಿಕೆ, ಆಚಾರ– ವಿಚಾರಗಳನ್ನು ಕೇವಲವಾಗಿ ಮಾತಾಡುವವನು ವಿಚಾರವಾದಿಯೇ ? ಅಂಥವನು ಅವಿವೇಕಿ. ನಮ್ಮ ಸಂವಿಧಾನದಲ್ಲಿಯೇ ಜನರಿಗೆ ಧಾರ್ಮಿಕ ಹಕ್ಕುಗಳನ್ನು ಕೊಡಮಾಡಲಾಗಿದೆ. ಅಂದಮೇಲೆ ಇಂತಹ ಮಹಾನ್ ವಿಚಾರವಾದಿಗಳು ಜನರ ಧರ್ಮಾಚರಣೆ, ನಂಬಿಕೆ, ಆಚಾರ–ವಿಚಾರಗಳ ಬಗ್ಗೆ ಮಾತಾಡುವುದೇನಿದೆ?


–ರಾಜಶೇಖರ ಮೂರ್ತಿ, ಬೆಳಗನಹಳ್ಳಿ, ಹೆಚ್ ಡಿ ಕೋಟೆ ತಾಲೂಕು

ಸರ್ಕಾರಿ ಕಚೇರಿಗಳಿಗೆ ಬೆಳಿಗ್ಗೆ 10 ಗಂಟೆಗೆ ಹಾಜರಿ ಸ್ವಾಗತಾರ್ಹ

ಮಾನ್ಯರೆ,

ರಾಜ್ಯದ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸರ್ಕಾರಿ ಅಧಿಕಾರಿಗಳು, ನೌಕರರು ಹಾಗೂ ಸಿಬ್ಬಂದಿ ಬೆಳಿಗ್ಗೆ 10 ಗಂಟೆಗೆ ಹಾಜರಾತಿ ದಾಖಲಿಸುವಂತೆ ಸೂಚನೆ ನೀಡಿರುವುದು ಸ್ವಾಗತಾರ್ಹ. ಏಕೆಂದರೆ ಕೆಲ ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು, ಸಿಬ್ಬಂದಿ ತಡವಾಗಿ ಬಂದು ನಿಗದಿತ ಸಮಯಕ್ಕಿಂತ ಮೊದಲೇ ಕಚೇರಿಯಿಂದ ಹೊರನಡೆಯುತ್ತಾರೆ. ಇದರಂತೆ ಜೂನ್ ತಿಂಗಳ 4ನೇ ತಾರೀಖಿನಂದು ಮುಖ್ಯಮಂತ್ರಿಗಳ ಸಹಯೋಗದಲ್ಲಿ ಸರ್ಕಾರಿ ಅಧಿಕಾರಿಗಳು ಜೊತೆ ಸಭೆ ನಡೆಸಿ ಎಲ್ಲರೂ ಸರಿಯಾಗಿ ಕೆಲಸಕ್ಕೆ ಬರಬೇಕು ಎಂದು ತಿಳಿಸಿರುವ ಹಿನ್ನೆಲೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶಾಲಿನಿ ರಜನೀಶ್ ಅವರು ಈ ಆದೇಶವನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಸೂಚಿಸಿರುವುದನ್ನು ಪಾಲಿಸಲು ಸರ್ಕಾರಿ ಅಧಿಕಾರಿಗಳು, ನೌಕರರು, ಸಿಬ್ಬಂದಿ ಸ್ಪಂದಿಸಬೇಕಾಗಿದೆ. ಮುಖ್ಯಮಂತ್ರಿಗಳು ಸರಿಯಾದ ಸಮಯದಲ್ಲಿ ಕರ್ತವ್ಯಕ್ಕೆ ಹಾಜರಾತಿ ಕಡ್ಡಾಯವಾಗಿರಿಸುವಂತೆ, ಕೆಲಸದಿಂದ ತೆರಳುವ ನಿರ್ಗಮನದ ಸಮಯವನ್ನು ಸಹ ಸೂಚಿಸಿದರೆ ಎಲ್ಲಾ ಸರ್ಕಾರಿ ಅಧಿಕಾರಿಗಳು ನೌಕರರು ಹಾಗೂ ಸಿಬ್ಬಂದಿಗಳಿಗೆ ಅನುಕೂಲವಾಗುತ್ತದೆ. ಮೈಸೂರಿನ ಕೆಲವು ರಾಜ್ಯ ಸರ್ಕಾರದ ಒಡೆತನದಲ್ಲಿರುವ ಕೆಲವು ಕಚೇರಿಗಳಲ್ಲಿ ಬೆಳಿಗ್ಗೆ ಸರಿಯಾದ ಸಮಯಕ್ಕೆ ಕೆಲಸಕ್ಕೆ ಹಾಜರಾದರೂ ಸಹ ಕೆಲಸದಿಂದ ನಿರ್ಗಮನದ ವೇಳೆ ಸಂಜೆ 7, 7:30 ಹಾಗೂ 8 ಗಂಟೆಗೆ ನೌಕರರು ತೆರಳುವುದನ್ನು ಗಮನಿಸಿದ ಹಿನ್ನೆಲೆಯಲ್ಲಿ ಕೆಲಸಕ್ಕೆ ಹಾಜರಾತಿ ಸಮಯ ನಿಗದಿಪಡಿಸಿದಂತೆ, ಕೆಲಸದ ನಿರ್ಗಮನದ ಸಮಯವನ್ನು ಸೂಚಿಸಿದರೆ ಅನುಕೂಲವಾಗುತ್ತದೆ. **–ನಾಗೇಶ್, ಮಾನಸಗಂಗೋತ್ರಿ, ಮೈಸೂರು**

ಗಬ್ಬು ನಾರುತ್ತಿರುವ ಸಾರ್ವಜನಿಕ ಬಸ್ ನಿಲ್ದಾಣ



ಮಾನ್ಯರೆ,

ಮೈಸೂರಿನ ಮಾನಂದವಾಡಿ ರಸ್ತೆಯ ಶಿವಪುರ ಬಸ್ ನಿಲ್ದಾಣದಲ್ಲಿ ಕಸದ ರಾಶಿ ಬಿದ್ದಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ. ಶ್ರೀರಾಂಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವ ಶಿವಪುರ ಬಸ್ ನಿಲ್ದಾಣದ ಎದುರು ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಹಾಗಾಗಿ ಸಾಕಷ್ಟು ಜನರು ಇಲ್ಲಿ ಬಸ್‌ಗಾಗಿ ಕಾಯುತ್ತಾರೆ. ಅದೂ ಅಲ್ಲದೆ ರಸ್ತೆ ಕಾಮಗಾರಿಯೂ ನಡೆಯುತ್ತಿರುವುದರಿಂದ ಏಕಮುಖ ಸಂಚಾರ ವ್ಯವಸ್ಥೆ ಮಾಡಿರುವುದರಿಂದ ವಾಹನಗಳ ಓಡಾಟದಿಂದ ಧೂಳುಮಯವಾಗಿದೆ ಅಲ್ಲದೆ ಫುಟ್‌ಪಾತ್ ಸಹಾ ಸರಿ ಇಲ್ಲದ ಕಾರಣ ಬಹಳ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಿ ದುರವಸ್ಥೆಯನ್ನು ಸರಿಪಡಿಸಬೇಕೆಂದು ಮನವಿ.

–ಶ್ರೀಮತಿ ಶಶಿಕಲಾ ಪ್ರಸಾದ್, ಶ್ರೀರಾಂಪುರ, ಮೈಸೂರು.

ಚಂಪಾ: ಬಂಡಾಯದ ಬೆಂಕಿ ಚೆಂಡು

> “ಪ್ರೀತಿ ಇಲ್ಲದೆ ನಾನು ಏನನ್ನೂ ಮಾಡಲಾರೆ. ದ್ವೇಷವನ್ನೂ ಎನ್ನುವ ಚಂಪಾ ಅವರು ಅಪ್ಪಟ ಮಾನವ ಪ್ರೇಮಿ. ಅಷ್ಟೇ ಸ್ನೇಹಮಯಿ. ಮಾತು ದೊಣ್ಣೆ, ಮನಸ್ಸು ಬೆಣ್ಣೆ. ಇದನ್ನು ಅವರ ಸಾಹಿತ್ಯದಲ್ಲೂ ಧಾರಾಳವಾಗಿ ಕಾಣಬಹುದು. ಮುಟ್ಟಿ ನೋಡಿಕೊಳ್ಳುವಂತೆ ಲೇಖನಿಯಿಂದ ಇರಿಯುವುದು ಅವರ ಬರಹದ ಲಕ್ಷಣ. ಇದ್ದಿದ್ದು ಇದ್ದಂಗೆ ಹೇಳಿ ಕೆಂಡದಂಥ ಕೋಪಬರಿಸುವುದು ಅವರ ಭಾಷಣದ ಅರ್ಥಾತ್ ಮಾತಿನ ಶೈಲಿ. ಚಂಪಾ ಅವರ ಲೇಖನಿಯ ಹರಿತಕ್ಕೆ, ಮಾತಿನ ತೀಕ್ಷ್ಣತೆಗೆ ತುತ್ತಾದವರಿಗೆ ಒಂದು ಕ್ಷಣ ನೋವೆನಿಸಿದರೂ ಅದೂ ಆಪ್ಯಾಯಮಾನವೇ ಹಲವರಿಗೆ. ಬಲಗೈನಲ್ಲಿ ಏಟು ಕೊಡುವ ಚಂಪಾ ಎಡಗೈನಲ್ಲಿ ಸಮಾಧಾನಿಸುವ ಸಜ್ಜನ. ‘ಪ್ರೀತಿಗಾಗಿ ಮಾಡಿದ ದ್ವೇಷ ಶಾಶ್ವತವಲ್ಲ’ ಎಂಬ ಮಾತಿಗೆ ಚಂಪಾ ಅನ್ವರ್ಥ.

ಪ್ರೊ.ಚಂದ್ರಶೇಖರ ಪಾಟೀಲ ಯಾರಿಗೆ ತಾನೇ ಗೊತ್ತಿಲ್ಲ? ಚಂಪಾ ಎಂಬ ಎರಡು ಅಕ್ಷರಗಳ ಹೆಸರು ಯಾರು ತಾನೇ ಕೇಳಿಲ್ಲ? ಕನ್ನಡ ಸಾರಸ್ವತ ಲೋಕದಲ್ಲಿ ಈ ಎರಡು ಅಕ್ಷರಗಳ ಮೋಡಿ ಅಂಥಾದ್ದು! ಅಷ್ಟೇ ಅಲ್ಲ ಬೀದಿಗಿಳಿದು ಸಂಘಟನೆ ಮಾಡಿ ಹೋರಾಟದಿಂದ ಕನ್ನಡ ಕಟ್ಟುವ ಕಾಯಕದಲ್ಲೂ ‘ಚಂಪಾ’ ಎನ್ನುವ ಎರಡಕ್ಷರ ಬಹಳ ಮಹತ್ವದ್ದಾಗಿದೆ. ಹಾಗಾಗಿ ‘ಚಂಪಾ’ ಎಂಬ ಎರಡಕ್ಷರ ಮಾತ್ರದಿಂದಲೇ ಕನ್ನಡ ನಾಡಿನ ಉದ್ದಗಲಕ್ಕೂ ಖ್ಯಾತರಾಗಿರುವ ಪ್ರೊ. ಚಂದ್ರಶೇಖರ ಪಾಟೀಲರು ಕನ್ನಡಿಗರೆದೆಗಡಲಲ್ಲಿ ನಿತ್ಯವೂ ಢಮರಿಸುವ ಕನ್ನಡ ಡಿಂಡಿಮವಾಗಿದ್ದಾರೆ. ವಿಶೇಷವಾಗಿ ಅವರ ಭಾಷಣದ ವೈಖರಿ ಹಾಗೂ ಬರಹದ ಭಾಷಾ ರೀತಿ ಕೂಡ ಸತ್ತಂತಿಹ ಕನ್ನಡಿಗರನ್ನು ಬಡಿದೆಚ್ಚರಿಸುವ ಕನ್ನಡದ ಜಾಗಟೆಯೇ ಸರಿ.

ಕನ್ನಡ ಕನ್ನಡ ಬರ್‍ರಿ ನಮ್ಮ ಸಂಗಡ ಎಂಬುದನ್ನು ತಮ್ಮ ಧ್ಯೇಯ ವಾಕ್ಯವನ್ನಾಗಿಸಿಕೊಂಡಿದ್ದ ಚಂಪಾ ಅವರು ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದವರು. ಎಂ.ಎ. (ಇಂಗ್ಲಿಷ್) ಮಾಡಿ, ಇಂಗ್ಲೆಂಡ್‌ವರೆಗೂ ಹೋಗಿ ಲೀಡ್ಸ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಸೇವೆಗೈದವರು. ಓರ್ವ ಇಂಗ್ಲಿಷ್ ಪ್ರಾಧ್ಯಾಪಕರೊಬ್ಬರು ಇಷ್ಟರ ಮಟ್ಟಿಗೆ ಕನ್ನಡವನ್ನು ಕಟ್ಟುವ ಕಾಯಕದಲ್ಲಿ ತಮ್ಮಿಡೀ ಬದುಕನ್ನು ಸಮರ್ಪಿಸಿಕೊಂಡಿದ್ದು ಬಹಳ ಅಪರೂಪ. ಇಲ್ಲವೆಂದರೂ ಆದೀತು. ಅವರು ಕನ್ನಡವನ್ನೇ ತಮ್ಮ ಜೀವ, ಜೀವನ ವೆಂದುಕೊಂಡವರು. ಒಂದೆಡೆ ಅವರೇ ಹೇಳಿಕೊಂಡಿರುವ ಶಾಸನದಂಥ ಮಾತುಗಳಿವು–

‘ಉನ್ನತ ಶಿಕ್ಷಣದಲ್ಲಿ ನಾನು ಕನ್ನಡವನ್ನು ಒಂದು ವಿಷಯವನ್ನಾಗಿ ಅಭ್ಯಾಸ ಮಾಡಿದವನೇ ಅಲ್ಲ. ಆದರೆ, ನನ್ನ ತಾಯಿ ನುಡಿಯೇ ನನ್ನ ಬದುಕಿಗೊಂದು ವ್ಯಕ್ತಿತ್ವ ನೀಡಿದ್ದು. ಇಂಗ್ಲಿಷ್ ನನ್ನ ಉಪ ಜೀವನ. ಕನ್ನಡ ನನ್ನ ಜೀವನ’ ಇದು ಚಂಪಾ ಅವರು ತಮ್ಮ ಮಾತೃಭಾಷೆ ಕನ್ನಡದ ಬಗ್ಗೆ ಇಟ್ಟಿದ ಎಣೆಯಿಲ್ಲದ ಉತ್ಕಟ ಅಭಿಮಾನಕ್ಕೆ ಅನನ್ಯ ಪ್ರೀತಿಗೆ ಸಾಕ್ಷಿ.

ನೇರ ನಡೆ ನುಡಿಗೆ ಹೆಸರಾಗಿ ದಿಟ್ಟತನಕ್ಕೆ ಪರ್ಯಾಯ ಪದದಂತಿದ್ದ ಇಂಥ ಚಂಪಾ, ನ್ಯಾಯ, ನೀತಿ, ಧರ್ಮ, ಸತ್ಯ, ಪ್ರಾಮಾಣಿಕತೆಯ ಮುಂದೆ ತಲೆಬಾಗುವವರೇ ಹೊರತು ಸಲ್ಲದ್ದಕ್ಕೆಲ್ಲಾ ಎಂದೂ ಕೂಡ ಯಾರಿಗೂ ಬಗ್ಗಿದವರಲ್ಲ. ಅದು ಅವರಿಗೆ ಒಗ್ಗದ ವಿಷಯ. ಅದಕ್ಕೇನೆ ಸಾಹಿತ್ಯದಲೆಂತೋ ಹಾಗೆಯೇ ನಡೆ–ನುಡಿಯಲ್ಲೂ ಸಹ ಬಂಡಾಯದ ಬೆಂಕಿ ಎಂದೇ ಅವರನ್ನು ಬಲ್ಲವರು ಬಣ್ಣಿಸುತ್ತಾರೆ. ಚಂಪಾ ಅವರ ಸಾಹಿತ್ಯವೆಂದರೆ ಬಂಡಾಯದ ಬಿಸಿಯಲ್ಲಿ ಬೆಂದು ಬಂದ ಕಲ್ಲು ಸಕ್ಕರೆ. ಇದನ್ನು ಸವಿದವರೇ ಬಲ್ಲರು ಚಂಪಾ ಬರಹದ ಚಂಪಾಕಲಿ ಸಿಹಿಯನ್ನು. ಚಂಪಾ ಅಂದರೆ, ಚಂಪಾ ಸಾಹಿತ್ಯವೆಂದರೆ ಹಾಗೆಯೇ. ಕನ್ನಡ ಸಾರಸ್ವತ ಲೋಕದಲ್ಲಿ ಅವರು ಲೇಖನಿಯನ್ನು ಖಡ್ಗ ಮಾಡಿಕೊಂಡು ಸಾಹಿತ್ಯ ಪುಷ್ಪಗಳನ್ನು ಅರಳಿಸಿದವರು.

ಆಧುನಿಕ ಕನ್ನಡ ಸಾಹಿತ್ಯದ ನವ್ಯೋತ್ತರ ಘಟ್ಟವಿದೆಯಲ್ಲಾ, ಅದೇ ಕನ್ನಡ ಸಾಹಿತ್ಯಕ್ಕೆ ಪ್ರಮುಖ ತಿರುವುಗಳನ್ನು ನೀಡಿದ್ದು. ದಲಿತ–ಬಂಡಾಯ ಸಾಹಿತ್ಯ ಪ್ರವಾಹದೋಪಾದಿಯಲ್ಲಿ ನುಗ್ಗಿದ ಕಾಲವದು. ಈ ಸಂದರ್ಭದಲ್ಲಿ ಎಡಪಂಥೀಯ ಲೇಖಕರೆಂದೇ ಗುರುತಿಸಿಕೊಂಡ ಬಂಡಾಯದವರು ಶೋಷಿತ ವರ್ಗದ ಬದುಕಿನ ಮೇಲೆ ಕ್ಷ–ಕಿರಣ ಬೀರುವತ್ತ ಅವರ ಸಮಸ್ಯೆಗಳನ್ನು ಪ್ರತಿಭಟನೆಯ ಮೂಲಕ ಅಭಿವ್ಯಕ್ತಪಡಿಸುತ್ತಾ ಬಂದಿದ್ದಾರೆ.

ಇಲ್ಲಿ ತಮ್ಮ ಲೇಖನಿಯನ್ನೇ ಬಂದೂಕು ಮಾಡಿಕೊಂಡು ಗುಂಡು ಹೊಡೆದಂತೆ ಬರೆಯತೊಡಗಿ ಬಂಡಾಯದಿಂದಲೇ ಗುರುತಿಸಿಕೊಂಡ ಪ್ರಮುಖ ಲೇಖಕರಲ್ಲಿ ಚಂಪಾ ಅವರೂ ಒಬ್ಬರು. ‘ಖಡ್ಗವಾಗಲಿ ಕಾವ್ಯ’ ಎಂಬುದು ಇವರ ಸಾಹಿತ್ಯದ ಗೈಡ್ ಲೈನ್. ಈ ಮಾರ್ಗದಲ್ಲೇ ಎಲ್ಲೂ ರಾಜಿಯಾಗದೆ ಸಾಹಿತ್ಯ ಕೃಷಿ ಮಾಡುತ್ತಾ, ‘ಬಾನುಲಿ’ ಕವನ ಸಂಕಲನದ ಮೂಲಕ ಮೊದಲಿಗೆ ಕನ್ನಡ ಸಾರಸ್ವತ ಲೋಕ ಪ್ರವೇಶಿಸಿದ ಚಂಪಾ, ಬಂಡಾಯ ಕವಿಯಾಗಿಯೇ ಬೆಳೆದವರು. ತಮ್ಮ ಕೃತಿಗಳನ್ನೂ ಬೆಳೆಸಿದವರು. ಹಾಗಾಗಿ ಬಂಡಾಯ ಕವಿ ಎಂದೇ ಹೆಚ್ಚು ಪ್ರಸಿದ್ಧರು. ಮೊನಚಾದ ವ್ಯಂಗ್ಯಕ್ಕೆ ಹೆಸರಾದ ಅವರು, ಹರಿತವಾದ ಟೀಕೆ, ಟಿಪ್ಪಣಿಗೂ ಅಷ್ಟೇ ಖ್ಯಾತರು.



ಪ್ರೊ.ಚಂದ್ರಶೇಖರ ಪಾಟೀಲ

ಇಂದು ಚಂಪಾ ಜನ್ಮದಿನ

ಆದರೆ, ಚಂಪಾ ಅವರು ಎಂದೂ ಅಗ್ಗದ ಸಾಹಿತ್ಯ ಸೃಷ್ಟಿಸಿದವರಲ್ಲ. ಅವರದ್ದು ಅರ್ಥಹೀನ ಆಚಾರ–ವಿಚಾರಗಳ, ಗೊಡ್ಡು ಸಂಪ್ರದಾಯಗಳ ವಿರುದ್ಧ ಜಾಗೃತಿಯ ಚಾಟಿಯುಷ್ಟೆ. ಖ್ಯಾತ ಸಾಹಿತಿ ಡಾ.ಎಚ್ಚೆಸ್ಕೆ ಅವರ ಮಾತುಗಳಲ್ಲೇ ಹೇಳುವುದಾದರೆ–

‘ಚಂಪಾ ಮೂಲತಃ ಬಂಡಾಯಗಾರ. ಎಲ್ಲ ಅರ್ಥಹೀನ ಸ್ವೀಕೃತ ಆಚಾರ ವಿಚಾರಗಳ ವಿರುದ್ಧ ಅವರ ಬಂಡಾಯ. ಇದು ನಿಧಾನವಾಗಿ ಬಂದಾಗ ಬರಲಿ–ಎಂಬ ಸಹನೆ ಇವರದ್ದಲ್ಲ. In the long run all of us will be dead ಈಗ. ಇಲ್ಲೇ, ನಮ್ಮ ಕಾಲದಲ್ಲೇ ಆಗಿ ಬಿಡಬೇಕು. ಇದು ಜರೂರು. ಸಾಹಿತ್ಯ, ಸಂಘಟನೆ, ಸಂಸ್ಥೆ ಎಲ್ಲವೂ ಇದಕ್ಕೆ ಸಾಧನ. ಹಾಗೆಂದು ಅವರ ಸಾಹಿತ್ಯ ಕೇವಲ ಪ್ರಚಾರದ ಅಬ್ಬರವಲ್ಲ. ಉಪದೇಶವಲ್ಲ. ಅದು ಅಪ್ಪಟ ಸಾಹಿತ್ಯ. ಮೊನಚು, ಹೊಳಪು, ಪರಿಣಾಮಕಾರಿ, ಶುದ್ಧ ಸಾಹಿತ್ಯ ಪ್ರೇಮಿಗಳೆಂದುಕೊಳ್ಳುವವರಿಗೂ ಪ್ರಿಯವಾಗುವ ಬರಹವೂ ಬೇಕಾದಷ್ಟು ಉದಾಹರಣೆ ಅವರ ‘ಶಾಲ್ಮಲಾ’. ನವೋದಯ, ಪುರೋಗಾಮಿ, ನವ್ಯ ಮುಂತಾದ ಮಜಲುಗಳನ್ನು ದಾಟಿ, ಉದ್ದಕ್ಕೂ ‘ಬಂಡಾಯ’ದ ದನಿ ಉಳಿಸಿಕೊಂಡು ಕಂಡದ್ದನ್ನೆಲ್ಲ ಪ್ರಶ್ನಿಸುತ್ತಾ ಸಾಗಿ ಬಂದ ಕವಿ ಚಂಪಾ ಎಂದಿಗೂ ನಿಂತ ನೀರಾಗುವುದಿಲ್ಲ’.

ಸುಮಾರು ಐದೂವರೆ ದಶಕಗಳ ಕಾಲ ಸಾಹಿತ್ಯ ಕೃಷಿ ಮಾಡಿರುವ ಚಂಪಾ ಅವರು ಸಂಖ್ಯೆಯ ದೃಷ್ಟಿಯಿಂದ ಬರೆದದ್ದು ಕಡಿಮೆಯೇ. ಅವರ ಕೃತಿಗಳ ಸಂಖ್ಯೆ ಐವತ್ತನ್ನೂ ದಾಟುವುದಿಲ್ಲ. ಆದರೆ ಬರೆದದ್ದೆಲ್ಲವೂ ಮೌಲಿಕವೆಂಬುದು ಇಲ್ಲಿ ಮುಖ್ಯ. ಹನ್ನೆರಡು ಕವನ ಸಂಕಲನ, ಹನ್ನೊಂದು ನಾಟಕ ಮತ್ತು ಹಲವಾರು ಸಂಪಾದಿತ ಕೃತಿಗಳೂ ಸೇರಿದಂತೆ ಸುಮಾರು 45 ಕೃತಿಗಳನ್ನು ನಾಡಿಗೆ ನೀಡಿರುವ ಅವರು ತನ್ಮೂಲಕ ಕನ್ನಡ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿದ್ದಾರೆ. ಚಂಪಾ ಅವರ ಕಾವ್ಯಗಳೇ ಒಂದು ವಿಶಿಷ್ಟ. ನಾಟಕಗಳೂ ಅಷ್ಟೆ ವಿಭಿನ್ನ. ಪ್ರಬಂಧಗಳೂ ಆಕರ್ಷಕ. ಸಂಪಾದಿತವೂ ಸಂಗ್ರಹಯೋಗ್ಯ. ಅಂಕಣ ಬರಹಗಳಂತೂ ಅದ್ಭುತ. ಚಂಪಾರ ವಿಶೇಷವೆಂದರೆ ಕಾವ್ಯದಲ್ಲಿ ನಾಟಕದ ಗುಣವನ್ನೂ, ನಾಟಕದಲ್ಲಿ ಕಾವ್ಯಗುಣವನ್ನೂ ತುಂಬಿ ಯಶಸ್ವಿಯಾಗಿ ಓದುಗನನ್ನು ಸೂಜಿಗಲ್ಲಿನಂತೆ ಸೆಳೆದುಕೊಳ್ಳುವುದು. ಈ ನಿಟ್ಟಿನಲ್ಲಿ ಚಂಪಾ ರಂಗಭೂಮಿಗೊಂದು ತಮ್ಮದೇ ಆದ ಹೊಸ ಬೆಳಕು ಕೊಟ್ಟಿದ್ದಾರೆ.

ಪತ್ರಿಕೋದ್ಯಮಿ ಮತ್ತು ಪುಸ್ತಕೋದ್ಯಮಿಯೂ ಆದ ಚಂಪಾ ಬಹಳ ಕಾಲದಿಂದಲೂ ‘ಸಂಕ್ರಮಣ’ ಪತ್ರಿಕೆ ನಡೆಸಿದವರು. ನಿಜವಾಗಿಯೂ ಅವರ ಭಾಷೆಯ ಬಿಗಿ, ಹದ, ತೀವ್ರತೆ, ತೀಕ್ಷ್ಣತೆ, ಸೊಗಸು, ಸೊಗಡನ್ನು ಕಾಣಬೇಕಾದರೆ ಸಂಕ್ರಮಣದ ‘ಚಂಪಾ ಕಾಲಂ’ ಅನ್ನು ಓದಬೇಕು. ಅಂಕಣ ಬರಹ ಹೇಗಿರಬೇಕೆಂಬುದಕ್ಕೆ ಚಂಪಾ ಕಾಲಂ ಉತ್ತರವಾಗಬಲ್ಲುದು. ನಿಜಕ್ಕೂ ಅಂಕಣಕಾರರಾಗಬಯಸುವವರಿಗೆ, ಅಂಕಣಕಾರರಾಗಿ ಬರೆಯುತ್ತಿರುವವರಿಗೆ, ವಿಶೇಷವಾಗಿ ಯುವ ಬರಹಗಾರರಿಗೆ ಚಂಪಾ ಬರವಣಿಗೆಯು ಅಧ್ಯಯನವು ಕಲಿಕಾ ಕೇಂದ್ರವಾಗಬಲ್ಲದು. ಅಂತೆಯೇ ‘ಸಂಕ್ರಮಣ’ ಪತ್ರಿಕೆ ಮೂಲಕವೂ ಕನ್ನಡ ಸಾಹಿತ್ಯದ ಕೈಂಕರ್ಯ ಮಾಡಿ ಹಲವು ಹತ್ತು ಪ್ರತಿಭೆಗಳನ್ನು ಬೆಳೆಸಿದ ಕ್ರಿಯಾಶೀಲರಿವರು. ಗಿರಡ್ಡಿ ಮತ್ತು ಪಟ್ಟಣಶೆಟ್ಟರೊಡಗೂಡಿ ‘ಸಂಕ್ರಮಣ’ ಪತ್ರಿಕೆ ಪ್ರಾರಂಭಿಸಿದರಾದರೂ ಮುಂದೆ ತಾವೊಬ್ಬರೇ ಅದನ್ನು ಮುಂದುವರೆಸಿಕೊಂಡು ಬಂದರು. ಇದವರ ಮಹತ್ತರ ಸಾಧನೆಯೂ ಹೌದು. ಹಾಗೆಯೇ ಬಹಳ ಶ್ರಮವಹಿಸಿ ಆಸಕ್ತಿಯಿಂದ ಸಂಕ್ರಮಣ ಪ್ರಕಾಶನದಿಂದ ಅವರು ಹೊರತಂದಿರುವ ‘ಲೇಖಕರ ವಿಳಾಸಗಳು’ ಗ್ರಂಥವಂತೂ ಅತ್ಯುಪಯುಕ್ತ ಕೃತಿ. ಈಗಲೂ ಸಹ ಕಾಲ ಕಾಲಕ್ಕೆ ತಿದ್ದುಪಡಿಗೊಳ್ಳುತ್ತಾ ಈ ಗ್ರಂಥ ಹಲವು ಸಂಪುಟಗಳಲ್ಲಿ ಪ್ರಕಟವಾಗುತ್ತಲೇ ಇದೆ. ತಮ್ಮೀ ಪ್ರಕಾಶನ ಸಂಸ್ಥೆಯಿಂದ ಪ್ರತಿ ವರ್ಷ ವಿವಿಧ ಸಾಹಿತ್ಯ ಸ್ಪರ್ಧೆಗಳನ್ನು ಏರ್ಪಡಿಸಿ, ವಿಜೇತರಿಗೆ ಬಹುಮಾನ ವಿತರಿಸಿ ಉದಯೋನ್ಮುಖ ಸಾಹಿತ್ಯ ಪ್ರತಿಭೆಗಳನ್ನು ಪ್ರೋತ್ಸಾಹಿಸುತ್ತಿದ್ದ ಚಂಪಾ ಅವರ ಸಾಹಿತ್ಯಕ ಮನಸ್ಸು ಮತ್ತು ಹೃದಯ ವೈಶಾಲ್ಯತೆ ಬಹುದೊಡ್ಡದು.

ಪ್ರೀತಿ ಇಲ್ಲದೆ ನಾನು ಏನನ್ನೂ ಮಾಡಲಾರೆ. ದ್ವೇಷವನ್ನೂ ಎನ್ನುವ ಚಂಪಾ ಅವರು ಅಪ್ಪಟ ಮಾನವ ಪ್ರೇಮಿ. ಅಷ್ಟೇ ಸ್ನೇಹಮಯಿ. ಮಾತು ದೊಣ್ಣೆ ಮನಸ್ಸು ಬೆಣ್ಣೆ. ಇದನ್ನು ಅವರ ಸಾಹಿತ್ಯದಲ್ಲೂ ಧಾರಾಳವಾಗಿ ಕಾಣಬಹುದು. ಮುಟ್ಟಿ ನೋಡಿಕೊಳ್ಳುವಂತೆ ಲೇಖನಿಯಿಂದ ಇರಿಯುವುದು ಅವರ ಬರಹದ ಲಕ್ಷಣ. ಇದ್ದಿದ್ದು ಇದ್ದಂಗೆ ಹೇಳಿ ಕೆಂಡದಂಥ ಕೋಪಬರಿಸುವುದು ಅವರ ಭಾಷಣದ ಅರ್ಥಾತ್ ಮಾತಿನ ಶೈಲಿ. ಚಂಪಾ ಅವರ ಲೇಖನಿಯ ಹರಿತಕ್ಕೆ, ಮಾತಿನ ತೀಕ್ಷ್ಣತೆಗೆ ತುತ್ತಾದವರಿಗೆ ಒಂದು ಕ್ಷಣ ನೋವೆನಿಸಿದರೂ ಅದೂ ಆಪ್ಯಾಯಮಾನವೇ ಹಲವರಿಗೆ. ಬಲಗೈನಲ್ಲಿ ಏಟು ಕೊಡುವ ಚಂಪಾ ಎಡಗೈನಲ್ಲಿ ಸಮಾಧಾನಿಸುವ ಸಜ್ಜನ. ಪ್ರೀತಿಗಾಗಿ ಮಾಡಿದ ದ್ವೇಷ ಶಾಶ್ವತವಲ್ಲ ಎಂಬ ಮಾತಿಗೆ ಚಂಪಾ ಅನ್ವರ್ಥ. ಕಲಹಕ್ಕೆ ಚಂಪಾ ಹೆಸರುವಾಸಿಯಾಗಿದ್ದರು. ಕಲಹದಲ್ಲೇ ಸಾಹಿತ್ಯ ಲೋಕಕ್ಕೊಂದು ನವನಾವೀನ್ಯ ಕಲರವ ತಂದವರಿವರು. ಸಮಾನ ಮನಸ್ಕ ಸಾಹಿತ್ಯ ಸ್ನೇಹಿಗಳೊಂದಿಗೆ ಚಂಪಾ ಅವರು ರಂಪ ಮಾಡಿ ಜಗಳ ಕಾಯುತ್ತಿದ್ದದ್ದು ಒಂದು ಸ್ವಾರಸ್ಯವೆ! ಚಂಪಾ ಅವರ ಪ್ರೀತಿಯ ಹೃದಯವಂತಿಕೆಯನ್ನು ಕಂಡವರಾರೂ ಖಂಡಿತ ಅವರನ್ನು ದ್ವೇಷಿಸುತ್ತಿರಲಿಲ್ಲ. ಇದೇ ಚಂಪಾ ಅವರ ವಿಶಿಷ್ಟತೆ.


ಇಂಥ ಚಂಪಾ ಎಂಬ ಎರಡಕ್ಷರಗಳ ಖ್ಯಾತಿಯ ಪ್ರೊ.ಚಂದ್ರಶೇಖರ ಪಾಟೀಲರ ಹುಟ್ಟೂರು ಹತ್ತೀಮತ್ತೂರು. ಹುಟ್ಟಿದ್ದು ಜೂನ್ 18, 1939. ತಂದೆ ಬಸವರಾಜ ಹಿರೇಗೌಡ ಪಾಟೀಲ. ತಾಯಿ ಮುರಿಗೆವ್ವ. ಹುಟ್ಟಿದೂರಿನಲ್ಲೇ ಅವರ ಪ್ರಾಥಮಿಕ ವಿದ್ಯಾಭ್ಯಾಸ. ಆನಂತರ ಹಾವೇರಿಯಲ್ಲಿ, ಧಾರವಾಡದಲ್ಲಿ. ಇಂಗ್ಲಿಷ್ ಪ್ರೊಫೆಸರ್‌ರಾದರೂ ಹೃದಯದ ತುಂಬಾ ಕನ್ನಡದ ಮಿಡಿತ. ಗುರು ವಿ.ಕೃ.ಗೋಕಾಕ್ ಅವರಿಂದ ಚಂಪಾ ಪ್ರಭಾವಿತರಾದದ್ದು ಅಪಾರ. ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸಾಹಿತ್ಯ ಬೋಧಿಸುತ್ತಲೇ ಆದದ್ದು ನಾಡು ಮೆಚ್ಚಿದ ಕನ್ನಡ ಸಾಹಿತ್ಯ ಕೃಷಿಕ. ಕನ್ನಡ ಎನೆ ಕುಣಿದಾಡುವ ಕವಿ ಮನದ ಚಂಪಾ, ಜನಪರ ಚಳವಳಿಗಳಲ್ಲಿ ಸದಾ ಮುಂದು. ಜೆ.ಪಿ.ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದರು. ಗೋಕಾಕ್ ಚಳವಳಿಯಲ್ಲೂ ಮುಖ್ಯಪಾತ್ರ ವಹಿಸಿದ್ದರು. ಕನ್ನಡಕ್ಕಾಗಿ ಶಾಸ್ತ್ರೀಯ ಭಾಷಾ ಹೋರಾಟದಲ್ಲೂ ಇವರು ಮುಂದಿದ್ದರು. ಕರ್ನಾಟಕ ಬರಹಗಾರರು ಮತ್ತು ಕಲಾವಿದರ ಒಕ್ಕೂಟದಲ್ಲೂ ಸಕ್ರಿಯರಾಗಿದ್ದ ಚಂಪಾ, ಬಂಡಾಯ ಮತ್ತು ದಲಿತ ಚಳವಳಿಗಳಲ್ಲೂ ಚಟುವಟಿಕೆಯಿಂದಿದ್ದರು. ‘ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ (1996–1999), ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ (2004–2008) ಚಂಪಾ ಅವರ ಕಾರ್ಯ ನಿರ್ವಹಣೆ ಮತ್ತು ಸಾಧನೆಯನ್ನು ನಾಡು ಮರೆಯುವಂತೆಯೇ ಇಲ್ಲ. ಕನ್ನಡ ಕಟ್ಟುವಲ್ಲಿ ಕೆಲವು ಮೊದಲುಗಳನ್ನು ನಿರ್ಮಿಸಿದ ಕೀರ್ತಿಯೂ ಇವರಿಗಿದೆ.

ಇಂದಿರಾಗಾಂಧಿ ತಂದ ತುರ್ತು ಪರಿಸ್ಥಿತಿಯ ಅಡಿಯಲ್ಲಿ 26 ದಿನ ಜೈಲುವಾಸ ಅನುಭವಿಸಿ ಅಲ್ಲೂ ‘ಇಪ್ಪತ್ತಾರು ದಿನ ಇಪ್ಪತ್ತೈದು ರಾತ್ರಿ’ ಎಂಬ ಕೃತಿ ರಚಿಸಿ ಕಂಬಿಗಳ ಹಿಂದಿನ ಕತ್ತಲಲ್ಲೂ ಸಾಹಿತ್ಯದ ಬೆಳಕು ಚೆಲ್ಲಿದ ಚಂಪಾ, ಕನ್ನಡದ ಪ್ರಚಂಡರೇ ಸರಿ. ಸಮಾನ ಮನಸ್ಕರೊಡಗೂಡಿ ತಾವೇ ಒಂದು ಪಕ್ಷ ಸಂಘಟಿಸಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದು ಕೂಡ ಅವರ ಒಂದು ಸಾಧನೆಯೇ!

ಪ್ರಮುಖ ಕೃತಿಗಳು: ಬಾನುಲಿ, ಮಧ್ಯಬಿಂದು, ಹತ್ತೊಂಬತ್ತು ಕವನಗಳು (1967), ಗಾಂಧಿ ಸ್ಮರಣೆ (1976), ಓ ಎನ್ನ ದೇಶಬಾಂಧವರೇ (1977), ಹೂವು ಹಣ್ಣು ತಾರೆ (1982), ಅರ್ಧ ಸತ್ಯದ ಹುಡುಗಿ (1989), ಗುಂಡಮ್ಮನ ಹಾಡು, ದೇವಭಾಗ, At the other end, ಚಂಪಾ ಚುಟುಕು (1993), ಶಾಲ್ಮಲಾ ನನ್ನ ಶಾಲ್ಮಲಾ, ಚಂಪಾ ಸಮಗ್ರ ಕಾವ್ಯ (1994), ಚಂಪಾ ಚುಟುಕುಗಳು (2011), ಮತ್ತೊಂದು ಎಲೆ (2016) ಇವು ಅವರ ಕವನ ಸಂಕಲನಗಳು. ಅಸಂಗತ ನಾಟಕ, ಕೊಡೆಗಳು, ಅಪ್ಪ, ಕುಂಟ ಕುಂಟ ಕುರವತ್ತಿ, ಗುರ್ತಿನವರು, ಟಿಂಗರ ಬುಡ್ಡಣ್ಣ, ಗೋಕರ್ಣದ ಗೌಡಸಾನಿ, ಕತ್ತಲರಾತ್ರಿ, ಜಗದಂಬೆಯ ಬೀದಿನಾಟಕ, ಬುರಡೀಬಾಬನ ವಸ್ತ್ರಾಪಹರಣ, ಪಣದ ನಳಕವಿಯ ಮಸ್ತಕಾಭಿಷೇಕ, ವಂದಿಮಾಗಧ ಇವು ನಾಟಕಗಳು. ಸಂಕ್ರಮಣ ಕಾವ್ಯ (1964), ಗಾಂಧಿ ಗಾಂಧಿ ಗಾಂಧಿ (1977), ಜೂನ್75–ಮಾರ್ಚ್77, ಸಂಕ್ರಮಣ ಕಾವ್ಯ ಸಂಚಯ (1993), ಬಂಡಾಯ ಮತ್ತು ಸಾಹಿತ್ಯ (1979), ಸಾಹಿತ್ಯ ಸೃಷ್ಟಿ–ಸಾಹಿತ್ಯ ವಿಮರ್ಶೆ (1992), ಪ್ರಗತಿಶೀಲ–ದಲಿತ–ಬಂಡಾಯ (1993), ಸಮಕಾಲೀನ ಸಾಂಸ್ಕೃತಿಕ ಚರ್ಚೆಗಳು (1994), ನೆಲ್ಸನ್ ಮಂಡೇಲಾ (1981), ಕನ್ನಡನಾಡಿಗೊಂದು ಪ್ರಾದೇಶಿಕ ಪಕ್ಷ (1987) ಇವು ಸಂಪಾದಿತ ಕೃತಿಗಳು. ಇಪ್ಪತ್ತೈದು ದಿನ ಇಪ್ಪತ್ತಾರು ರಾತ್ರಿ, ಬೇಂದ್ರೆ ನಾನು ಕಂಡಂತೆ ನಾನು ಕಂಡಷ್ಟು, ಪಾಳೆಗಾರ ಲಂಕೇಶ್ ನಾನು ಕಂಡಂತೆ ನಾನು ಕಂಡಷ್ಟು ಮುಂತಾದವು ಚಂಪಾ ಅವರ ಪ್ರಮುಖ ಕೃತಿಗಳು.

ಪ್ರಮುಖ ಪ್ರಶಸ್ತಿಗಳು: ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನಗಳು, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ದಿನಕರ ದೇಸಾಯಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ, ಕೆ.ವಿ.ಶಂಕರೇಗೌಡ ರಂಗಭೂಮಿ ಪ್ರಶಸ್ತಿ, ಸಂದೇಶ ಮಾಧ್ಯಮ ಪ್ರಶಸ್ತಿ, ಕರ್ನಾಟಕ ದಲಪದ ಪ್ರಾಧಿಕಾರದ ದಲಪದ ಚಂದ್ರ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, 83ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷತೆಯ ಗೌರವ ಸೇರಿದಂತೆ ನಾಡಿನ ನೂರಾರು ಪ್ರಶಸ್ತಿ–ಪುರಸ್ಕಾರ, ಸನ್ಮಾನ–ಗೌರವಗಳಿಗೆ ಚಂಪಾ ಭಾಜನರಾಗಿದ್ದು ಇವೆಲ್ಲಕ್ಕೂ ಕಿರೀಟವಿಟ್ಟಂತೆ 2009ನೇ ಸಾಲಿನ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ‘ಪಂಪ ಪ್ರಶಸ್ತಿ’ ಇವರ ಕೊರಳನ್ನು ಅಲಂಕರಿಸಿದೆ.

ಇಂಥಾ ಬಂಡಾಯ ಸಾಹಿತ್ಯ ದಿಗ್ಗಜ ಪ್ರೊ.ಚಂದ್ರಶೇಖರ ಪಾಟೀಲ ಇಂದು ನಮ್ಮೊಡನೆ ಭೌತಿಕವಾಗಿ ಇಲ್ಲವಾಗಿರಬಹುದು (ನಿಧನ 2022, ಜನವರಿ 10) ಆದರೆ, ಬೆಂಕಿಯಂಥಾ ಅವರ ಸಾಹಿತ್ಯದ ಬದುಕು ಹಾಗೂ ಕೃತಿಗಳು ಕನ್ನಡ ಸಾರಸ್ವತ ಲೋಕವನ್ನು ಶಾಶ್ವತವಾಗಿ ಬೆಳಗುತ್ತಲೇ ಇರುತ್ತವೆ.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ.94815 33167

ತಿರುಪತಿಯ ಪವಿತ್ರ ಶ್ರೀವಾರಿ ಪ್ರಸಾದದ ಗುಣಮಟ್ಟ ಸಂವರ್ಧನೆಗೆ ಸಿಎಫ್‌ಟಿಆರ್‌ಐ–ಸಿಎಸ್‌ಐಆರ್ ಸಾಥ್

ಮೈಸೂರು/ತಿರುಪತಿ, ಜೂ.17– ತಿರುಪತಿ ತಿರುಮಲದಲ್ಲಿ ಕೋಟ್ಯಾಂತರ ಭಕ್ತರಿಗೆ ವಿತರಿಸಲಾಗುವ ಪವಿತ್ರ ಶ್ರೀವಾರಿ ಪ್ರಸಾದದ ಗುಣಮಟ್ಟ, ಸುರಕ್ಷತೆ ಮತ್ತು ಪೌಷ್ಟಿಕ ಮೌಲ್ಯವನ್ನು ಮತ್ತಷ್ಟು ಉತ್ತಮಗೊಳಿಸುವ ಉದ್ದೇಶದಿಂದ ತಿರುಮಲ ತಿರುಪತಿ ದೇವಸ್ಥಾನಗಳು (ಟಿಟಿಡಿ) ಮತ್ತು ಸಿಎಸ್‌ಐಆರ್–ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾ ಸಂಸ್ಥೆ (ಸಿಎಸ್‌ಐಆರ್–ಸಿಎಫ್‌ಟಿಆರ್‌ಐ) ನಡುವೆ ಒಪ್ಪಂದವಾಗಿದೆ.

ಪ್ರಸಾದದ ಸಾಂಪ್ರದಾಯಿಕ ರುಚಿ, ವಿನ್ಯಾಸ, ಪಾವಿತ್ರ್ಯ ಮತ್ತು ಸಾಂಸ್ಕೃತಿಕ ಮಹತ್ವವನ್ನು ಸಂರಕ್ಷಿಸುತ್ತಲೇ, ಅದರ ಗುಣಮಟ್ಟ ಮತ್ತು ಏಕರೂಪತೆಯನ್ನು ಹೆಚ್ಚಿಸಲು ವೈಜ್ಞಾನಿಕವಾಗಿ ದೃಢೀಕರಿಸಲಾದ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಈ ಸಹಭಾಗಿತ್ವದ ಪ್ರಮುಖ ಉದ್ದೇಶವಾಗಿದೆ. ಒಪ್ಪಂದದಡಿ, ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಆಹಾರ ಪದಾರ್ಥಗಳ ನಿರ್ವಹಣೆ, ಖರೀದಿ, ಸಂಗ್ರಹಣೆ, ಸಂಸ್ಕರಣೆ ಹಾಗೂ ವಿತರಣಾ ಕ್ರಮಗಳನ್ನು ಸುಧಾರಿಸಲು ತಾಂತ್ರಿಕ ಸಹಕಾರ ಒದಗಿಸಲಿದೆ.





ಆಹಾರ ಮಾಲಿನ್ಯದ ಅಪಾಯವನ್ನು ಕಡಿಮೆಗೊಳಿಸಲು ಮತ್ತು ಉನ್ನತ ಮಟ್ಟದ ಆಹಾರ ಸುರಕ್ಷತಾ ಮಾನದಂಡಗಳನ್ನು ಪಾಲಿಸಲು ಸುಧಾರಿತ ಪರೀಕ್ಷಾ ವಿಧಾನಗಳು ಹಾಗೂ ಪ್ರಮಾಣೀಕೃತ ಕಾರ್ಯವಿಧಾನಗಳನ್ನು ಅಳವಡಿಸುವಲ್ಲಿಯೂ ಸಂಸ್ಥೆ ನೆರವಾಗಲಿದೆ.

ಈ ಸಹಯೋಗದ ಪ್ರಮುಖ ಅಂಶಗಳಲ್ಲಿ ಒಂದಾಗಿ, ಪ್ರಸಾದದ ಸಾಂಪ್ರದಾಯಿಕ ಸ್ವರೂಪಕ್ಕೆ ಧಕ್ಕೆಯಾಗದಂತೆ ಅದರ ಪ್ಯಾಕೇಜಿಂಗ್ ವ್ಯವಸ್ಥೆ ಹಾಗೂ ಶೆಲ್ಫ್ ಲೈಫ್ (ಬಳಕೆಯ ಅವಧಿ) ಸುಧಾರಣೆಗೆ ವಿಶೇಷ ಒತ್ತು ನೀಡಲಾಗುವುದು. ಜೊತೆಗೆ, ಆಹಾರ ವಿಶ್ಲೇಷಣೆ, ಮಾದರಿ ಸಂಗ್ರಹಣೆ ತಂತ್ರಗಳು, ಮಾಲಿನ್ಯ ಕಾರಕಗಳ ಪತ್ತೆ, ತುಪ್ಪದ ಗುಣಮಟ್ಟ ಮೌಲ್ಯಮಾಪನ ಹಾಗೂ ಸುವಾಸನೆ ವಿಶ್ಲೇಷಣೆ ಮುಂತಾದ ವಿಷಯಗಳಲ್ಲಿ ಟಿಟಿಡಿ ಸಿಬ್ಬಂದಿಗೆ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಸಿಎಫ್‌ಟಿಆರ್‌ಐ ಆಯೋಜಿಸಲಿದೆ.

ಟಿಟಿಡಿಯ ವಿನಂತಿಯ ಮೇರೆಗೆ, ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ವಿಜ್ಞಾನಿಗಳು ಟಿಟಿಡಿಯ ವಿವಿಧ ಸೌಲಭ್ಯಗಳಿಗೆ ಭೇಟಿ ನೀಡಿ ತಾಂತ್ರಿಕ ಮಾರ್ಗದರ್ಶನ, ಪ್ರಕ್ರಿಯೆಗಳ ಮೌಲ್ಯಮಾಪನ ಹಾಗೂ ನಿರಂತರ ಸುಧಾರಣೆಗೆ ಅಗತ್ಯ ಶಿಫಾರಸುಗಳನ್ನು ನೀಡಲಿದ್ದಾರೆ.

ಈ ಒಪ್ಪಂದವು ಸಂಪ್ರದಾಯ ಮತ್ತು ವೈಜ್ಞಾನಿಕ ಶ್ರೇಷ್ಠತೆಯ ಸಮನ್ವಯದತ್ತ ಒಂದು ಮಹತ್ವದ ಹೆಜ್ಜೆಯಾಗಿದ್ದು, ಶ್ರೀವಾರಿ ಪ್ರಸಾದದ ಪಾವಿತ್ರ್ಯ, ಪ್ರಾಮಾಣಿಕತೆ ಮತ್ತು ಸಾಂಪ್ರದಾಯಿಕ ಪರಂಪರೆ ಉಳಿಸಿಕೊಂಡು ಭಕ್ತರಿಗೆ ಸುರಕ್ಷಿತ ಹಾಗೂ ಉನ್ನತ ಗುಣಮಟ್ಟದ ಪ್ರಸಾದವನ್ನು ಒದಗಿಸುವ ಗುರಿ ಹೊಂದಿದೆ.

ಬೆಂಗಳೂರು: ಸಿಎಸ್‌ಐಆರ್–ಎನ್‌ಎಎಲ್ (ಬೆಂಗಳೂರು), ಸಿಎಸ್‌ಐಆರ್–ಸಿಎಫ್‌ಟಿಆರ್‌ಐ (ಮೈಸೂರು) ಹಾಗೂ ಸಿಎಸ್‌ಐಆರ್–4ಪಿಐ (ಬೆಂಗಳೂರು) ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾದ ಎರಡು ದಿನಗಳ ರಿಸರ್ಚ್, ಇಂಡಸ್ಟ್ರಿ, ಸ್ಟಾರ್ಟ್‌ಅಪ್ ಮತ್ತು ಎಂಟರ್‌ಪ್ರಿನರ್‌ಶಿಪ್ (RISE) ಕಾನ್‌ಕ್ಲೇವ್–2026 ಇತ್ತೀಚೆಗೆ ಬೆಂಗಳೂರಿನ ಎಚ್‌ಎಎಲ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯಿತು.



ಸಮಾರೋಪ ಸಮಾರಂಭದಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಮಾತನಾಡಿ, ಭಾರತದ ನವೋದ್ಯಮ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ವಿಕಸಿತ ಭಾರತದ ಕನಸನ್ನು ಸಾಕಾರಗೊಳಿಸಲು ಸಿಎಸ್‌ಐಆರ್ ಹಾಗೂ ಅದರ ಪಾಲುದಾರ ಸಂಸ್ಥೆಗಳು ಕೈಗೊಂಡಿರುವ ಪ್ರಯತ್ನಗಳನ್ನು ಶ್ಲಾಘಿಸಿದರು. ರೈಸ್ ಎನ್‌ಕ್ಲೇವ್–2026ರ ಯಶಸ್ಸು ಸಂಶೋಧನೆ ಮತ್ತು ಕೈಗಾರಿಕೆಯ ನಡುವಿನ ಅಂತರವನ್ನು ಕಡಿಮೆ ಮಾಡುವ, ತಂತ್ರಜ್ಞಾನ ವರ್ಗಾವಣೆಯನ್ನು ಉತ್ತೇಜಿಸುವ, ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವ ಹಾಗೂ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡುವ ಸಹಯೋಗ ವೇದಿಕೆಗಳ ಮಹತ್ವವನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಸಮಾವೇಶದ ವೇಳೆ ರೂಪುಗೊಂಡ ಪಾಲುದಾರಿಕೆಗಳು ಮತ್ತು ನಡೆದ ಚರ್ಚೆಗಳು ದೀರ್ಘಕಾಲಿಕ ವೈಜ್ಞಾನಿಕ, ಸಾಮಾಜಿಕ ಹಾಗೂ ಆರ್ಥಿಕ ಪ್ರಯೋಜನಗಳನ್ನು ನೀಡಲಿದ್ದು, ತಾಂತ್ರಿಕವಾಗಿ ಶಕ್ತಿಶಾಲಿ ಹಾಗೂ ಆರ್ಥಿಕವಾಗಿ ಸಮೃದ್ಧ ವಿಕಸಿತ ಭಾರತದತ್ತ ಭಾರತದ ಪಯಣವನ್ನು ಮತ್ತಷ್ಟು ಬಲಪಡಿಸಲಿವೆ ಎಂದು ಅಭಿಪ್ರಾಯಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ಮೈಸೂರು ಮಿತ್ರ

ಗುರುವಾರ 18 ಜೂನ್ 2026

ಈಗ 'ರಿಯಲ್ ಎಸ್ಟೇಟ್'ಗೆ ಮೊದಲ ಆದ್ಯತೆ

- ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಗಂಭೀರ ಆರೋಪ
- ಡಿ.ಕೆ.ಶಿವಕುಮಾರ್ ಸಿಎಂ ಆದ ಕೆಲವೇ ಗಂಟೆಗಳಲ್ಲಿ ಇದನ್ನು ಪ್ರೂವ್ ಮಾಡಿದ್ದಾರೆ

ಬೆಂಗಳೂರು, ಜೂ.17(ಕೆಎಂಶಿ)–



ರಾಜ್ಯ ಕಾಂಗ್ರೆಸ್ ಸರ್ಕಾರದ ಪ್ರಮುಖ ಆದ್ಯತೆ ರಿಯಲ್ ಎಸ್ಟೇಟ್ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕರಿಸಿದ ಕೆಲವೇ ಗಂಟೆಗಳಲ್ಲಿ ತಮ್ಮ ಸರ್ಕಾರದ ಆದ್ಯತೆ ರಿಯಲ್ ಎಸ್ಟೇಟ್ ಎಂಬುದನ್ನು ತೋರಿಸಿದ್ದಾರೆ. ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿಯಿಲ್ಲ. ಬಿಡದಿಯಲ್ಲಿ ಟೌನ್‌ಶಿಪ್ ಮಾಡಲು ಮುಂದಾಗಿದ್ದು, ಬಲಾತ್ಕಾರದಿಂದ ಹಾಗೂ ಅಕ್ರಮವಾಗಿ ರೈತರ ಜಮೀನು ಕಸಿಯಲು ಮುಂದಾಗಿದೆ ಎಂದರು.

ರಾಜ್ಯ ಸರ್ಕಾರದ ಈ ಕೃತ್ಯವನ್ನು ಬಿಜೆಪಿ ವಿರೋಧಿಸುತ್ತದೆ. ಇಂತಹ ಕೆಲಸವನ್ನು ಸರ್ಕಾರ ಕೂಡಲೇ ಕೈಬಿಡಬೇಕು. ಅನ್ನದಾತರಿಗೆ ನೆರವಾಗಬೇಕಿತ್ತು. ದುರದೃಷ್ಟವೆಂದರೆ ಬೆಂಗಳೂರಿನ ರಿಯಲ್ ಎಸ್ಟೇಟ್ ದಂಧೆಯೇ ಮುಖ್ಯವಾದಂತಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಂಡತನ ಬಿಟ್ಟು ರೈತರ ಸಮಸ್ಯೆಗಳನ್ನು ಆಲಿಸಬೇಕು. ಅವರನ್ನು ಒಕ್ಕಲೆಬ್ಬಿಸಬಾರದು, ಟೌನ್‌ಶಿಪ್‌ಗಾಗಿ ಭೂಸ್ವಾಧೀನ ನಿಲ್ಲಿಸಬೇಕು. ನನ್ನ ಹಾಗೂ ವಿರೋಧ ಪಕ್ಷದ ನಾಯಕರ ವಿರುದ್ಧ ಪೋಸ್ಟರ್ ಆಂದೋಲನ ನಡೆಸುತ್ತಿದ್ದಾರೆ. ಇದಕ್ಕೆಲ್ಲ ಹೆದರಲ್ಲ. ನಿಮ್ಮ ಗೊಡ್ಡು ಬೆದರಿಕೆಗೆ ಹೆದರಲು ನಾವೇನು ಕಾಂಗ್ರೆಸ್ ಶಾಸಕರಲ್ಲ. ನಾಡಿನ ರೈತರ ಪರ ನಿಲ್ಲುವ ಕರ್ತವ್ಯ ನಮ್ಮದು. ಅದನ್ನು ಮಾಡೇ ಮಾಡುತ್ತೇವೆ, ವಿರೋಧ ಪಕ್ಷದ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸುತ್ತೇವೆ ಎಂದರು.

ಗ್ಯಾರಂಟಿ ಯೋಜನೆಗಳಲ್ಲಿ ಅಕ್ರಮ ನಡೆಯುವವರೆಗೆ ಅನುಷ್ಠಾನ ಸಮಿತಿಗಳು ಕತ್ತೆ ಕಾಯುತ್ತಿದ್ದವೇ. ಒಂದೂವರೆ ಲಕ್ಷಕ್ಕೂ ಹೆಚ್ಚು ಜನರು ಆದಾಯ ತೆರಿಗೆ ಪಾವತಿ ಮಾಡುವವರು ಗೃಹಲಕ್ಷ್ಮಿ ಸೌಲಭ್ಯ ಪಡೆಯುತ್ತಿದ್ದಾರೆ ಎಂಬುದಾಗಿ ಅನುಷ್ಠಾನ ಸಮಿತಿ ಹೇಳಿದೆ. ಗ್ಯಾರಂಟಿಗಳನ್ನು ಜಾರಿ ಮಾಡುವಾಗ ಸಿದ್ದರಾಮಯ್ಯ, ಕಾಕಾ ಪಾಟೀಲ್‌ಗೂ ಫ್ರೀ, ಮಹದೇವಪ್ಪಗೂ ಫ್ರೀ ಎಂದಿದ್ದರು. ಈಗ ಹೇಗೆ ಇವರೆಲ್ಲ ತೆರಿಗೆ ಪಾವತಿದಾರರಾದರು. ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷರಿಗೆ ಸಚಿವ ಸಂಪುಟ ದರ್ಜೆ ಸ್ಥಾನಮಾನ ನೀಡಲಾಗಿದೆ. ಜಿಲ್ಲೆಯಲ್ಲಿ ಅಧ್ಯಕ್ಷರಿದ್ದಾರೆ. ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅನುಷ್ಠಾನ ಸಮಿತಿ ಇದೆ. ಇವರೆಲ್ಲ ಕತ್ತೆ ಕಾಯುತ್ತಿದ್ದರೆ? ಎಂದು ವ್ಯಂಗ್ಯವಾಡಿದರು.

ಗ್ಯಾರಂಟಿಗಳಿಂದ ಸರ್ಕಾರಕ್ಕೆ ಹೊರೆ ಆಗ್ತಾ ಇದೆ, ಸಮಿತಿಗಳಿಗೆ, ಅಧ್ಯಕ್ಷರಿಗೆ, ಕಚೇರಿ, ವೇತನ ಹಾಗೂ ಇತರೆ ಸೌಲಭ್ಯಗಳಿಗೆ ನೂರಾರು ಕೋಟಿ ರೂ. ವ್ಯಯಿಸಲಾಗುತ್ತಿದೆ. ಗ್ಯಾರಂಟಿಗಳಿಗೆ ಹಣ ಹೊಂದಿಸಲು ಸಾಧ್ಯವಾಗದೇ ಒಂದೊಂದೇ ನೆಪ ಹೇಳಿಕೊಂಡು ಸೌಲಭ್ಯಗಳಿಗೆ ಕತ್ತರಿ ಹಾಕುತ್ತಿದ್ದಾರೆ. ಇದು ಸರ್ಕಾರದ ವೈಫಲ್ಯ, ಇದಕ್ಕೆ ರಾಜ್ಯದ ಜನ ಛೀಮಾರಿ ಹಾಕುತ್ತಿದ್ದಾರೆ ಎಂದರು.

ಸರ್ಕಾರ ಸುಧಾರಣೆಗಳನ್ನು ಮಾಡಲಿ, ಗ್ಯಾರಂಟಿಗಳಿಗೆ ಹಣ ಹೊಂದಿಸಲು ಫಲಾನುಭವಿಗಳಿಗೆ ಕತ್ತರಿ ಹಾಕುತ್ತಿದ್ದೇವೆ ಎಂಬ ಸತ್ಯವನ್ನೂ ಜನರ ಮುಂದೆ ಬಿಚ್ಚಿಡಲಿ. ಆಗ ಸರ್ಕಾರದ ಯೋಗ್ಯತೆ ಏನೆಂದು ಜನರಿಗೆ ಗೊತ್ತಾಗಲಿದೆ. ಮೂರು ವರ್ಷಗಳ ಆಡಳಿತದಲ್ಲಿ ವಸತಿಹೀನರಿಗೆ ಮನೆ ನೀಡಲಿಲ್ಲ. ರೈತರ ಸಂಕಷ್ಟಕ್ಕೆ ಸ್ಪಂದಿಸಲಿಲ್ಲ. ಗಂಗಾ ಕಲ್ಯಾಣದ ಅಕ್ರಮ ತನಿಖೆ ಮಾಡಲಿಲ್ಲ. ಹೈನುಗಾರಿಕೆಗೆ ಪ್ರೋತ್ಸಾಹ ಧನ ನೀಡಲಿಲ್ಲ ಎಂದರು.

ಆರ್‌ಎಸ್‌ಎಸ್ ಕುರಿತು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿದಿನ ಹೇಳಿಕೆ ನೀಡುತ್ತಿದ್ದಾರೆ. ಅವರ ಬಾಯಿ ಚಪಲಕ್ಕೆ ಉತ್ತರ ಕೊಡಲ್ಲ, ಗೃಹ ಸಚಿವರಿಗೆ ಮಾಡಬೇಕಿರುವ ಕೆಲಸ ತುಂಬಾ ಇವೆ. ಅಕ್ರಮ ನುಸುಳುಕೋರರು, ಲವ್ ಜಿಹಾದ್, ಹಿಂದೂ ಕಾರ್ಯಕರ್ತರ ಹತ್ಯೆ ಪ್ರಕರಣಗಳ ಕಡೆ ಗಮನಹರಿಸಲಿ. ಅದನ್ನು ಬಿಟ್ಟು ಬೇರೆ ವಿಷಯ ಮಾತನಾಡುವುದು ಸರಿಯಲ್ಲ ಎಂದರು.

ಅಧಿಕಾರಿಗಳ ಎತ್ತಿಕಟ್ಟುವ ಕೆಲಸ

ಮತದಾರರ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ವಿಚಾರದಲ್ಲಿ ರಾಜ್ಯ ಸರ್ಕಾರ ದ್ವಂದ್ವ ನಿಲುವು ತಳೆದಿದೆ. ಅಧಿಕಾರಿಗಳನ್ನು ಎತ್ತಿಕಟ್ಟುವ ಕೆಲಸ ಮಾಡಲಾಗುತ್ತಿದೆ. ಪರಿಷ್ಕರಣೆ ಕಾರ್ಯ ನಡೆಸದಂತೆ ಬಿಎಲ್‌ಒಗಳಿಗೆ ಕುಮ್ಮಕ್ಕು ನೀಡುತ್ತಿದೆ. ಕಾಂಗ್ರೆಸ್‌ನ ಮಹಾನ್ ನಾಯಕ ರಾಹುಲ್ ಗಾಂಧಿ ಬೇರೆ ದೇಶದ ನೈಜ ಪೌರತ್ವ ಪಡೆದಿದ್ದಾರೆ. ಇನ್ನೊಂದು ದೇಶದ ಪೌರತ್ವ ಇಟ್ಟುಕೊಂಡು ಸುಳ್ಳು ಮಾಹಿತಿ ನೀಡಿದ್ದಾರೆ. ಇದರ ಬಗ್ಗೆ ಶಿವಕುಮಾರ್ ಹಾಗೂ ಪ್ರಿಯಾಂಕ್ ಖರ್ಗೆ ಬೆಳಕು ಚೆಲ್ಲುವ ಕೆಲಸ ಮಾಡಲಿ. ಚುನಾವಣಾ ಆಯೋಗ ಅಕ್ರಮ ವಲಸಿಗರ ಪತ್ತೆಗೆ, ಮತಪಟ್ಟಿಯಲ್ಲಿ ಎರಡು ಕಡೆ ಹೆಸರು ಇದ್ದರೆ, ಮೃತಪಟ್ಟವರ ಹೆಸರು ಸೇರಿದ್ದರೆ ಸರಿಪಡಿಸಲು ಎಸ್‌ಐಆರ್ ಮಾಡುತ್ತಿದೆ. ಸಂವಿಧಾನಿಕ ಸಂಸ್ಥೆ ವಿರುದ್ಧ ಅಧಿಕಾರಿಗಳು ಹಾಗೂ ಜನರನ್ನು ಎತ್ತಿಕಟ್ಟುವ ಕೆಲಸ ಕಾಂಗ್ರೆಸ್ ಮಾಡುತ್ತಿದೆ. ಇದು ಅಕ್ಷಮ್ಯ ಅಪರಾಧ. –ಬಿ.ವೈ.ವಿಜಯೇಂದ್ರ

ಹೊಸದಾಗಿ 'ಗೃಹಲಕ್ಷ್ಮಿ' ಯೋಜನೆಯಡಿ ಅರ್ಜಿ ಸಲ್ಲಿಕೆ ಮಾರ್ಗಸೂಚಿ ಇನ್ನು ಬಂದಿಲ್ಲ

- ಮಹಿಳಾ–ಮಕ್ಕಳ ಕಲ್ಯಾಣ ಉಪನಿರ್ದೇಶಕ ನಾಗರಾಜು ಮಾಹಿತಿ
- ಜಿಲ್ಲೆಯಲ್ಲಿ 13,677 ಗೃಹಲಕ್ಷ್ಮಿ ಫಲಾನುಭವಿಗಳು ಮೃತಪಟ್ಟಿದ್ದಾರೆ



ಮೈಸೂರು ಜಿಪಂ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಬುಧವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಾಗರಾಜು ಅಧ್ಯಕ್ಷತೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಮೈಸೂರು, ಜೂ.17(ಎಂಕೆ)– ಮೈಸೂರು ಜಿಲ್ಲೆಯಲ್ಲಿ 13,677 ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳು ಮೃತಪಟ್ಟಿದ್ದು, ಬಯೋಮೆಟ್ರಿಕ್ ಹಾಗೂ ಹೊಸ ಅರ್ಜಿ ಸಲ್ಲಿಕೆ ಕುರಿತಂತೆ ಸರ್ಕಾರದಿಂದ ಮಾರ್ಗಸೂಚಿ ಇನ್ನು ಬಂದಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಾಗರಾಜು ತಿಳಿಸಿದ್ದಾರೆ.

ಮೈಸೂರು ಜಿಪಂ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಬುಧವಾರ ನಡೆದ ಪಂಚ ಗ್ಯಾರಂಟಿ ಯೋಜನೆಗಳ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾಹಿತಿ ನೀಡಿದ ಅವರು, 2026–27ನೇ ಸಾಲಿನಲ್ಲಿ ಬಿಡುಗಡೆಯಾದ ಮೊದಲನೇ ಕಂತಿನಲ್ಲಿ 6,71,674 ಫಲಾನುಭವಿಗಳಿಗೆ 13,433.48 ಲಕ್ಷ ರೂ. ಬಿಡುಗಡೆಯಾಗಿದೆ ಎಂದರು.

ಅಂಗನವಾಡಿ ಕಾರ್ಯಕರ್ತೆಯರು ಮನೆ–ಮನೆಗೆ ಭೇಟಿ ನೀಡಿ ಪರಿಶೀಲಿಸಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ವರದಿ ನೀಡುತ್ತಿದ್ದಾರೆ. ಪರಿಶೀಲನೆ ಕೆಲಸವನ್ನು ಬೇಗನೆ ಪೂರ್ಣಗೊಳಿಸಲಾಗುವುದು. ಸರ್ಕಾರದಿಂದ ಬಯೋಮೆಟ್ರಿಕ್ ಹಾಗೂ ಹೊಸ ಅರ್ಜಿ ಸಲ್ಲಿಕೆ ಕುರಿತಂತೆ ಮಾರ್ಗಸೂಚಿ ಬಂದಿಲ್ಲ. ಬಂದ ಕೂಡಲೇ ಅನುಷ್ಠಾನಗೊಳಿಸಲಾಗುವುದು ಎಂದು ಹೇಳಿದರು.

ಪಂಚ ಗ್ಯಾರಂಟಿ ನಿಲ್ಲದು: ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್.ಅರುಣ್ ಕುಮಾರ್ ಮಾತನಾಡಿ, ರಾಜ್ಯ ಸರ್ಕಾರ ಬಡವರು, ಹಿಂದುಳಿದ ವರ್ಗದವರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದು, ಈ ಪಂಚ ಗ್ಯಾರಂಟಿ ಯೋಜನೆಗಳು ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ. ಹಾಗೆಯೇ ಅಧಿಕಾರಿಗಳು ಕೂಡ ಪಂಚ ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಮಾತ್ರ ತಲುಪುವಂತೆ ಗಮನ ಹರಿಸಬೇಕು ಎಂದು ತಿಳಿಸಿದರು.

ಐಟಿ, ಜಿಎಸ್‌ಟಿ ಪಾವತಿದಾರರು ಅನರ್ಹರು: ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಪ್ರೊ.ಶಿವಕುಮಾರ್ ಮಾತನಾಡಿ, ಗೃಹ ಲಕ್ಷ್ಮಿ ಯೋಜನೆಗೆ ಐ.ಟಿ ಮತ್ತು ಜಿ.ಎಸ್.ಟಿ ಪಾವತಿ ಮಾಡುತ್ತಿರುವ ಫಲಾನುಭವಿಗಳು ಅನರ್ಹರಾಗಿದ್ದು, ಅವರಿಗೆ ಪಾವತಿಸಲಾಗುತ್ತಿರುವ ಗೃಹಲಕ್ಷ್ಮಿ ಹಣ ನಿಲ್ಲಿಸಬೇಕು. ಅನರ್ಹರು ಹಣ ಪಡೆದಿದ್ದಲ್ಲಿ ಅವರಿಂದ ವಸೂಲಿ ಮಾಡಬೇಕು. ಅನರ್ಹ ಗೃಹಲಕ್ಷ್ಮಿ ಫಲಾನುಭವಿಗಳ ನಿಖರ ಮಾಹಿತಿಯನ್ನು ಸಭೆಗೆ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಪಂ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಹುಣಸೂರು ಬಸವಣ್ಣ, ಸದಸ್ಯರಾದ ಸಾ.ಮಾ. ಯೋಗೇಶ್, ಚಂದ್ರಶೇಖರ್, ಅಬ್ದುಲ್ ಖಾದರ್, ಚಲುವರಾಜು, ಮಹದೇವ್, ಗುರುಸ್ವಾಮಿ, ಉದಯಶಂಕರ್, ಚಲುವರಾಜು, ನಿತಿನ್ ಮತ್ತಿತರರಿದ್ದರು.

ಮಕ್ಕಳಿಗಾಗಿ ವಿಶೇಷ ರಂಗ ತರಬೇತಿ ಕಾರ್ಯಾಗಾರ

ಮೈಸೂರು: ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಹಾಗೂ ಹರ Harvesting the Art ಸಂಯುಕ್ತ ಆಶ್ರಯದಲ್ಲಿ ಮಕ್ಕಳಿಗಾಗಿ ವಿಶೇಷ ರಂಗ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿದೆ.

ರಂಗಭೂಮಿ ಮಕ್ಕಳಲ್ಲಿ ಆತ್ಮವಿಶ್ವಾಸ, ಸೃಜನಶೀಲತೆ, ಸಂವಹನ ಕೌಶಲ್ಯ ಹಾಗೂ ವ್ಯಕ್ತಿತ್ವ ವಿಕಾಸ ಬೆಳೆಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. 8 ವಾರ ಕಾಲ ನಡೆಯುವ ಈ ಕಾರ್ಯಾಗಾರದಲ್ಲಿ ಮಕ್ಕಳಿಗೆ ಅಭಿನಯ, ಧ್ವನಿ ಬಳಕೆ, ದೇಹಭಾಷೆ, ಸೃಜನಾತ್ಮಕ ಚಿಂತನೆ ಹಾಗೂ ರಂಗಭೂಮಿಯ ಮೂಲಭೂತ ಅಂಶಗಳ ಕುರಿತು ಪ್ರಾಯೋಗಿಕ ತರಬೇತಿ ನೀಡಲಾಗುವುದು.

ಜೂನ್ 20ರಿಂದ ಆರಂಭವಾಗುವ ಈ ತರಬೇತಿಯಲ್ಲಿ ಶನಿವಾರ ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ, ಭಾನುವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ತರಗತಿಗಳು ನಡೆಯಲಿವೆ. 3 ತಿಂಗಳ ತರಬೇತಿಗೆ ರೂ. 5,000 ಶುಲ್ಕ ನಿಗದಿಪಡಿಸಲಾಗಿದೆ. ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ಹಾರ್ಡ್ವಿಕ್ ಶಾಲೆ ಆವರಣ, ಜೆ.ಎಲ್.ಬಿ. ರಸ್ತೆ, ಮೈಸೂರು ಇಲ್ಲಿ ಕಾರ್ಯಾಗಾರ ನಡೆಯಲಿದೆ. ಮಕ್ಕಳ ಸೃಜನಶೀಲ ಪ್ರತಿಭೆಯನ್ನು ಅನಾವರಣಗೊಳಿಸಲು ಮತ್ತು ರಂಗಭೂಮಿ ಮೂಲಕ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ನೆರವಾಗುವ ಈ ಕಾರ್ಯಾಗಾರದಲ್ಲಿ ಆಸಕ್ತ ಪೋಷಕರು ತಮ್ಮ ಮಕ್ಕಳನ್ನು ನೋಂದಾಯಿಸಿಕೊಳ್ಳಬಹುದು. ಮಾಹಿತಿಗಾಗಿ 9686892255 ಸಂಪರ್ಕಿಸಬಹುದು.

ಮೈಸೂರಲ್ಲಿ ರೆಸ್ಟೋ ಬಾರ್ ಅಗ್ನಿ ದುರಂತ ಹಿನ್ನೆಲೆ

ಮೈಸೂರಲ್ಲಿ ಎಲ್ಲಾ ಬಾರ್‌ಗಳು, ಹೋಟೆಲ್, ಪಬ್, ರೆಸ್ಟೋರೆಂಟ್ ಮಾಲೀಕರ ಸಭೆ ನಡೆಸಿದ ಪೊಲೀಸರು



ಮೈಸೂರಿನ ವಿಜಯನಗರ ಪೊಲೀಸ್ ನಿರೀಕ್ಷಕರ ಠಾಣಾ ಸರಹದ್ದಿನಲ್ಲಿರುವ ಹೋಟೆಲ್‌ಗಳು, ವಸತಿ ಹೋಟೆಲ್‌ಗಳು, ಪಬ್‌ಗಳು ಹಾಗೂ ಬಾರ್ ಮತ್ತು ರೆಸ್ಟೋರೆಂಟ್‌ಗಳ ಮಾಲೀಕರ ಸಭೆ ನಡೆಸಲಾಯಿತು.

ಮೈಸೂರು, ಜೂ.17(ಜಿಎ)–ಮೈಸೂರಿನ ರೆಸ್ಟೋಬಾರ್‌ನಲ್ಲಿ ಅಗ್ನಿ ದುರಂತ ಸಂಭವಿಸಿ ಇಬ್ಬರು ಸಜೀವವಾಗಿ ದಹನಗೊಂಡು ಏಳು ಮಂದಿ ಗಾಯಗೊಂಡಿರುವ ಘಟನೆ ಹಿನ್ನೆಲೆಯಲ್ಲಿ ಮೈಸೂರಿನ ಪೊಲೀಸರು ಎಚ್ಚೆತ್ತುಕೊಂಡಿದ್ದಾರೆ.

ದುರಂತದ ನಂತರ ನಗರದಲ್ಲಿರುವ ಎಲ್ಲಾ ಬಾರ್, ಪಬ್, ರೆಸ್ಟೋರೆಂಟ್ ಹಾಗೂ ಹೋಟೆಲ್ ಮಾಲೀಕರ ಸಭೆ ನಡೆಸಿ, ಅವರಿಂದ ಅಧಿಕೃತ ದಾಖಲೆಗಳನ್ನು ಕಲೆಹಾಕುತ್ತಿದ್ದಾರೆ.

ನಗರದಲ್ಲಿರುವ ಬಾರ್, ಪಬ್, ರೆಸ್ಟೋರೆಂಟ್ ಹಾಗೂ ಹೋಟೆಲ್ ಮಾಲೀಕರು ಆಯಾ ಠಾಣಾ ವ್ಯಾಪ್ತಿಯಲ್ಲಿ ಸಭೆ

ಅಧಿಕೃತ ದಾಖಲೆಗಳು, ಸುರಕ್ಷತಾ ಕ್ರಮಗಳ ಬಗ್ಗೆ ಪರಿಶೀಲನೆ

ನಡೆಸಿ, ಅವರಿಂದ ತಾವು ಉದ್ಯಮ ನಡೆಸಲು ವಿವಿಧ ಇಲಾಖೆಯಿಂದ ಪಡೆದಿರುವ ಅನುಮತಿಗಳ ಬಗ್ಗೆ ಪರಿಶೀಲನೆ ನಡೆಸಿದ್ದಾರೆ. ತಾವು ಉದ್ಯಮ ನಡೆಸುತ್ತಿರುವ ಸ್ಥಳದಲ್ಲಿ ತೆಗೆದುಕೊಂಡಿರುವ ಸುರಕ್ಷತಾ ಕ್ರಮ, ಕಟ್ಟಡದ ವಿನ್ಯಾಸ, ಅಗ್ನಿ ದುರಂತ ತಡೆಯಲು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದರು. ಇಂದು ಬೆಳಗ್ಗೆ ವಿಜಯನಗರ ಪೊಲೀಸ್ ನಿರೀಕ್ಷಕ ರವಿಪ್ರಸಾದ್ ಸೂಚನೆಯಂತೆ ತಮ್ಮ ಠಾಣಾ ಸರಹದ್ದಿನಲ್ಲಿರುವ ಹೋಟೆಲ್‌ಗಳು, ವಸತಿ ಹೋಟೆಲ್‌ಗಳು, ಪಬ್‌ಗಳು ಹಾಗೂ ಬಾರ್ ಮತ್ತು ರೆಸ್ಟೋರೆಂಟ್‌ಗಳ ಮಾಲೀಕರು ಮತ್ತು ವ್ಯವಸ್ಥಾಪಕರಿಗೆ ಪರವಾನಗಿಗಳು ಹಾಗೂ ಸುರಕ್ಷತಾ ಕ್ರಮಗಳ ಕುರಿತು ಸಭೆ ನಡೆಸಿದ್ದಾರೆ. ಈ ವೇಳೆ ಪ್ರಮುಖವಾಗಿ ಅಗ್ನಿಶಾಮಕ ದಳದಿಂದ ಪಡೆದಿರುವ ಪರವಾನಿಗೆ, ವಾಣಿಜ್ಯ ಚಟುವಟಿಕೆ ನಡೆಸಲು ಪಾಲಿಕೆಯಿಂದ ಪಡೆದಿರುವ ಪರವಾನಿಗೆ, ತಮ್ಮ ಸಂಸ್ಥೆಗಳ ಕುರಿತು ಇರುವ ಸೂಕ್ತ ದಾಖಲೆಗಳನ್ನು ಆಯಾ ವ್ಯಾಪ್ತಿಯ ಪೊಲೀಸ್ ಠಾಣೆಗೆ ನೀಡುವ ಸೂಚನೆ ನೀಡಿದರು.

ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಪದವಿ ಪದಗ್ರಹಣ



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಪದವಿ ಪದಗ್ರಹಣ ಸಮಾರಂಭ ನಡೆಯಿತು.

ಮೈಸೂರು, ಜೂ. 17– ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಪದವಿ ಪದಗ್ರಹಣ ಸಮಾರಂಭ ನಡೆಯಿತು.

ಶಾಲೆಯ ಪ್ರಾಂಶುಪಾಲರಾದ ಬಿ. ಲತಾ ಅವರು ಪ್ರಾದೇಶಿಕ ಪ್ರಾಕೃತಿಕ ವಿಜ್ಞಾನ ವಸ್ತು ಸಂಗ್ರಹಾಲಯದ ಹಿರಿಯ ಶ್ರೇಣಿ ವಿಜ್ಞಾನಿ ಗೌರವ್ ಅವರನ್ನು ಸ್ವಾಗತಿಸಿದರು. ಶಾಲೆಯ ನಾಲ್ಕು ತಂಡಗಳಾದ ಅಜಂತ, ಚಾಮುಂಡಿ, ಹಿಮಾಲಯ ಮತ್ತು ವಿಂದ್ಯಾ ಸಮೂಹಗಳ ವಿದ್ಯಾರ್ಥಿಗಳು ಮುಖ್ಯ ಅತಿಥಿಗಳಿಗೆ ವಂದಿಸಿದರು.

ಶಾಲಾ ನಾಯಕಿಯಾದ ಕೆ.ಎಸ್.ರಿತೀಶ ಮತ್ತು ಉಪ ನಾಯಕ ಆರ್.ಪರಮ್ ಸ್ವಾಮಿ ಅವರಿಗೆ ಮುಖ್ಯ ಅತಿಥಿಗಳು ತಂಡದ ಧ್ವಜ ಮತ್ತು ಕೇಪ್ಸ್ ನೀಡಿದರು. ನಂತರ 4 ತಂಡದ ನಾಯಕ, ನಾಯಕಿಯರು ಮತ್ತು ಉಪನಾಯಕ, ನಾಯಕಿಯರು ಮುಖ್ಯ ಅತಿಥಿಗಳಿಂದ ತಂಡದ ಧ್ವಜ ಮತ್ತು ಕೇಪ್ಸ್ ಅನ್ನು ಸ್ವೀಕರಿಸಿದರು. ಉಪ ಪ್ರಾಂಶುಪಾಲ ಎಸ್.ಎಲ್. ನಾಗೇಂದ್ರ ಪ್ರತಿಜ್ಞಾವಿಧಿ ಬೋಧಿಸಿದರು.

ಈ ವೇಳೆ ಗೌರವ್ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ನಾಯಕತ್ವ ಗುಣ ಬೆಳೆಸಿಕೊಳ್ಳಲು ಇಂತಹ ಕಾರ್ಯಕ್ರಮಗಳು ಮತ್ತು ಜವಾಬ್ದಾರಿಗಳು ಪ್ರಧಾನ ಪಾತ್ರ ವಹಿಸುತ್ತವೆ. ನಮ್ಮೊಳಗಿನ ದೌರ್ಬಲ್ಯಗಳನ್ನು ಗುರುತಿಸಿ, ಸಬಲ ಮನಸ್ಸಿನ ಕಡೆ ಹೆಜ್ಜೆ ಇಡಬೇಕು. ಭಯದಿಂದ ಆಚೆ ಬಂದು ನಮ್ಮ ದಿಟ್ಟ ನಡೆ ಗುರಿಯ ಕಡೆ ಇರಬೇಕು. ಈ ಶಾಲೆ ತನ್ನದೇ ಆದ ತಾತ್ವಿಕ ಮತ್ತು ನೈತಿಕ ಗುಣಗಳನ್ನು ಕಲಿಸುವ ಗುರುಕುಲವಾಗಿದೆ. ಇಂತಹ ಶಾಲೆಯಲ್ಲಿ ಓದುವುದು ಮಕ್ಕಳ ಪುಣ್ಯ. ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನದೇ ಆದ ಜವಾಬ್ದಾರಿಯಿಂದ ದೇಶಕಟ್ಟುವ ಕೆಲಸವನ್ನು ಮಾಡಬೇಕು. ಈ ಶಾಲೆಯಲ್ಲಿ ಅಂತಹ ಶಿಕ್ಷಕರು ಇರುವುದು ನನಗೆ ಹೆಮ್ಮೆ ಎನಿಸಿದೆ ಎಂದು ಮನದಾಳದ ಮಾತುಗಳನ್ನಾಡಿದರು.

ಸಮಾರಂಭದಲ್ಲಿ ನಾಲ್ಕು ತಂಡಗಳ ಶಿಕ್ಷಕರಾದ ಕುಮಾರಿ ಚಂದ್ರಮ್ಮ, ಪದ್ಮಾಂಜಲಿ, ಹೆಚ್.ಎನ್.ಮಮತಾ, ಮತ್ತು ಹೆಚ್.ಎನ್.ಜಗದೀಶ್, ಶಾಲಾ ಪಠ್ಯೇತರ ಚಟುವಟಿಕೆಗಳ ಸಂಯೋಜನಾಧಿಕಾರಿ ಅನುರಾಧ ಮತ್ತಿತರರು ಉಪಸ್ಥಿತರಿದ್ದರು.

ಅಭಿನಂದನೆ...




ಮಂಡ್ಯ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾಗಿ ನಿಯುಕ್ತಿ ಹೊಂದಿರುವ ಪ್ರಸನ್ನಕುಮಾರ್ ಅವರು ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರನ್ನು ಅವರ ಕಚೇರಿಯಲ್ಲಿ ಭೇಟಿ ಮಾಡಿ ಅಭಿನಂದಿಸಿ, ಮಂಡ್ಯ ಜಿಲ್ಲೆಯ ಶೈಕ್ಷಣಿಕ ಅಭಿವೃದ್ಧಿಗೆ ಸಹಕರಿಸುವಂತೆ ಮನವಿ ಮಾಡಿದರು. ಈ ವೇಳೆ ಮಂಡ್ಯ ಜಿಲ್ಲಾ ಉಪನ್ಯಾಸಕರ ಸಂಘದ ಅಧ್ಯಕ್ಷ ಚೆನ್ನಕೃಷ್ಣಯ್ಯ, ಪ್ರಾಂಶುಪಾಲರಾದ ಶಾಂತರಾಜು, ಸಚ್ಚಿದಾನಂದ, ಉಪನ್ಯಾಸಕರಾದ ರಾಮಕೃಷ್ಣೇಗೌಡ, ತಮ್ಮೇಗೌಡ ಉಪಸ್ಥಿತರಿದ್ದರು.

ಸಂಸ್ಕರಣಾ, ಪ್ಯಾಕಿಂಗ್ ಘಟಕ ಸ್ಥಾಪಿಸಲು ಅರ್ಜಿ ಆಹ್ವಾನ

ಮೈಸೂರು: ಕೃಷಿ ಇಲಾಖೆಯು ಬೇಳೆ ಕಾಳುಗಳಲ್ಲಿ ಆತ್ಮನಿರ್ಭರತೆ ಮಿಷನ್ ಯೋಜನೆಯಡಿ ಕೊಯ್ಲೋತ್ತರ ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ಸಂಸ್ಕರಣಾ ಮತ್ತು ಪ್ಯಾಕಿಂಗ್ ಘಟಕಗಳನ್ನು ಸ್ಥಾಪಿಸಲು ರೈತರು ಹಾಗೂ ಸಂಘ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ದ್ವಿದಳ ಧಾನ್ಯಗಳಲ್ಲಿ ಮೌಲ್ಯವರ್ಧನೆ ಉತ್ತೇಜಿಸಲು ಹಾಗೂ ರೈತರ ಆದಾಯ ಹೆಚ್ಚಿಸಲು ಗುರಿ ಹೊಂದಲಾಗಿದೆ. ಈ ಯೋಜನೆ ಕೇಂದ್ರ ಮತ್ತು ರಾಜ್ಯ ಸರ್ಕಾರದ 60:40 ಅನುಪಾತದ ಸಹಾಯಧನದಡಿ ಯೋಜನಾ ವೆಚ್ಚದ ಶೇ.33 ರಷ್ಟು (ರೂ.25 ಲಕ್ಷಗಳ ಗರಿಷ್ಠ ಮಿತಿಯೊಂದಿಗೆ) ಸಹಾಯಧನ ನೀಡಲಾಗುವುದು. ಅಭಿಯಾನದಡಿ ಆರ್ಥಿಕ ನೆರವು ಪಡೆಯಲು ಬ್ಯಾಂಕ್ ಸಾಲ ಕಡ್ಡಾಯ. ರೈತ ಉತ್ಪಾದಕ ಸಂಸ್ಥೆಗಳು, ಕ್ಲಸ್ಟರ್ ಮಟ್ಟದ ಒಕ್ಕೂಟಗಳು, ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು, ವೈಯಕ್ತಿಕ ಫಲಾನುಭವಿಗಳು ಈ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸಲು ಜೂ.30ರಂದು ಕೊನೆ ದಿನ. ಆಸಕ್ತರು ಮಾಹಿತಿಗಾಗಿ ಸಂಬಂಧಪಟ್ಟ ಹೋಬಳಿ ರೈತ ಸಂಪರ್ಕ ಕೇಂದ್ರ, ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಬೇಕು.

ನಿಧನ



ಜಿ.ಪಾಂಡುರಂಗ

ಮೈಸೂರು,ಜೂ.17–ಮೈಸೂರಿನ ಕೆ.ಆರ್.ಮಿಲ್ ಕಾಲೋನಿಯ ಕಾಂಗ್ರೆಸ್ ಮುಖಂಡರಾದ ಜಿ.ಪಾಂಡುರಂಗ(68) ಅವರು ಬುಧವಾರ ಸಂಜೆ ಹೃದಯಘಾತದಿಂದ ನಿಧಾನರಾದರು. ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಜೂ.18) ಕೆ.ಆರ್.ಮಿಲ್ ಕಾಲೋನಿ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೌರ್ಜನ್ಯಕ್ಕೊಳಗಾದ ಪರಿಶಿಷ್ಟರ ಮೇಲೆ ಪ್ರತಿ ದೂರು ದಾಖಲು

ರಾಜ್ಯ ಅನುಸೂಚಿತ ಜಾತಿಗಳು, ಬುಡಕಟ್ಟು ಆಯೋಗದ ಅಧ್ಯಕ್ಷ ಡಾ.ಎಲ್. ಮೂರ್ತಿ ಕಳವಳ

ಮೈಸೂರು,ಜೂ.17(ಎಂಟಿವೈ)–ದೌರ್ಜನ್ಯಕ್ಕೆ ಒಳಗಾದ ಪರಿಶಿಷ್ಟ



ಡಾ.ಎಲ್.ಮೂರ್ತಿ

ಜಾತಿ ಮತ್ತು ಪಂಗಡಗಳ ಜನರ ಮೇಲೆ ಕೌಂಟರ್ ದೂರು ದಾಖಲಾಗುತ್ತಿರುವುದಕ್ಕೆ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ. ಎಲ್. ಮೂರ್ತಿ ಕಳವಳ ವ್ಯಕ್ತಪಡಿಸಿದರು.

ಜಿಪಂ ಸಭಾಂಗಣದಲ್ಲಿ ನಡೆದ ಆಯೋಗದ ಸಭೆಯಲ್ಲಿ ಪ್ರತಿ ದೂರು ದಾಖಲಿಸಿ ದೌರ್ಜನ್ಯಕ್ಕೆ ಒಳಗಾದವರಿಗೆ ಕಿರುಕುಳ ಕೊಡಲಾಗುತ್ತಿದೆ ಎಂಬ ಅನೇಕ ಮನವಿ ಸ್ವೀಕರಿಸಿದ ಅವರು, ಕೌಂಟರ್ ದೂರು ದಾಖಲು ಮಾಡುವುದು ರಾಜ್ಯವ್ಯಾಪಿ ಹೆಚ್ಚುತ್ತಿದೆ. ಪೊಲೀಸರು ಉದ್ದೇಶಪೂರ್ವಕವಾಗಿ ಪ್ರತಿ ದೂರು ದಾಖಲು ಮಾಡಿದ್ದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ದಲಿತರ ಭೂಮಿ ಹತ್ತಿಕ್ಕುತ್ತಿರುವ ಜಿಲ್ಲಾಡಳಿತ: ವರುಣಾ ಕ್ಷೇತ್ರ ವ್ಯಾಪ್ತಿಯಲ್ಲಿ ಜಿಲ್ಲಾಡಳಿತವೇ ದಲಿತರ ಭೂಮಿಯನ್ನು ವಶಕ್ಕೆ ಪಡೆದುಕೊಳ್ಳುತ್ತಿದೆ. ಎಸ್‌ಎಸ್ಸಿ, ಎಸ್ಟಿ ಜನಗಳ ಕುಂದುಕೊರತೆ ಸಭೆ ಕರೆಯುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರೆ ಎಸ್ಸಿ, ಎಸ್ಟಿ ಆಯೋಗ ಸಭೆ ನಡೆಸುತ್ತದೆಂದು ಬೇಜವಾಬ್ದಾರಿ ಉತ್ತರ ಕೊಡುತ್ತಾರೆ. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಮಂಜೂರಾದರೂ ಬ್ಯಾಂಕ್‌ಗಳಿಂದ ಸಕಾಲದಲ್ಲಿ ಸಾಲ ದೊರೆಯುತ್ತಿಲ್ಲ ಎಂದರು.

ಕೆ.ಆರ್.ನಗರ ತಾಲೂಕಿನ ದಸಂಸ ಮುಖಂಡ ದಿವಾಕರ್, ಕೆ.ಆರ್.ನಗರ ತಾಲೂಕಿನಲ್ಲಿ ವಿವಿಧೆಡೆ ವಾಸವಿರುವ ಅಲೆಮಾರಿ ಜನರಿಗೆ ನಿವೇಶನ, ಮನೆಗಳನ್ನು ಕಲ್ಪಿಸಿಕೊಡಬೇಕು ಎಂದು ಮನವಿ ಸಲ್ಲಿಸಿದರು. ಒಳ ಮೀಸಲಾತಿ ಅನುಷ್ಠಾನಕ್ಕೆ ತರಬೇಕು ಮತ್ತು ಬೋವಿ ಜನಾಂಗವನ್ನು ಪರಿಶಿಷ್ಟ ಜಾತಿ ಪಟ್ಟಿಯಿಂದ ತೆಗೆಯಬೇಕು ಎಂದು ರಾಜಣ್ಣ ಎಂಬವರು ಆಯೋಗವನ್ನು ಆಗ್ರಹಿಸಿದರು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ತಿ.ನರಸೀಪುರದಲ್ಲಿ ಅಲೆಮಾರಿ ಜನಾಂಗವನ್ನು ಒಕ್ಕಲೆಬ್ಬಿಸಿ ಬೀದಿಗೆ ತರಲಾಗಿದೆ. ಈಗ ಆಲಗೂಡು ಗ್ರಾಮದಲ್ಲಿ ನೀಡಲಾಗಿರುವ ಜಾಗಕ್ಕೆ ಮೂಲಸೌಕರ್ಯ ಕಲ್ಪಿಸಬೇಕು. ತಲಕಾಡು ಹೋಬಳಿಯ ದೊಡ್ಡಪುರ ಗ್ರಾಮದಲ್ಲಿನ ದಲಿತ ಕುಟುಂಬಗಳನ್ನು ಒಕ್ಕಲೆಬ್ಬಿಸುವ ಪ್ರಯತ್ನಗಳು ನಡೆಯುತ್ತಿದ್ದು ತಡೆಯಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಮುಖಂಡ ನಾಗವಾಲ ನರೇಂದ್ರ, ಚಾಮರಾಜನಗರದ ಮಸಣಾಪುರದಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಲಾಗಿದೆ. ಪದೇ ಪದೇ ಅಂಬೇಡ್ಕರ್ ಭಾವಚಿತ್ರಗಳಿಗೆ ಅಪಮಾನ ಮಾಡುತ್ತಿರುವುದನ್ನು ತಡೆಯಲು ಕಟ್ಟುನಿಟ್ಟಿನ ನಿರ್ದೇಶನ ಕೊಡಬೇಕು ಎಂದರು.

ಗಾಂಧಿನಗರದ ಹೋರಾಟಗಾರ ಮಂಜುನಾಥ್, ಕನ್ನಡ ಪರ ಹೋರಾಟಗಾರರ ಪ್ರಕರಣಗಳನ್ನು ಹಿಂಪಡೆದಂತೆ ದಲಿತ ಸಂಘಟನೆಗಳ ಮೇಲಿರುವ ಪ್ರಕರಣಗಳನ್ನು ಹಿಂಪಡೆಯಬೇಕು ಎಂದು ಕೋರಿದರು. ಮಲ್ಲಹಳ್ಳಿ ನಾರಾಯಣ್ ಅವರು ಅಂಬೇಡ್ಕರ್ ಪ್ರತಿಮೆಗಳಿಗೆ ಅವಮಾನ ಮಾಡುವವರನ್ನು ರಾಷ್ಟ್ರದ್ರೋಹ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿದರು.

ಅರಣ್ಯ ಪ್ರದೇಶಗಳ ಶಾಲೆಗಳಿಗೆ ಕಾಯಂ ಶಿಕ್ಷಕರನ್ನು ನೇಮಿಸುವಂತೆ ಹೋರಾಟಗಾರರು ಕೋರಿದರು. ಮೈಸೂರಿನ ಜಯನಗರ ಮಳಲವಾಡಿ ಗ್ರಾಮದಲ್ಲಿ ಹೂಳಲು ಜಾಗ ಕೊಡುವಂತೆ ವ್ಯಕ್ತಿಯೊಬ್ಬರು ಮನವಿ ಮಾಡಿದರು. 100ಕ್ಕೂ ಅರ್ಜಿಗಳು ಸ್ವೀಕೃತವಾದವು.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಎಸ್ಸಿ–ಎಸ್ಟಿ ಆಯೋಗದ ಸದ್ಯ ದಿವಾಕರ್, ಗೀತಾ ತಾಮೋಷಿ, ಎಂ ತುಂಬಯ್ಯ, ಕಾರ್ಯದರ್ಶಿ ಡಾ.ಹೆಚ್.ಎನ್.ಶಿವರಾಮ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಪಂ ಸಿಇಒ ಎಸ್.ಯುಕೇಶ್‌ಕುಮಾರ್, ಎಸ್ಪಿ ಮಲ್ಲಿಕಾರ್ಜುನ್ ಬಾಲದಂಡಿ, ಪಾಲಿಕೆ ಆಯುಕ್ತ ಶೇಕ್ ತನ್ವಿರ್ ಆಸಿಫ್ ಉಪಸ್ಥಿತರಿದ್ದರು.

ಸಂಶೋಧಕರಿಗೆ ದೊರೆಯದ ಶಿಷ್ಯ ವೇತನ

ಮೈಸೂರು ವಿವಿಯ ಸಂಶೋಧನಾ ವಿದ್ಯಾರ್ಥಿಗಳಿಗೆ ಒಂದು ವರ್ಷದಿಂದ ಶಿಷ್ಯ ವೇತನ ಮಂಜೂರು ಮಾಡಿಲ್ಲ. ದಲಿತ ವಿದ್ಯಾರ್ಥಿಗಳಿಗೆ ಮೀಸಲಿಟ್ಟ ಹಣವನ್ನು ಅನ್ಯ ಉದ್ದೇಶಕ್ಕೆ ಖರ್ಚು ಮಾಡುತ್ತಿದ್ದಾರೆ. ಎಲ್ಲದಕ್ಕೂ ದುಡ್ಡಿಲ್ಲ ಎಂದು ಕುಲಪತಿಗಳು ಉತ್ತರ ಕೊಡುತ್ತಿದ್ದಾರೆ. ಪೊಲೀಸರು ಪ್ರತಿಭಟನೆ ಮಾಡುವವರನ್ನು ತಡೆಯುತ್ತಿದ್ದಾರೆ ಎಂದು ಸಂಶೋಧನಾ ವಿದ್ಯಾರ್ಥಿಗಳು ಆಯೋಗಕ್ಕೆ ಮನವಿ ಸಲ್ಲಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಆಯೋಗದ ಅಧ್ಯಕ್ಷ ಡಾ.ಮೂರ್ತಿ, ತುರ್ತು ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಪೋಕ್ಸೊ ಪ್ರಕರಣ ಹೆಚ್ಚಳ

ಮೈಸೂರು ಜಿಲ್ಲೆಯಲ್ಲಿ ಪೋಕ್ಸೊ ಪ್ರಕರಣಗಳು ಹೆಚ್ಚುತ್ತಿರುವುದು ಜಿಲ್ಲಾಡಳಿತದ ವೈಫಲ್ಯವಾಗಿದೆ. ಇಂತಹ ಪ್ರಕರಣಗಳು ಆದಿವಾಸಿ ಜನರ ಮೇಲೆ ಹೆಚ್ಚು ದಾಖಲಾಗುತ್ತಿದ್ದು, ಅವರಿಗೆ ಜಾಗೃತಿ ಮೂಡಿಸಬೇಕು ಎಂದು ಜನಸಂಗ್ರಾಮ್ ಪರಿಷತ್ ಪ್ರಸನ್ನ ಮನವಿ ಮಾಡಿದರಲ್ಲದೆ, ಜಿಲ್ಲೆಯಲ್ಲಿ ಬುಡ್ಗ ಜಂಗಮ್ಮ ಜನಾಂಗ ಇಲ್ಲ. ಆದರೂ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ. ಈ ಬಗ್ಗೆ ತನಿಖೆ ಆಗಬೇಕು ಎಂದರು.

ಅಧಿಕಾರಿಗಳಿಂದ ದಬ್ಬಾಳಿಕೆ

ಹೆಚ್.ಡಿ.ಕೋಟೆ ಪುರಸಭೆ ಅಧಿಕಾರಿಗಳು ಸ್ಥಳೀಯ ಮುಖಂಡರೊಂದಿಗೆ ಸೇರಿ ತಮ್ಮ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ ಎಂದು ಮಧು ಎಂಬ ಮಹಿಳೆ ಅವಲತ್ತುಕೊಂಡರು. ನಮ್ಮ ಜಾಗಕ್ಕೆ ಬೇರೆಯವರು ಅತಿಕ್ರಮ ಪ್ರವೇಶ ಮಾಡಿದ್ದಾರೆ. ಅದನ್ನು ಪ್ರಶ್ನಿಸಿದರೆ ಜಾಗ ಖಾಲಿ ಮಾಡುವಂತೆ ದಬಾಯಿಸುತ್ತಿದ್ದಾರೆ. ನ್ಯಾಯ ದೊರಕಿಸಿಕೊಡಬೇಕೆಂದು ಡಾ.ಮೂರ್ತಿ ಅವರನ್ನು ಕೋರಿದರು.

ಜಿಲ್ಲಾ ಮಟ್ಟದ ಅಧಿಕಾರಿಗಳ ಗೈರಿಗೆ ಆಕ್ಷೇಪ

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಮಹತ್ವದ ಸಭೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಗೈರಾಗಿರುವುದಕ್ಕೆ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಆಕ್ಷೇಪ ವ್ಯಕ್ತಪಡಿಸಿದರು. ಸಭೆಯಲ್ಲಿದ್ದ ಇತರ ಮುಖಂಡರು ಇದಕ್ಕೆ ದನಿಗೂಡಿಸಿದರು. ಅಧಿಕಾರಿಗಳ ಸಮ್ಮುಖದಲ್ಲಿ ಅರ್ಜಿಗಳ ವಿಲೇವಾರಿ ಮಾಡಬೇಕು ಎಂದು ಆಗ್ರಹಿಸಿದರು. ಒಳ ಮೀಸಲಾತಿ ಜಾರಿಗೊಂಡು ಒಂದೂವರೆ ತಿಂಗಳಾಗಿದೆ. ಈವರೆಗೆ ಎಬಿಸಿ ಪ್ರಮಾಣ ಪತ್ರಗಳನ್ನು ನೀಡುತ್ತಿಲ್ಲ. ಆದರೆ, ವಿದ್ಯಾರ್ಥಿಗಳು ಪ್ರವೇಶಾತಿ ವೇಳೆ ತೊಂದರೆ ಅನುಭವಿಸುತ್ತಿದ್ದಾರೆ. ಹಳೆಯ ಪ್ರಮಾಣ ಪತ್ರಕ್ಕೆ ಪ್ರವೇಶಾತಿ ಕೊಡಬೇಕು. ಸಿಪಿಸಿ ಪಾಲಿಟೆಕ್ನಿಕ್‌ನಲ್ಲಿ ರೋಸ್ಟರ್ ಬಿಂದು ಪ್ರಕಟಿಸುವಂತೆ ಆಯೋಗದ ಅಧ್ಯಕ್ಷರು ಸೂಚಿಸಬೇಕು ಎಂದು ಒತ್ತಾಯಿಸಿದರು.

ಆತ್ಮಹತ್ಯೆಗೆ ಅವಕಾಶ ಕೊಡಿ

ನಮ್ಮ ಜಾಗಕ್ಕೆ ಅಕ್ರಮ ಪ್ರವೇಶಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ನನ್ನ ಮೇಲೆ ದೈಹಿಕ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿದವನ ವಿರುದ್ಧ ದೂರು ಕೊಟ್ಟರೂ ಪೊಲೀಸರು ಯಾವುದೇ ಕ್ರಮಕೈಗೊಂಡಿಲ್ಲ. ನಮ್ಮ ಕಷ್ಟ ಕೇಳದಿದ್ದ ಮೇಲೆ ಆತ್ಮಹತ್ಯೆಗೆ ಅವಕಾಶ ಮಾಡಿಕೊಡಬೇಕು ಎಂದು ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಮಹದೇವಮ್ಮ ಆಯೋಗದ ಅಧ್ಯಕ್ಷ ಡಾ.ಮೂರ್ತಿ ಅವರಲ್ಲಿ ಮನವಿ ಮಾಡಿದರು.

"ಸುಳ್ಳು ಜಾತಿ ಪ್ರಮಾಣ ಪತ್ರ ಪರಿಶೀಲನೆಗೆ ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಇದೆ. ಜಿಲ್ಲಾಧಿಕಾರಿಗಳು, ಅಧ್ಯಕ್ಷರು, ಜಿಪಂ ಉಪ ಕಾರ್ಯದರ್ಶಿ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ತಹಸಿಲ್ದಾರ್ ಸದಸ್ಯರಾಗಿರುತ್ತಾರೆ. ಸಿಆರ್‌ಇ ತನಿಖೆ ಮಾಡಿ ಸಲ್ಲಿಸಿದ ವರದಿಯ ಜಾತಿ ಪ್ರಮಾಣ ಪತ್ರ ರದ್ದು ಮಾಡುತ್ತಾರೆ. ಇದರ ಮೇಲೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ತರುತ್ತಾರೆ. ಇದಕ್ಕೆ ಅವಕಾಶ ಕೊಡಬಾರದು. ತಪ್ಪಿತಸ್ಥರ ಮೇಲೆ ಎಫ್‌ಐಆರ್ ದಾಖಲಿಸಬೇಕು. ಸರ್ಕಾರದ ಸೌಲಭ್ಯ ಮುಟ್ಟುಗೋಲು ಹಾಕಿಕೊಳ್ಳಬೇಕು.

–ಅಹಿಂದ ಜವರಪ್ಪ, ಸಾಮಾಜಿಕ ಹೋರಾಟಗಾರ

3 ವರ್ಷದ ನಂತರ ಕೆಆರ್‌ಎಸ್ ಹಿನ್ನೀರಿನಲ್ಲಿ ಐತಿಹಾಸಿಕ ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ದೇವಾಲಯ ದರ್ಶನ

● ಹರಿದು ಬರುತ್ತಿದೆ ಪ್ರವಾಸಿಗರ ದಂಡು ● ಫೋಟೋಶೂಟ್, ಭರತನಾಟ್ಯ, ಕಿರುಚಿತ್ರ ಚಿತ್ರೀಕರಣ



ಶ್ರೀರಂಗಪಟ್ಟಣ, ಜೂ.17(ವಿಕೆ)– ಕೆಆರ್‌ಎಸ್‌ನಲ್ಲಿ ನೀರಿನ ಮಟ್ಟ ಕುಸಿದಿರುವ ಹಿನ್ನೆಲೆಯಲ್ಲಿ ಮೂರು ವರ್ಷಗಳ ಬಳಿಕ ಕೆಆರ್‌ಎಸ್ ಅಣೆಕಟ್ಟೆಯ ಹಿನ್ನೀರಿನಲ್ಲಿ ಐತಿಹಾಸಿಕ ಶ್ರೀಲಕ್ಷ್ಮೀ ನಾರಾಯಣಸ್ವಾಮಿ ದೇವಾಲಯ ಮತ್ತೆ ಗೋಚರಿಸಿದೆ. ಈ ಅಪರೂಪದ ದೃಶ್ಯವನ್ನು ಕಣ್ತುಂಬಿಕೊಳ್ಳಲು ರಾಜ್ಯದ ವಿವಿಧ ಭಾಗಗಳಿಂದ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಆದರೆ ದೇವಾಲಯ ಕಾಣಿಸಿಕೊಂಡಿರುವುದು ಪ್ರವಾಸೋದ್ಯಮದ ದೃಷ್ಟಿಯಿಂದ ಸಂತಸ ಮೂಡಿಸಿದರೆ, ಮತ್ತೊಂದೆಡೆ ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹ ಗಣನೀಯವಾಗಿ ಕುಸಿದಿರುವುದು ರೈತರಲ್ಲಿ ಆತಂಕ ಹೆಚ್ಚಿಸಿದೆ.

ಜೂ.16ರ ಬೆಳಗ್ಗೆ 8 ಗಂಟೆಯ ವೇಳೆಗೆ ಲಭ್ಯವಾದ ಅಂಕಿ ಅಂಶಗಳ ಪ್ರಕಾರ, ಕೆಆರ್‌ಎಸ್ ಅಣೆಕಟ್ಟೆಯ ಗರಿಷ್ಠ ಮಟ್ಟ 124.80 ಅಡಿ ಇದ್ದು, ಪ್ರಸ್ತುತ ನೀರಿನ ಮಟ್ಟ ಕೇವಲ 81.35 ಅಡಿಗೆ ಇಳಿದಿದೆ. 49.452 ಟಿಎಂಸಿ ಗರಿಷ್ಠ ಸಾಮರ್ಥ್ಯದ ಅಣೆಕಟ್ಟೆಯಲ್ಲಿ ಕೇವಲ 11.394 ಟಿಎಂಸಿ ನೀರು ಸಂಗ್ರಹವಾಗಿದ್ದು, ಜೀವಂತ ಸಂಗ್ರಹ (Live Storage) 3.015 ಟಿಎಂಸಿಗೆ ಸೀಮಿತವಾಗಿದೆ.

ಅಣೆಕಟ್ಟೆಗೆ 581 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಕಾಲುವೆಗಳು ಹಾಗೂ ಕುಡಿಯುವ ನೀರಿನ ಸರಬರಾಜು ಸೇರಿದಂತೆ ಒಟ್ಟು 436 ಕ್ಯೂಸೆಕ್ ನೀರನ್ನು ಹೊರ ಬಿಡಲಾಗುತ್ತಿದೆ. ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಆಗದಿದ್ದರೆ ಮುಂಬರುವ ದಿನಗಳಲ್ಲಿ ನೀರಿನ ಕೊರತೆ ಮತ್ತಷ್ಟು ತೀವ್ರಗೊಳ್ಳುವ ಸಾಧ್ಯತೆಯಿದೆ ಎಂದು ರೈತರು ಕಳವಳ ವ್ಯಕ್ತಪಡಿಸಿದ್ದಾರೆ.

ಪ್ರವಾಸಿಗರ ಹೊಸ ಆಕರ್ಷಣೆ: ಹಿನ್ನೀರಿನಲ್ಲಿ ಕಾಣಿಸಿಕೊಂಡಿರುವ ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ದೇವಾಲಯ ಈಗ ಪ್ರಮುಖ ಪ್ರವಾಸಿ ತಾಣವಾಗಿ ರೂಪುಗೊಂಡಿದೆ. ಪ್ರತಿದಿನ ನೂರಾರು ಮಂದಿ ದೇವಾಲಯ ವೀಕ್ಷಣೆಗೆ ಆಗಮಿಸುತ್ತಿದ್ದು, ಪ್ರಿ–ವೆಡ್ಡಿಂಗ್ ಫೋಟೋಶೂಟ್, ಭರತ ನಾಟ್ಯ ಚಿತ್ರೀಕರಣ, ಕಿರುಚಿತ್ರ ಹಾಗೂ ಸಾಮಾಜಿಕ ಜಾಲತಾಣಗಳ ವಿಡಿಯೊ ನಿರ್ಮಾಣಗಳಿಗೂ ಈ ಪ್ರದೇಶ ನೆಚ್ಚಿನ ತಾಣವಾಗಿದೆ.

ದೇವಾಲಯದ ಹಿನ್ನೆಲೆ ಹಾಗೂ ವಿಶಾಲ ಜಲಾಶಯದ ದೃಶ್ಯಗಳು ಛಾಯಾಗ್ರಾಹಕರನ್ನು ಸೆಳೆಯುತ್ತಿದ್ದು, ವಾರಾಂತ್ಯಗಳಲ್ಲಿ ಪ್ರವಾಸಿಗರ ಸಂಖ್ಯೆ ಇನ್ನಷ್ಟು ಹೆಚ್ಚಾಗುತ್ತಿದೆ.

ನೈರ್ಮಲ್ಯಕ್ಕೆ ಧಕ್ಕೆ: ಆದರೆ ಹೆಚ್ಚುತ್ತಿರುವ ಜನಸಂದಣಿ ಪರಿಸರ ಹಾಗೂ ನೈರ್ಮಲ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಪ್ರವಾಸಿಗರು ತಾವು ತಂದಿರುವ ಪ್ಲಾಸ್ಟಿಕ್ ಬಾಟಲಿಗಳು, ಆಹಾರ ಪ್ಯಾಕೆಟ್‌ಗಳು, ತಟ್ಟೆಗಳು ಮತ್ತು ಇತರ ತ್ಯಾಜ್ಯ ವಸ್ತುಗಳನ್ನು ಸ್ಥಳದಲ್ಲೇ ಬಿಟ್ಟು ಹೋಗುತ್ತಿರುವುದು ಕಂಡು ಬಂದಿದೆ. ಪರಿಣಾಮವಾಗಿ ಈ ಐತಿಹಾಸಿಕ ತಾಣದ ಸೌಂದರ್ಯಕ್ಕೆ ಧಕ್ಕೆ ಉಂಟಾಗುತ್ತಿದೆ.

ಕುಡುಕರ ಹಾವಳಿ: ಸ್ಥಳೀಯರ ಪ್ರಕಾರ, ಕೆಲವರು ಸಂಜೆ ವೇಳೆಯಲ್ಲಿ ಮದ್ಯ ಸೇವನೆಗಾಗಿ ಈ ಪ್ರದೇಶವನ್ನು ಬಳಸುತ್ತಿದ್ದು, ಖಾಲಿ ಮದ್ಯದ ಬಾಟಲಿಗಳು ಹಾಗೂ ತ್ಯಾಜ್ಯ ವಸ್ತುಗಳು ಅಲ್ಲಲ್ಲಿ ಬಿದ್ದಿರುವುದು ಕಂಡು ಬರುತ್ತಿದೆ. ಇದರಿಂದ ಕುಟುಂಬ ಸಮೇತ ಆಗಮಿಸುವ ಪ್ರವಾಸಿಗರಿಗೆ ಮುಜುಗರ ಉಂಟಾಗುವುದರ ಜೊತೆಗೆ ತಾಣದ ಗೌರವಕ್ಕೂ ಧಕ್ಕೆ ಉಂಟಾಗುತ್ತಿದೆ.

ಪೊಲೀಸ್ ಹಾಗೂ ಆಡಳಿತದ ಗಮನ ಅಗತ್ಯ: ಈ ಹಿನ್ನೆಲೆಯಲ್ಲಿ ಸ್ಥಳೀಯ ಪೊಲೀಸರು ಹಾಗೂ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಂಡು ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು ಎಂಬ ಆಗ್ರಹ ಕೇಳಿ ಬಂದಿದೆ. ಪ್ರವಾಸಿಗರ ಸುರಕ್ಷತೆ, ನೈರ್ಮಲ್ಯ ಸಂರಕ್ಷಣೆ ಹಾಗೂ ಐತಿಹಾಸಿಕ ತಾಣದ ರಕ್ಷಣೆಗಾಗಿ ನಿಯಮಿತ ಪೊಲೀಸ್ ಗಸ್ತು, ಎಚ್ಚರಿಕೆ ಫಲಕಗಳು ಹಾಗೂ ತ್ಯಾಜ್ಯ ನಿರ್ವಹಣಾ ವ್ಯವಸ್ಥೆ ಕಲ್ಪಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಒಂದೆಡೆ ಮೂರು ವರ್ಷಗಳ ಬಳಿಕ ದೇವಾಲಯ ಕಾಣಿಸಿಕೊಂಡಿರುವುದು ಕುತೂಹಲ ಮೂಡಿಸಿದ್ದರೆ, ಮತ್ತೊಂದೆಡೆ ಕೆಆರ್‌ಎಸ್ ಜಲಾಶಯದಲ್ಲಿ ನೀರಿನ ಮಟ್ಟ ಕುಸಿದಿರುವುದು ಕೃಷಿ ಚಟುವಟಿಕೆಗಳ ಮೇಲೆ ಪರಿಣಾಮ ಬೀರುವ ಭೀತಿಯನ್ನು ರೈತರಲ್ಲಿ ಉಂಟುಮಾಡಿದೆ. ಪ್ರವಾಸಿಗರಿಗೆ ಇದು ಆಕರ್ಷಣೆಯ ತಾಣವಾಗಿದ್ದರೂ, ರೈತರಿಗೆ ಇದು ನೀರಿನ ಕೊರತೆಯ ಮುನ್ಸೂಚನೆಯಾಗಿ ಕಾಣಿಸುತ್ತಿದೆ.

ದೇವಾಲಯದ ಮರುದರ್ಶನ ಪ್ರವಾಸಿಗರಿಗೆ ಸಂತಸ ನೀಡಿದರೂ, ಕೆಆರ್‌ಎಸ್ ಬರಿದಾಗುತ್ತಿರುವುದು ರೈತರ ಪಾಲಿಗೆ ಎಚ್ಚರಿಕೆಯ ಗಂಟೆಯಾಗಿದೆ ಎಂಬ ಅಭಿಪ್ರಾಯ ಸ್ಥಳೀಯ ವಲಯದಲ್ಲಿ ಕೇಳಿಬರುತ್ತಿದೆ.

ಒಂದೇ ಜಾಗದಲ್ಲಿ ತಮ್ಮಣ್ಣ, ಉದಯ್ ಗುದ್ದಲಿ ಪೂಜೆ

ಭಾರತೀನಗರ, ಜೂ.17– ಪ್ರಯಾಣಿಕರ ತಂಗುದಾಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಹಾಗೂ ಶಾಸಕ ಕೆ.ಎಂ.ಉದಯ್ ಅವರು ಒಂದೇ ಸ್ಥಳದಲ್ಲಿ ಒಬ್ಬರಾದ ಮೇಲೆ ಒಬ್ಬರಂತೆ ಗುದ್ದಲಿಪೂಜೆ ನಡೆಸಿದ್ದು, ಎರಡೂ ಪಕ್ಷಗಳ ಕಾರ್ಯಕರ್ತರ ನಡುವೆ ಮಾತಿನ ಚಕಮಕಿಗೆ ಕಾರಣವಾಗಿದೆ.

ಕಳೆದ ಸೋಮವಾರ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ನೀಡಿದ್ದ 11.10 ಲಕ್ಷ ರೂ ಅನುದಾನದಲ್ಲಿ ಪ್ರಯಾಣಿಕರ ತಂಗುದಾಣ ನಿರ್ಮಿಸಲು ಜೆಡಿಎಸ್ ಕಾರ್ಯಕರ್ತರು ಸ್ಥಳದ ಸ್ವಚ್ಛತಾ ಕಾರ್ಯ ನಡೆಸಿ ಅಣಿಗೊಳಿಸಿದ್ದರು. ಬುಧವಾರ ತಂಗುದಾಣದ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸುವ ಕಾರ್ಯಕ್ರಮ ನಿಗದಿಗೊಳಿಸಲಾಗಿತ್ತು.

ಈ ವಿಚಾರ ತಿಳಿದ ಕಾಂಗ್ರೆಸ್ ಮುಖಂಡರು ಶಾಸಕರ ಕೆ.ಎಂ.ಉದಯ್ ಅವರನ್ನು ಕರೆಯಿಸಿ ಮಂಗಳವಾರ ಮಧ್ಯಾಹ್ನ ಡಿ.ಸಿ.ತಮ್ಮಣ್ಣ ಅವರ ಕಾರ್ಯಕರ್ತರು ಸ್ವಚ್ಛಗೊಳಿಸಿದ ಅದೇ ಸ್ಥಳದಲ್ಲಿ 7 ಲಕ್ಷ ರೂ ವೆಚ್ಚದಲ್ಲಿ ತಂಗುದಾಣ ನಿರ್ಮಿಸುವ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಜೆಡಿಎಸ್, ಕಾಂಗ್ರೆಸ್ ಕಾರ್ಯಕರ್ತರ ಮಾತಿನ ಚಕಮಕಿ



ತಂಗುದಾಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಚಕಮಕಿ ನಡೆಯಿತು.

ಇದರಿಂದ ಸಿಟ್ಟಿಗೆದ್ದ ಜೆಡಿಎಸ್ ಕಾರ್ಯಕರ್ತರು ತಾವು ಸ್ವಚ್ಛಗೊಳಿಸಿದ ಸ್ಥಳದಲ್ಲೇ ಬುಧವಾರ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರನ್ನು ಕರೆಸಿ ತಂಗುದಾಣ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಜೆಡಿಎಸ್ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ಈ ಸಂದರ್ಭದಲ್ಲಿ ಜೆಡಿಎಸ್ ಕಾರ್ಯಕರ್ತರ ಹಾಗೂ ಗ್ರಾಪಂ ಮಾಜಿ ಅಧ್ಯಕ್ಷ ಪ್ರದೀಪ್, ಮಹೇಶ್ ಮತ್ತು ಅವರ ಬೆಂಬಲಿಗರು ನಾವು ಸ್ವಚ್ಛಗೊಳಿಸಿದ ಸ್ಥಳದಲ್ಲೇ ಶಾಸಕರನ್ನು ಕರೆಸಿ ಗುದ್ದಲಿ ಪೂಜೆ ನೆರವೇರಿಸಿರುವುದು ಸರಿಯಲ್ಲ. ನೀವು ಬೇಕಾದರೆ ಮತ್ತೊಂದು ಸ್ಥಳವನ್ನು ಗುರುತಿಸಿ ತಂಗುದಾಣವನ್ನು ನಿರ್ಮಿಸಿ ಎಂದು ಕಾಂಗ್ರೆಸ್ ಕಾರ್ಯಕರ್ತರಾದ ರಘು, ಪ್ರಸನ್ನ ಹಾಗೂ ಅವರ ಬೆಂಬಲಿಗರೊಂದಿಗೆ ಮಾತಿನ ಚಕಮಕಿಗೆ ಇಳಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರು ಮಧ್ಯೆ ಪ್ರವೇಶಿಸಿ ಕಳೆದ ಫೆಬ್ರವರಿಯಲ್ಲಿಯೇ ತಂಗುದಾಣ ನಿರ್ಮಾಣಕ್ಕೆ ಕುಮಾರಸ್ವಾಮಿ ಅವರು ಹಣ ಬಿಡುಗಡೆ ಮಾಡಿದ್ದಾರೆ. ಶಾಸಕರು ಇತ್ತೀಚೆಗೆ ಬಿಡುಗಡೆ ಮಾಡಿದ್ದಾರೆ. ಇದನ್ನು ವ್ಯಯಕ್ತಿಕವಾಗಿ ತೆಗೆದುಕೊಳ್ಳುವುದು ಬೇಡ, ಗ್ರಾಮದ ಅಭಿವೃದ್ಧಿಯ ಹಿತದೃಷ್ಟಿ ಮುಖ್ಯ. ಹಾಗಾಗಿ ನೀವು ತಂಗುದಾಣ ಮಾಡಲೇ ಬೇಕಾದರೆ ಪಕ್ಕದಲ್ಲೇ ಮತ್ತೊಂದು ತಂಗುದಾಣ ನಿರ್ಮಾಣ ಮಾಡಿ ಎಂದು ಕಾಂಗ್ರೆಸ್ ಕಾರ್ಯಕರ್ತರನ್ನು ಸಮಾಧಾನಪಡಿಸಿದರು. ನಂತರ ಪರಿಸ್ಥಿತಿ ತಿಳಿಯಾಯಿತು.

ಇದೇ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಕಂಡಕೆರೆ ಹನುಮಂತೇಗೌಡ, ಗುರುದೇವರಹಳ್ಳಿ ಅರವಿಂದ್, ಅಪ್ಪುಜಿ ಗೌಡ, ಚಿಕ್ಕಹುಚ್ಚೇಗೌಡ, ಪ್ರದೀಪ್, ಮಹೇಶ್, ಸಂದೀಪ್, ಪುರುಷೋತ್ತಮ, ಆನಂದ, ಶರತ್, ಕೆಂಪೇಗೌಡ, ಉಮೇಶ, ಸುಕ್ಕೇತ, ಡಿ.ಎಂ.ಪುಟ್ಟಸ್ವಾಮಿ, ಶೇಖರ್, ಮಹೇಶ, ಉಪಸ್ಥಿತರಿದ್ದರು.

ಅಕ್ಕಪಕ್ಕದಲ್ಲೇ ಎರಡು ತಂಗುದಾಣ ನಿರ್ಮಾಣ ಕಾಮಗಾರಿಗೆ ಜೆಡಿಎಸ್ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಜೆಸಿಬಿಯಿಂದ ಕೆಲಸ ಪ್ರಾರಂಭಿಸಿದ್ದಾರೆ.

ರೈತರ ವಾಹನಗಳಿಗೆ ಟೋಲ್ ಸುಂಕ ರದ್ದತಿಗೆ ಆಗ್ರಹಿಸಿ

ಜೂ.23ರಂದು ರೈತರ ಪ್ರತಿಭಟನೆ



ಸುದ್ದಿಗೋಷ್ಠಿಯಲ್ಲಿ ರೈತ ಹೋರಾಟಗಾರ ಕುರುಬೂರು ಶಾಂತಕುಮಾರ್ ಮಾತನಾಡಿದರು.

ಮಂಡ್ಯ: ರೈತರ ವಾಹನಗಳಿಗೆ ಟೋಲ್ ಸುಂಕ ವಸೂಲಿ ನಿಲ್ಲಿಸಲು ಪಂಜಾಬ್ ಮಾದರಿಯಲ್ಲಿ ಶುಲ್ಕ ವಸೂಲಿ ಕೇಂದ್ರ ರದ್ದು ಮಾಡಲು ಒತ್ತಾಯಿಸಿ ಗಣಂಗೂರಿನ ರಾಷ್ಟ್ರೀಯ ಹೆದ್ದಾರಿ ಟೋಲ್ ಬಳಿ ಜೂ.23 ರಂದು ಪ್ರತಿಭಟನೆ ಮಾಡಲಾಗುವುದು ಎಂದು ರೈತ ಹೋರಾಟಗಾರ ಕುರುಬೂರು ಶಾಂತಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿರ್ಮಾಣ ಮಾಡಿರುವ ಟೋಲ್ ಸುಂಕ ವಸೂಲಿ ಕೇಂದ್ರಗಳಲ್ಲಿ ರೈತರಿಗೆ, ರೈತರ ವಾಹನಗಳಿಗೆ ಸುಂಕ ವಸೂಲಿ ಕಿರುಕುಳ ಹೆಚ್ಚಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರೈತರ ವಾಹನಗಳಿಗೆ ವಿನಾಯಿತಿ ನೀಡಿದರೂ ಸಹ ಕಬ್ಬು ಭತ್ತ ಹಣ್ಣುಹಂಪಲು ಸಾಗಾಣಿಕೆ ವಾಹನಗಳಿಗೆ ಹಾಗೂ ರೈತ ಮುಖಂಡರ ವಾಹನಗಳಿಗೆ ತಡೆ ಮಾಡಿ ಬಲತ್ಕಾರವಾಗಿ ಸುಂಕ ವಸೂಲಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ವಾಹನ ಖರೀದಿ ಸಮಯದಲ್ಲಿ ತೆರಿಗೆ ಕಟ್ಟ ಮತ್ತೆ ಟೋಲ್ ಶುಲ್ಕ ಪಾವತಿಸುವ ಪರಿಸ್ಥಿತಿ ಎದುರಾಗಿದೆ. 8 ಕಿಮೀ ವ್ಯಾಪ್ತಿಯಲ್ಲಿ ಟೋಲ್ ಸಂಗ್ರಹಿಸದಂತೆ ಕೃಷಿ ಉತ್ಪನ್ನಗಳ ಸಾಗಾಣಿಕೆ ವಾಹನಗಳಲ್ಲಿ ಟೋಲ್ ಸಂಗ್ರಹಿಸದಂತೆ ವಿನಾಯ್ತಿ ನೀಡಲಾಗಿದೆ.

> 6 ಟನ್ ಕಬ್ಬಿಗೆ ರಾಜ್ಯ ಸರ್ಕಾರ ನಿಗದಿ ಮಾಡಿದ ಹೆಚ್ಚುವರಿ ಹಣ ನೀಡದೆ ದಕ್ಷಿಣ ಕರ್ನಾಟಕ ಭಾಗದ ಕಾರ್ಖಾನೆಗಳು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿವೆ. ಈ ಹಣ ಪಾವತಿಸುವ ತನಕ ಕಾರ್ಖಾನೆಗಳ ಆರಂಭಕ್ಕೆ ಜಿಲ್ಲಾಡಳಿತ ಅನುಮತಿ ಕೊಡಬಾರದು. ರೈತರು ಸಹ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಕೆ ಮಾಡದೆ ಬಾಕಿ ಹಣ ವಸೂಲಿ ಮಾಡಿಕೊಳ್ಳಬೇಕು.
> – ಕುರುಬೂರು ಶಾಂತಕುಮಾರ್.

ಆದರೂ ಟೋಲ್ ಸಂಗ್ರಹಿಸಲಾಗುತ್ತಿದ್ದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕಣ್ಮುಚ್ಚಿ ಕುಳಿತಿದೆ ಎಂದು ದೂರಿದರು.

ಕೆಲವು ಕಡೆ ಹೆದ್ದಾರಿಗಳಲ್ಲಿ ಸರ್ವಿಸ್ ರಸ್ತೆ ನಿರ್ಮಾಣ ಮಾಡಿಲ್ಲ. ಮೂಲ ಸೌಕರ್ಯಗಳಿಲ್ಲ. ಈ ಬಗ್ಗೆ ಗಮನ ಹರಿಸದೆ ಕಾನೂನು ಬಾಹಿರವಾಗಿ ಸುಂಕ ವಸೂಲಿ ಮಾಡುತ್ತಿದ್ದಾರೆ. ಪಂಜಾಬ್ ಸರಕಾರ ಸುಂಕ ವಸೂಲಿ ಕೇಂದ್ರಗಳನ್ನು ರದ್ದು ಮಾಡಿದ ರೀತಿ ಕರ್ನಾಟಕದಲ್ಲಿಯೂ ರದ್ದು ಮಾಡಬೇಕು ಎಂದು ಪ್ರತಿಭಟನೆಯ ಮೂಲಕ ಒತ್ತಾಯ ಮಾಡುವುದಾಗಿ ತಿಳಿಸಿದರು.

ರಾಜ್ಯದ ರೈತರಿಗೆ ಸಂಕಷ್ಟ ಉಂಟು ಮಾಡುವ ವಿದ್ಯುತ್ ಖಾಸಗೀಕರಣಕ್ಕೆ ಟಾಟಾ ಕಂಪನಿ ಅರ್ಜಿ ಸಲ್ಲಿಸಿದೆ. ಇದರಿಂದ ಭಾಗ್ಯಲಕ್ಷ್ಮಿ, ಗೃಹಜ್ಯೋತಿ ಹಾಗೂ ರೈತರ ಪಂಪ್ ಸೆಟ್‌ಗಳಿಗೆ ಸರ್ಕಾರ ನೀಡುವ ವಿದ್ಯುತ್ ಕಡಿತಗೊಳ್ಳಲಿದೆ. ಈ ಅರ್ಜಿಯನ್ನು ರಾಜ್ಯ ಸರಕಾರ ತಿರಸ್ಕರಿಸಬೇಕು ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಇಂದುವಾಳು ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಮಂಜೇಶ್ ಗೌಡ, ಮಂಜುನಾಥ್, ರವಿಚಂದ್ರ ಗಂಜಾಂ, ಅತ್ತಳ್ಳಿ ದೇವರಾಜ್, ಮಿಲಿಟರಿ ಕುಮಾರ ಇದ್ದರು.

ಒಂದನೇ ಪುಟದಿಂದ

ರೆಸ್ಟೋಬಾರ್ ಕಟ್ಟಡಕ್ಕೆ ಬೀಗ



ಸೋಕೋ ತಂಡ ಪರಿಶೀಲಿಸುತ್ತಿರುವುದು.

ಯಾವುದಾದರು ಸ್ಫೋಟದಂತಹ ವಸ್ತುಗಳಿಂದ ಅಗ್ನಿ ದುರಂತ ಸಂಭವಿಸಿದೆಯಾ ಎಂದು ಬಗ್ಗೆಯೂ ಪರಿಶೀಲನೆ ನಡೆಸಿರುವ ಸೋಕೊ ತಂಡ, ರೆಸ್ಟೋಬಾರ್‌ನ ಅವಶೇಷದಲ್ಲಿ ಸಿಕ್ಕಿರುವ ಸ್ಯಾಂಪಲ್ ಸಂಗ್ರಹಿಸಿದೆ. ಇವುಗಳನ್ನು ಬೆಂಗಳೂರಿನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ಇನ್ನು 2–3 ದಿನದಲ್ಲಿ ವರದಿ ಬರುವ ನಿರೀಕ್ಷೆಯಿದೆ.

ಶಾರ್ಟ್ ಸರ್ಕ್ಯೂಟ್ ಶಂಕೆ: ರೆಸ್ಟೋಬಾರ್ ಪರಿಶೀಲಿಸುವ ವೇಳೆ ಗೋಡೆ ಮೇಲಿದ್ದ ಬಲ್ಬ್‌ನ ಹೋಲ್ಡರ್ ಬೆಂಕಿ ಜ್ವಾಲೆಯಲ್ಲಿ ಮೆಲ್ಟ್ ಆಗಿರುವುದು ಪತ್ತೆಯಾಗಿದ್ದು, ಇದರಿಂದ ಶಾರ್ಟ್‌ಸರ್ಕ್ಯೂಟ್‌ನಿಂದ ಬೆಂಕಿ ಅವಘಡ ಸಂಭವಿಸಿದೆ ಎಂದು ಮೇಲ್ನೋಟಕ್ಕೆ ಕಂಡು ಬಂದಿದೆ. ಹೋಲ್ಡರ್‌ನಲ್ಲಿ ಉಂಟಾದ ಸ್ಪಾರ್ಕ್‌ನ ಕಿಡಿ, ಮೇಲ್ಛಾವಣಿ ಅಲಂಕಾರಕ್ಕೆ ಬಳಸಿದ್ದ ಒಣಹುಲ್ಲು, ಗೋಣಿ ಚೀಲಕ್ಕೆ ತಾಗಿ ಕ್ಷಣ ಮಾತ್ರದಲ್ಲಿ ಬೆಂಕಿ ಆವರಿಸಿದೆ ಎಂಬ ಶಂಕೆ ವ್ಯಕ್ತವಾಗಿದೆ.

ಎಚ್ಚೆತ್ತುಕೊಂಡ ಇತರರು: ದಟ್ಟಗಳ್ಳಿಯ ರೆಸ್ಟೋಬಾರ್‌ನಲ್ಲಿ ಸಂಭವಿಸಿದ ಅಗ್ನಿ ದುರಂತದಿಂದ ನಿಯಮ ಉಲ್ಲಂಘಿಸಿ ಬಾರ್, ರೆಸ್ಟೋರೆಂಟ್, ಪಬ್ ನಡೆಸುತ್ತಿದ್ದ ಹಲವರು ಎಚ್ಚೆತ್ತುಕೊಂಡಿದ್ದು, ಅಧಿಕಾರಿಗಳು ದಾಳಿ ಅಥವಾ ಪರಿಶೀಲನೆಗೆ ಬರಬಹುದೆಂದು ನಿಯಮ ಪಾಲನೆಗೆ ಮುಂದಾಗಿದ್ದಾರೆ. ಅಲ್ಲದೆ, ಈ ಹಿಂದೆ ನಿಯಮ ಉಲ್ಲಂಘಿಸಿ ನಡೆಸುತ್ತಿದ್ದ ಚಟುವಟಿಕೆ ಸ್ಥಗಿತಗೊಳಿಸಿದ್ದಾರೆಂದು ಮೂಲಗಳು ತಿಳಿಸಿವೆ.

ಠಾಣಾ ವ್ಯಾಪ್ತಿಯಲ್ಲಿ ಸಭೆ: ಈ ದುರಂತದ ಬಳಿಕ ಕೊನೆಗೂ ಎಚ್ಚೆತ್ತುಕೊಂಡಿರುವ ಪೊಲೀಸ್ ಇಲಾಖೆ ಇದೀಗ ಪ್ರತಿ ಠಾಣಾ ವ್ಯಾಪ್ತಿಯ ಬಾರ್, ರೆಸ್ಟೋರೆಂಟ್, ಪಬ್‌ಗಳ ಪಟ್ಟಿ ಮಾಡುವಂತೆ ಆಯುಕ್ತರು ಠಾಣಾಧಿಕಾರಿಗಳಿಗೆ ಸೂಚಿಸಿದ್ದಾರೆ. ಇದರಿಂದ ಈಗಾಗಲೇ ಮೈಸೂರಿನ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯ ಬಾರ್, ರೆಸ್ಟೋರೆಂಟ್,ಪಬ್‌ಗಳ ಪಟ್ಟಿ ಸಿದ್ಧಪಡಿಸಲಾಗುತ್ತಿದೆ. ಇನ್ನೆರಡು ದಿನದಲ್ಲಿ ಆಯಾ ಠಾಣೆಗಳಲ್ಲಿ ಬಾರ್, ರೆಸ್ಟೋರೆಂಟ್ ಮಾಲೀಕರ ಸಭೆ ನಡೆಸಿ, ಕಟ್ಟುನಿಟ್ಟಾಗಿ ನಿಯಮ ಪಾಲಿಸುವಂತೆ ಸೂಚನೆ ನೀಡಲು ಉದ್ದೇಶಿಸಲಾಗಿದೆ.

ಆಪತ್ತಾಗುವ ಅಲಂಕಾರ ಬೇಡ: ಗ್ರಾಹಕರನ್ನು ಸೆಳೆಯಲು ರೆಸ್ಟೋರೆಂಟ್, ರೆಸ್ಟೋಬಾರ್, ಪಬ್ ಸೇರಿದಂತೆ ಇನ್ನಿತರೆಡೆ ಅಲಂಕಾರ ಮಾಡಲಾಗಿದೆ. ಈ ಅಲಂಕಾರಕ್ಕೆ ಥರ್ಮಕೋಲ್, ಒಣ ಹುಲ್ಲು, ಬಿದಿರು ಸೇರಿದಂತೆ ಇನ್ನಿತರ ವಸ್ತುಗಳನ್ನು ಬಳಸಲಾಗುತ್ತಿದೆ. ಬೆಂಕಿಗೆ ಪ್ರಿಯವಾದ ವಸ್ತುಗಳನ್ನೇ ಅಲಂಕಾರಕ್ಕೆ ಬಳಸುವುದನ್ನು ನಿರ್ಬಂಧಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ. ಎಷ್ಟೇ ಮುಂಜಾಗ್ರತಾ ಕ್ರಮ ಕೈಗೊಂಡರೂ ಆಕಸ್ಮಿಕ ಘಟನೆಗಳು ನಡೆಯುತ್ತಲೇ ಇರುತ್ತವೆ. ದಟ್ಟಗಳ್ಳಿಯ ರೆಸ್ಟೋಬಾರ್ ಘಟನೆಯಲ್ಲಿ ಒಣಹುಲ್ಲು, ಗೋಣಿ ಚೀಲ ಬಳಸಿದ್ದರಿಂದ ಬೆಂಕಿ ಕ್ಷಣಾರ್ಧದಲ್ಲಿ ವ್ಯಾಪಿಸಿದೆ. ಇಂತಹ ದುರ್ಘಟನೆ ಮರುಕಳಿಸದಂತೆ ಕಟ್ಟೆಚ್ಚರವಹಿಸಲು ಬೆಂಕಿಗೆ ಪ್ರಿಯವಾದ ವಸ್ತುಗಳನ್ನು ಅಲಂಕಾರ ಮಾಡಲು ಬಳಸದಂತೆ ತಾಕೀತು ಮಾಡುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸಮನ್ವಯತೆ ಇರಬೇಕು: ಮೈಸೂರು ನಗರ ವ್ಯಾಪ್ತಿಯಲ್ಲಿ ಕಾನೂನು ಬಾಹಿರವಾಗಿ ನಡೆಸುತ್ತಿರುವ ಬಾರ್, ರೆಸ್ಟೋರೆಂಟ್, ಪಬ್, ಹುಕ್ಕಾ ಬಾರ್, ಕ್ಯಾಸಿನೋ ಸೇರಿದಂತೆ ಇನ್ನಿತರ ಅಡ್ಡೆಗಳ ನಿಯಂತ್ರಣಕ್ಕೆ ಮೈಸೂರಲ್ಲಿ ವಿವಿಧ ಇಲಾಖೆಗಳ ನಡುವೆ ಸಮನ್ವಯತೆ ಕೊರತೆ ಇದೆ. ಕಾಲ ಕಾಲಕ್ಕೆ ನಿಯಮ ಪಾಲಿಸುತ್ತಿರುವ ಬಗ್ಗೆ ಪರಿಶೀಲಿಸಲು ಪೊಲೀಸ್, ಅಬಕಾರಿ, ಪಾಲಿಕೆ ಅಧಿಕಾರಿಗಳು ಸ್ಥಳಕ್ಕೆ ಹೋಗಬೇಕು. ಸಮನ್ವಯತೆ ಸಾಧಿಸಲು ಸಮಿತಿ ಅಥವಾ ತಂಡ ರಚಿಸಿ, ಕಾರ್ಯಾಚರಣೆ ನಡೆಸಿದರೆ ದುರಂತಗಳು ತಪ್ಪುತ್ತವೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ.

ಸರ್ಕಾರಕ್ಕೆ ವರದಿ ನೀಡಲು ಸೂಚನೆ

ಆದರೆ ಬೆಂಗಳೂರು–ಮೈಸೂರು ಜಯದೇವ ಅಥವಾ ಕಲಬುರಗಿಯಲ್ಲೇ ಆಗಿರಬಹುದು. ಇದಲ್ಲದೆ, ಜಯದೇವ ಅಧೀನದ ಆಸ್ಪತ್ರೆಗಳ ಸಂಬಂಧ ಈ ಸುದ್ದಿ ಬಂದ ಮೇಲೆ ಅನಲೈಸ್ ಮಾಡಿ ನೋಡಿದ್ದು, ಕಳೆದ ಹತ್ತಾರು ವರ್ಷಗಳಿಂದ ಇಲ್ಲಿ ಪ್ರತಿ ತಿಂಗಳ ಸರಾಸರಿ ಸಾವು ಪ್ರಮಾಣ ಶೇ.4ರಿಂದ 6ರಷ್ಟು ಇದೆ ಎಂದು ವಿವರಿಸಿದರು.

ಥರ್ಡ್ ಪಾರ್ಟಿ ವ್ಯಾಲ್ಯೂವೇಷನ್‌ಗೂ ಕ್ರಮ: ಪ್ರತಿ ಸಾವುಗಳ ಸಂಬಂಧ ಕಾರಣಗಳು ಒಳಗೊಂಡಂತೆ ಅನಲೈಜ್ (ವಿಶ್ಲೇಷಣೆ) ಮಾಡಿ ವರದಿ ನೀಡಬೇಕು. ಅದನ್ನು ಬೇರೆ ಕಾರ್ಡಿಯಾಜಿಸ್ಟ್‌ಗಳ ಮೂಲಕ ಥರ್ಡ್ ಪಾರ್ಟಿ ವ್ಯಾಲ್ಯೂವೇಷನ್ ಕೂಡ ಮಾಡಿಸಬೇಕೆಂದು ತೀರ್ಮಾನ ಮಾಡಿದ್ದೇನೆ. ಪ್ರತಿ ಸಾವು ಸಂಬಂಧ ವರದಿ ನೀಡಲು ಸೂಚನೆ ನೀಡಿದ್ದೇನೆ. ಆದರೆ, ಹಿಂದಿನ ಅಂಕಿ ಅಂಶ ನೋಡಿದಾಗ, 4ರಿಂದ 6ರಷ್ಟು ಸರಾಸರಿ ಇರುವ ಹಿನ್ನೆಲೆಯಲ್ಲಿ ಯಾವುದೇ ಅಸಾಧಾರಣ ಸಾವು ಕಂಡು ಬರುತ್ತಿಲ್ಲ ಎಂದರು.

2–3 ದಿನಗಳಿಂದ ಗಂಭೀರ ಸ್ಥಿತಿಯಲ್ಲಿದ್ದು, ಬಳಿಕ ಅಡ್ಮಿಟ್ ಆಗಿರುವ ರೋಗಿಗಳು ಸಾವನ್ನಪ್ಪಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಅಲ್ಲದೆ, ಮಾಧ್ಯಮದ ಸುದ್ದಿ ನೋಡಿದ ಮೇಲೆ ಕಳೆದ 6 ತಿಂಗಳಿಂದ ಮಾಸಿಕ ಎಷ್ಟು ಸರಾಸರಿ ಇದೆ ಎಂದು ಗಮನಿಸಿದ್ದೇನೆ. ಅದೆಲ್ಲವೂ ಕೂಡ ಶೇ.4ರಿಂದ 6ರಷ್ಟು ಇದೆ. ಇಲ್ಲಿ ಮಾತ್ರವಲ್ಲದೆ ಕಲಬುರಗಿಯಲ್ಲಿಯೂ ಶೇ.4ರಿಂದ 6ರಷ್ಟೇ ಇದೆ. ಅದಕ್ಕಿಂತ ಜಾಸ್ತಿ ಇಲ್ಲ ಎಂದರು. ಇಲ್ಲಿ ಗುಣಮಟ್ಟದ ಚಿಕಿತ್ಸೆ ದೊರೆಯುತ್ತಿದೆ. ಮಾಧ್ಯಮದಲ್ಲಿನ ಈ ರೀತಿಯ ಸುದ್ದಿಯಿಂದ ಜನತೆ ಭಯಭೀತರಾಗುತ್ತಾರೆ. ಈ ರೀತಿಯ ಏನಾದರೂ ಅಸಾಧಾರಣ ಮರಣ ಆಗಿದೆ ಅಥವಾ ಲೋಪವಾಗಿದೆ ಎಂಬುದು ಕೇಳಿಬಂದರೆ ಇಲ್ಲಿರುವ ವೈದ್ಯರನ್ನು ಕೇಳಿ. ಅವರು ಸರಿಯಾಗಿ ಸ್ಪಂದಿಸದಿದ್ದರೆ ನಾನು ಹಾಗೂ ನಿರ್ದೇಶಕರು ಸ್ಪಂದಿಸುತ್ತೇವೆ ಎಂದು ಮಾಧ್ಯಮದವರಿಗೆ ಮನವಿ ಮಾಡಿದರು.

ಸ್ಟೆಂಟ್ 60 ಸಾವಿರಕ್ಕೆ ಮಾಡಬಹುದೆಂದು ತೋರಿಸಿದ್ದೇವೆ: ಏನಾದರೂ ಒಳ್ಳೆಯದಿದ್ದರೆ ಜನರಿಗೆ ಮುಟ್ಟಿಸಿ. ಏಕೆಂದರೆ ಜನರಿಗೆ ಜಯದೇವ ಅಂತಹ ಸರ್ಕಾರಿ ಅಧೀನದ ಆಸ್ಪತ್ರೆ ಮೇಲೆ ವಿಶ್ವಾಸ ಕಡಿಮೆಯಾದರೆ ಅದರ ಲಾಭ ಖಾಸಗಿ ಆಸ್ಪತ್ರೆಗಳಿಗೆ ಆಗಲಿದೆ. ಅಲ್ಲಿ ದುಬಾರಿ ಶುಲ್ಕ ಕಟ್ಟಲಾಗದೇ ಸಾಮಾನ್ಯ ಜನರು ಸಂಕಷ್ಟ ಅನುಭವಿಸುತ್ತಾರೆ. ಇಂದು ಜಯದೇವ ಆಸ್ಪತ್ರೆ ಕಾರಣಕ್ಕೆ ಕಾರ್ಡಿಯಾಕ್ ಕೇರ್ ಸಂಬಂಧ ಖಾಸಗಿ ವೈದ್ಯಕೀಯ ಕ್ಷೇತ್ರದಲ್ಲಿ ಶುಲ್ಕ ಇಳಿಕೆಯಾಗಿದೆ. ಒಂದು ಸ್ಟೆಂಟ್ ಅನ್ನು 60 ಸಾವಿರ ರೂ.ನಲ್ಲಿ ಮಾಡಬಹುದು ಎಂದು ಜಯದೇವದ ಮೂಲಕ ಇಡೀ ದೇಶಕ್ಕೆ ತೋರಿಸಿದ್ದೇವೆ. ಬೇರೆ ಬೇರೆ ರಾಜ್ಯಗಳಲ್ಲಿ ಒಂದು ಸ್ಟೆಂಟ್‌ಗೆ 2ರಿಂದ 3 ಲಕ್ಷ ರೂ.ವರೆಗೆ ಶುಲ್ಕ ಇದೆ. ಹಾಗಾಗಿ ಜಯದೇವ ಆಸ್ಪತ್ರೆಯಿಂದ ಸಾಮಾನ್ಯ ಜನರಿಗೆ, ಬಿಪಿಎಲ್ ಕಾರ್ಡುದಾರರಿಗೆ ಅನುಕೂಲವಾಗಲಿದೆ ಎಂದರು.

> **ಮೈಸೂರಲ್ಲಿ ಅದೇ ಜಾಗದಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ...**
> ಮೈಸೂರಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಿಸುವ ಸಂಬಂಧ ಪ್ರತಿಕ್ರಿಯಿಸಿದ ವೈದ್ಯಕೀಯ ಶಿಕ್ಷಣ ಸಚಿವರು, ಸದರಿ ಆಸ್ಪತ್ರೆ ನಿರ್ಮಿಸಲುದ್ದೇಶಿರುವ ಜಾಗದ ಬಗ್ಗೆ ರೈತರು ವಿರೋಧಿಸಿದ್ದರು. ಸಾರ್ಟ್‌ಔಟ್ ಆಗಿದ್ದು, ಈಗ ನಿರ್ಮಾಣ ಕಾರ್ಯ ಪ್ರಾರಂಭವಾಗಲಿದೆ. ಸಚಿವ ಡಾ.ಯತೀಂದ್ರ ಅವರೊಂದಿಗೆ ಮಾತನಾಡಿದ್ದು, ರೈತರೊಂದಿಗೆ ಮಾತನಾಡಿ ಸಾರ್ಟ್‌ಔಟ್ ಮಾಡಿರುವುದಾಗಿ ಅವರು ತಿಳಿಸಿದ್ದಾರೆ. ಉದ್ದೇಶಿತ ಜಾಗದಲ್ಲಿಯೇ ನಿರ್ಮಾಣ ಮಾಡಲಾಗುತ್ತದೆ ಎಂದು ಹೇಳಿದರು.

ಆಡಳಿತ ವಿಕೇಂದ್ರೀಕೃತಕ್ಕೆ ನಿರ್ಧಾರ: ಇಡೀ ನಮ್ಮ ವ್ಯವಸ್ಥೆ ಕೇಂದ್ರೀಕೃತವಾಗಿದ್ದು, ಬೆಂಗಳೂರು ಆಸ್ಪತ್ರೆ ಮೂಲಕವೇ ಆಡಳಿತ ವ್ಯವಸ್ಥೆ ಇದೆ. ಹಾಗಾಗಿ ಆಡಳಿತ ವಿಕೇಂದ್ರೀಕೃತ ಮಾಡಬೇಕೆಂಬ ನಿಟ್ಟಿನಲ್ಲಿ ನಿರ್ಧಾರ ಮಾಡಿದ್ದೇನೆ. ಈ ಆಸ್ಪತ್ರೆ ಹಾಗೂ ಕಲಬುರಗಿ ಆಸ್ಪತ್ರೆಗೆ ಸ್ವತಂತ್ರ ಕಾರ್ಯ ನಿರ್ವಹಣೆ ಮಾಡುವಂತಹ ಸ್ವಾಯತ್ತತೆ ನೀಡಬೇಕು. ಜೊತೆಗೆ ಹೆಚ್ಚುವರಿ ಅನುದಾನ ನೀಡಬೇಕು. ತಾವೇ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ನೀಡಬೇಕೆಂದು ನಾನು ತೀರ್ಮಾನಿಸಿದ್ದೇನೆ ಎಂದರು.

ಬಹುಶಃ ಹೆಚ್‌ಡಿಕೆಗೆ ಮಾಹಿತಿ ಇರಲಿಕ್ಕಿಲ್ಲ: ಈ ಪ್ರಕರಣ ಸಂಬಂಧ ಹೆಚ್.ಡಿ.ಕುಮಾರಸ್ವಾಮಿ ಟ್ವೀಟ್ ಮಾಡಿದ್ದಾರೆ. ಸರ್ಕಾರದ ನಿರ್ಲಕ್ಷ್ಯ ಎಂದು ಆರೋಪಿಸಿದ್ದಾರೆ ಎಂಬುದಕ್ಕೆ ಪ್ರತಿಕ್ರಿಯಿಸಿ ಬಹುಶಃ ಅವರಿಗೆ ಸಂಪೂರ್ಣ ಮಾಹಿತಿ ಇರಲಿಕ್ಕಿಲ್ಲ ಎಂದು ಹೇಳಿದರು.

ತಪ್ಪು ಮಾಹಿತಿ ವಿರುದ್ಧ ಕ್ರಮ: ಈ ರೀತಿ ಸಾಮಾಜಿಕ ಜಾಲತಾಣದಲ್ಲಿ ತಪ್ಪು ಮಾಹಿತಿ ಕೊಡುವವರ ಬಗ್ಗೆ ಸರ್ಕಾರ ಕ್ರಮ ವಹಿಸಲಿದ್ದೆಯೇ ಎಂಬುದಕ್ಕೆ ಪ್ರತಿಕ್ರಿಯಿಸಿ, ಫೇಕ್ ನ್ಯೂಸ್ ಬಗ್ಗೆ ಯಾವ ರೀತಿ ಕಡಿವಾಣ ಹಾಕಬೇಕೆಂಬ ಬಗ್ಗೆ ಐಟಿಬಿಟಿ ಸಚಿವರು ಪರಿಶೀಲನೆ ಮಾಡುತ್ತಿದ್ದಾರೆ ಎಂದರು.

ಪತ್ರಿಕಾಗೋಷ್ಠಿ ಬಳಿಕ ಸಚಿವರು ಆಸ್ಪತ್ರೆಯಲ್ಲಿ ರೋಗಿಗಳ ಯೋಗಕ್ಷೇಮವನ್ನು ವಿಚಾರಿಸಿದರು. ಶಾಸಕ ಕೆ.ಹರೀಶ್‌ಗೌಡ, ಜಯದೇವ ಸಂಸ್ಥೆ ನಿರ್ದೇಶಕ ಡಾ.ಬಿ.ದಿನೇಶ್, ಮೈಸೂರು ಜಯದೇವ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ, ಆರ್‌ಎಂಒ ಡಾ.ಎಂ.ಪಶುಪತಿ, ಮೈಸೂರು ವೈದ್ಯಕೀಯ ಕಾಲೇಜಿನ ಡೀನ್ ಮತ್ತು ನಿರ್ದೇಶಕಿ ಡಾ.ದಾಕ್ಷಾಯಿಣಿ ಹಾಜರಿದ್ದರು.

ಜಯದೇವ ಆಸ್ಪತ್ರೆ

ಬಳ್ಳಾರಿಯಲ್ಲಿ 2 ತಿಂಗಳಲ್ಲಿ ಉದ್ಘಾಟನೆ ಮಾಡುತ್ತಿದ್ದೇವೆ. ರಾಯಚೂರು, ಕೊಪ್ಪಳದಲ್ಲಿ ಸಹ ಆಸ್ಪತ್ರೆ ಆರಂಭಿಸುತ್ತಿದ್ದೇವೆ. ಚಿಕ್ಕಮಗಳೂರಲ್ಲಿ ಸಹ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ ತೆರೆಲಾಗುತ್ತಿದೆ. ಪ್ರತಿ ಜಿಲ್ಲೆಗೆ ಒಂದು ಸರ್ಕಾರಿ ಮೆಡಿಕಲ್ ಕಾಲೇಜು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕ್ಯಾನ್ಸರ್ ಆಸ್ಪತ್ರೆ ಮಾಡಬೇ ಕೆಂಬ ಕನಸು ಹೊಂದಿದ್ದು, ಅದರಲ್ಲಿ ಶೇ.50 ರಷ್ಟು ಗುರಿ ಸಾಧಿಸಲಾಗಿದೆ. ಈ ಎರಡು ವರ್ಷಗಳ ಸರ್ಕಾರದ ಅವಧಿಯಲ್ಲಿ ಉಳಿದ ಗುರಿ ತಲುಪುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಕೆಲಸ ಮಾಡದೇ ಬಿಜೆಪಿಯವರಂತೆ ಹೇಳಿಕೊಳ್ಳುವುದಿಲ್ಲ. ನಾವು ಹೇಳದೇ ಕೆಲಸ ಮಾಡಿ ತೋರಿಸುತ್ತೇವೆ. ಕೆಲಸ ಮಾಡುವ ತನಕ ಹೇಳುವುದಿಲ್ಲ ಎಂದು ಹೇಳಿದರು. ನಾಳೆ ಪರಿಷತ್ ಚುನಾವಣೆ ಹೇಗಿರುತ್ತದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಗೆಲ್ಲುತ್ತೇವೆ ಎಂಬ ವಿಶ್ವಾಸವಿದೆ ಎಂದರು.

ಐವರು ಅಬಕಾರಿ ಅಧಿಕಾರಿಗಳ ಅಮಾನತು

ಪ್ರಕಾಶ್(24) ಸಜೀವ ದಹನವಾಗಿದ್ದರು. ಅಲ್ಲದೆ ಹಲವರಿಗೆ ಗಾಯಗಳಾಗಿದ್ದವು. ಘಟನೆ ನಡೆದ ಮರುದಿನ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಅಗ್ನಿ ಅವಘಡ ಪ್ರಕರಣದಲ್ಲಿ ಕರ್ತವ್ಯ ಲೋಪ ಹಾಗೂ ನಿರ್ಲಕ್ಷ್ಯ ವಹಿಸಿದ ಮೈಸೂರು ಜಿಲ್ಲೆಯ ಅಬಕಾರಿ ಡಿಸಿಯನ್ನು ಅಮಾನತು ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದಾಗಿ ತಿಳಿಸಿದ್ದರು. ಆದರೆ, ಅಬಕಾರಿ ಡಿಸಿಯನ್ನು ಹೊರತುಪಡಿಸಿ, ಮೈಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕ ಸೇರಿದಂತೆ ಐದು ಮಂದಿ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಅಮಾನತುಗೊಳಿಸಲಾಗಿದೆ.

ಲೈಸೆನ್ಸ್ ನೀಡಿರಲಿಲ್ಲ: 'ಮಾರಾ' ರೂಫ್ ಟಾಪ್ ರೆಸ್ಟೋರೆಂಟ್‌ಗೆ ಅಬಕಾರಿ ಇಲಾಖೆಯಿಂದ ಯಾವುದೇ ಅನುಮತಿ ಪಡೆದಿಲ್ಲ. ಮಾಲೀಕರು ಅಬಕಾರಿ ಇಲಾಖೆಯಿಂದ ಲೈಸೆನ್ಸ್ ಪಡೆದಿದ್ದು, ಮದ್ಯ ಮಾರಾಟ ಮತ್ತು ಸೇವನೆಗೆ ಕಟ್ಟಡದ ಎರಡು ಅಂತಸ್ತಿಗೆ ಮಾತ್ರ ಅನುಮತಿ ನೀಡಲಾಗಿದ್ದು, ರೂಫ್ ಟಾಪ್ ರೆಸ್ಟೋರೆಂಟ್‌ನಲ್ಲಿ ಮದ್ಯ ಮಾರಾಟ ಮತ್ತು ಪೂರೈಕೆಗೆ ಅವಕಾಶವಿರಲಿಲ್ಲ. ಕೆಲ ದಿನಗಳ ಹಿಂದೆ ದಾಳಿ ನಡೆಸಿದಾಗ ರೆಸ್ಟೋರೆಂಟ್‌ನಲ್ಲಿ ಮದ್ಯ ಮಾರಾಟ ಮಾಡಿದ ಹಿನ್ನಲೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು ಎಂದು ಅಬಕಾರಿ ಡಿಸಿ (ಮೈಸೂರು ನಗರ) ನಾಗರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಇಂದು ಪರಿಷತ್‌ನ 7 ಸ್ಥಾನಕ್ಕೆ ಚುನಾವಣೆ

ಬೆಂಗಳೂರು, ಜೂ.17– ಕರ್ನಾಟಕ ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ನಾಳೆ (ಜೂ.18) ಚುನಾವಣೆ ನಡೆಯಲಿದೆ. ಆದರೆ ಪರಿಷತ್ ಕಣದಲ್ಲಿ 8ನೇ ಅಭ್ಯರ್ಥಿ ಅಖಾಡಕ್ಕಿಳಿಸಿರುವುದು ಮೇಲ್ಮನೆ ಚುನಾವಣೆ ರಂಗೇರಿದೆ.

ವಿಧಾನಸೌಧದ ಮೊದಲ ಮಹಡಿಯಲ್ಲಿರುವ ಸಮಿತಿ ಸಭೆ ಕೊಠಡಿಯಲ್ಲಿ ಗುರುವಾರ ಬೆಳಗ್ಗೆ 9 ರಿಂದ ಸಂಜೆ 5ರವರೆಗೆ ಮತದಾನ ನಡೆಯಲಿದೆ.

ನಾಳೆ ನಡೆಯುವ ಚುನಾವಣೆ ಹಿನ್ನೆಲೆಯಲ್ಲಿ ಸಕಲ ಸಿದ್ದತೆ ಕೈಗೊಳ್ಳಲಾಗಿದ್ದು, ಸಮಿತಿ ಸಭೆ ಒಳಗೆ ಹಾಗೂ ಹೊರಗೆ ಸಿಸಿಟಿವಿ ಅಳವಡಿಸಲಾಗಿದೆ. ಶಾಸಕರ ಗೌಪ್ಯ ಮತದಾನಕ್ಕೆ ಎರಡು ಮತಗಟ್ಟೆಗಳನ್ನ ಸ್ಥಾಪಿಸಲಾಗಿದೆ. ಸುಗಮ ಮತದಾನಕ್ಕೆ ಅಗತ್ಯ ತಯಾರಿಗಳನ್ನು ಮಾಡಿಕೊಳ್ಳಲಾಗಿದೆ. ಭದ್ರತೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರ ನಿಯೋಜಿಸಲಾಗಿದೆ

ಮತ್ತೊಂದೆಡೆ ವಂಡರ್ ಲಾ ರೆಸಾರ್ಟ್‌ನಲ್ಲಿ ಬೀಡುಬಿಟ್ಟಿರುವ ಕೈ ಶಾಸಕರಿಗೆ ಸಿಎಂ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ ಪರಿಷತ್ ಮತದಾನದ ಅಣಕು ಪ್ರಕ್ರಿಯೆ ನಡೆಸಲಾಯಿತು. ಮತ ಅಸಿಂಧುವಾಗದಂತೆ ಯಾವ ರೀತಿ ಮತ ಚಲಾಯಿಸಬೇಕು ಎಂಬುದರ ಬಗ್ಗೆ ತರಬೇತಿ ನೀಡಲಾಯಿತು. ಓರ್ವ ಅಭ್ಯರ್ಥಿ ಗೆಲುವಿಗೆ 28 ಮತಗಳು ಅಗತ್ಯವಿದೆ. ಕಣಕ್ಕೆ ಇಳಿದಿರುವ 5 ಕೈ ಅಭ್ಯರ್ಥಿಗಳಿಗೆ 140 ಮತಗಳ ಅಗತ್ಯವಿದೆ. ಕಾಂಗ್ರೆಸ್ ಬಳಿ ಇರುವುದು 135 ಮಾತ್ರ. ಬಿಜೆಪಿಯಿಂದ ಉಚ್ಚಾಟಿತಗೊಂಡಿರುವ ಸೋಮಶೇಖರ್, ಶಿವರಾಮ್ ಹೆಬ್ಬಾರ್, ಪಕ್ಷೇತರ ಶಾಸಕ ಇಬ್ಬರು ಹಾಗೂ ಸರ್ವೋದಯ ಪಕ್ಷದ ಶಾಸಕರು ಕಾಂಗ್ರೆಸ್‌ಗೆ ಬೆಂಬಲಿಸಿದರೆ 140 ಮತಗಳು ಆಗಲಿವೆ. ಒಂದು ಮತವು ಅಸಿಂಧುವಾಗದಂತೆ ನೋಡಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಶಾಸಕರಿಗೆ ಮತದಾನದ ತರಬೇತಿ ನೀಡಲಾಗುತ್ತಿದೆ.

ಒಟ್ಟು ಶಾಸಕರ ಬಲಾಬಲಾ	– 222
ಕಾಂಗ್ರೆಸ್	– 135
ಬಿಜೆಪಿ	– 62
ಜೆಡಿಎಸ್	– 18
ಪಕ್ಷೇತರರು	– 2
ಸರ್ವೋದಯ ಪಕ್ಷ	– 1
ಬಿಜೆಪಿ ಉಚ್ಚಾಟಿತರು	– 3
ಒಬ್ಬ ಅಭ್ಯರ್ಥಿಯ ಗೆಲುವಿಗೆ ಬೇಕಿರುವ ಮತಗಳು	28

62 ಶಾಸಕರ ಬಲ ಹೊಂದಿರುವ ಬಿಜೆಪಿಯಿಂದ ಕಣದಲ್ಲಿರುವ 2 ಅಭ್ಯರ್ಥಿಗಳಿಗೆ ತಲಾ 28ರಂತೆ 56 ಮತಗಳು ಅಗತ್ಯವಿದೆ. ಹೀಗಾಗಿ 6 ಮತಗಳು ಹೆಚ್ಚುವರಿಯಾಗಿ ಉಳಿಯ ಲಿವೆ. ಆದರೆ, ಓರ್ವ ಅಭ್ಯರ್ಥಿಯನ್ನು ಅಖಾಡಕ್ಕಿಳಿಸಿರುವ ಜೆಡಿಎಸ್ ಬಳಿ ಇರೋದು ಕೇವಲ 18 ಶಾಸಕರು. ಹೀಗಿದ್ದರೂ ಬಿಜೆಪಿಯ 6 ಹೆಚ್ಚುವರಿ ಮತ, ಜನಾರ್ಧನ ರೆಡ್ಡಿ, ಬಸನಗೌಡ ಪಾಟೀಲ್ ಯತ್ನಾಳ್ ಬೆಂಬಲ ಸೇರಿದರೆ ಒಟ್ಟು 26 ಮತಗಳ ಗಡಿ ತಲುಪಲಿದೆ. ಆದರೆ, ಗೆಲುವಿಗೆ 28 ಮತಗಳು ಬೇಕಿರುವ ಹಿನ್ನೆಲೆ 2 ಮತಗಳ ಕೊರತೆ ಜೆಡಿಎಸ್‌ಗೆ ಆಗಲಿದೆ.

ಕಣದಲ್ಲಿರುವ ಅಭ್ಯರ್ಥಿಗಳು: ಕಾಂಗ್ರೆಸ್‌ನಿಂದ ಐವರು ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಕೆಪಿಸಿಸಿ ಅಧ್ಯಕ್ಷರಾಗಿರುವ ಬಿ.ಕೆ.ಹರಿಪ್ರಸಾದ್, ತಿಪ್ಪಣ್ಣಪ್ಪ ಕಮಕನೂರ, ಬಿ.ಎಸ್.ಶಿವಣ್ಣ, ಪಿ.ವಿ. ಮೋಹನ್ ಐದನೇ ಅಭ್ಯರ್ಥಿಯಾಗಿ ವಿನಯ್ ಕಾರ್ತಿಕ್ ಸ್ಪರ್ಧೆಯಲ್ಲಿದ್ದಾರೆ.

ಬಿಜೆಪಿಯಿಂದ ಲಿಂಗರಾಜ್ ಪಾಟೀಲ್ ಹಾಗೂ ಮೈಸೂರಿನ ರಘು ಕೌಟಿಲ್ಯ ಇವರ ಜೊತೆಗೆ ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಕೂಟದ ಅಭ್ಯರ್ಥಿಯಾಗಿ ಗೋವಿಂದ ರಾಜು ಅವರು ಕಣದಲ್ಲಿದ್ದಾರೆ.

ಮೋದಿ ನೋಡೋಕೆ ಒಳ್ಳೇ ವ್ಯಕ್ತಿ, ಆದ್ರೆ ಕಿಲ್ಲರ್

ಮೋದಿ ಜಿ7 ರಾಷ್ಟ್ರಗಳು ಮತ್ತು ಪಾಲುದಾರ ರಾಷ್ಟ್ರಗಳ ನಾಯಕರೊಂದಿಗೆ ಔಟ್ರೀಚ್ ಅಧಿವೇಶನದಲ್ಲಿ ಭಾಗವಹಿಸಿದ್ದರು.

ಮೋದಿ ಶಾಂತ, ಕೂಲ್: ಮೋದಿ ಜೊತೆ ಟ್ರಂಪ್ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದು, ವ್ಯಾಪಾರ ಒಪ್ಪಂದಗಳಿಗೆ ಸಂಬಂಧಿಸಿದಂತೆ ಒಳ್ಳೆಯ ರೀತಿಯಲ್ಲಿ ಚರ್ಚೆಗಳಾಗಿವೆ ಎಂದು ಟ್ರಂಪ್ ಹೇಳಿದ್ದಾರೆ. ಇದೇ ವೇಳೆ ಲಘು ಹೇಳಿಕೆಯಲ್ಲಿ, ಟ್ರಂಪ್ ತಮ್ಮ ವ್ಯಕ್ತಿತ್ವವನ್ನು ಪ್ರಧಾನಿಯವರ ವ್ಯಕ್ತಿತ್ವದೊಂದಿಗೆ ಹೋಲಿಸುತ್ತಾ, ಪ್ರಧಾನಿ ಮೋದಿ ನನಗಿಂತ ಭಿನ್ನ, ಅವರು ನೋಡಲು ಕೂಲ್ ಆದರೆ ಕಿಲ್ಲರ್, ನಾನು ಹಾಗೆ ಅಲ್ಲ. ಅವರನ್ನು ನೋಡಿ ಎಂದು ಹೇಳಿದರು. ಟ್ರಂಪ್ ಪದೇ ಪದೆ ಪ್ರಧಾನಿ ಮೋದಿ ಬಗ್ಗೆ ಪ್ರೀತಿಯಿಂದ ಮಾತನಾಡಿದ್ದಾರೆ, ಆಗಾಗ್ಗೆ ಅವರ ನಾಯಕತ್ವ ಶೈಲಿ ಮತ್ತು ರಾಜಕೀಯ ದೀರ್ಘಾವಧಿಯನ್ನು ಹೊಗಳಿದ್ದಾರೆ. ಈ ತಿಂಗಳ ಆರಂಭದಲ್ಲಿ, ಭಾರತದ ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ ಪ್ರಧಾನಿಯಾಗಿ ನರೇಂದ್ರ ಮೋದಿ ಅವರನ್ನು ಟ್ರಂಪ್ ಅಭಿನಂದಿಸಿದ್ದರು. ಅವರನ್ನು ಬಲವಾದ, ಆರೋಗ್ಯಕರ ಮತ್ತು ಬುದ್ಧಿವಂತ ವ್ಯಕ್ತಿ ಎಂದು ಬಣ್ಣಿಸಿದರು ಮತ್ತು ಅವರು ಮುಂದಿನ ವರ್ಷಗಳಲ್ಲಿ ದೇಶವನ್ನು ಯಶಸ್ವಿಯಾಗಿ ಮುನ್ನಡೆಸುತ್ತಾರೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಮೈಸೂರು ಮಿತ್ರ
ಗುರುವಾರ 18 ಜೂನ್ 2026

ಬಿಡದಿ: ಪೋಸ್ಟರ್ ಅಪಪ್ರಚಾರಕ್ಕೆ ಹೆಚ್.ಡಿ.ಕುಮಾರಸ್ವಾಮಿ ಕಿಡಿ


- ಸಿಎಂ ಆದ ಮೇಲೆ ಬ್ಲೂ ಫಿಲ್ಮ್ ಮಾಡಿಸುವುದು; ಪೋಸ್ಟರ್ ಅಂಟಿಸುವುದು ಬಿಡುತ್ತಾರೆ ಅಂದುಕೊಂಡಿದ್ದೆ
- ಸತ್ತವರ ಹೆಬ್ಬೆಟ್ಟು ಒತ್ತಿಸಿಕೊಂಡು ಭೂಮಿ ಲಪಟಾಯಿಸಿದ ವ್ಯಕ್ತಿ; ಬೆನ್ನಿಗಾನಹಳ್ಳಿ ಡಿನೋಟಿಫಿಕೇಷನ್ ಪ್ರಕರಣ ನೆನಪಿಸಿದ ಹೆಚ್‌ಡಿಕೆ
- ಪೋಸ್ಟರ್ ಅಂಟಿಸುವುದು ವಿಕೃತಿ; ಹಿಂದಿನಿಂದಲೂ ಇವರದು ಇದೇ ಕೃತ್ಯ

ಬೆಂಗಳೂರು: ನಾವು ಬಿಡದಿ ರೈತರ ಪರ ಹೋರಾಟ ನಡೆಸುತ್ತಿದ್ದರೆ, ಇನ್ನೊಂದೆಡೆ ಕಾಂಗ್ರೆಸ್ ಪೋಸ್ಟರ್‌ಗಳನ್ನು ಅಂಟಿಸಿ ತಮ್ಮ ಕುಟುಂಬದ ವಿರುದ್ಧ ಅಪಪ್ರಚಾರ ನಡೆಸುತ್ತಿರುವುದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ರಾಜ್ಯದ ಮುಖ್ಯಮಂತ್ರಿಯಾದರೂ ಡಿ.ಕೆ.ಶಿವಕುಮಾರ್ ತನ್ನ ಹಳೆಯ ಚಾಳಿ ಬಿಟ್ಟಿಲ್ಲ ಎಂದರು.

ಬುಧವಾರ ಬೆಳಗ್ಗೆ ಬೆಂಗಳೂರಿನ ತಮ್ಮ ನಿವಾಸದ ಬಳಿ ಮಾಧ್ಯಮಗಳು ಕೇಳಿದ ಪ್ರಶ್ನೆಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಕೇಂದ್ರ ಸಚಿವರು; ಬಿಡದಿ ಭಾಗದಲ್ಲಿ ತಮ್ಮ ಮತ್ತು ತಮ್ಮ ಕುಟುಂಬದ ವಿರುದ್ಧ ಪೋಸ್ಟರ್ ಅಂಟಿಸಿರುವ ಮಾಹಿತಿ ನನಗೂ ಬಂದಿದೆ. ರಾಜ್ಯದ ಸಿಎಂ ಆದ ಮೇಲಾದರೂ ಬ್ಲೂ ಫಿಲ್ಮ್ ಮಾಡಿಸುವುದು, ಪೋಸ್ಟರ್ ಅಂಟಿಸುವುದು ಬಿಡುತ್ತಾರೆ ಅಂದುಕೊಂಡಿದ್ದೆ. ಆ ಚಾಳಿ ಡಿ.ಕೆ.ಶಿವಕುಮಾರ್‌ಗೆ ಇನ್ನೂ ಹೋಗಿಲ್ಲ. ವೈಯಕ್ತಿಕವಾಗಿ ಅಪಪ್ರಚಾರ ಮಾಡಿದರೆ ನಾನು ಕುಗ್ಗುವ ಮನುಷ್ಯ ಅಲ್ಲ. ನನ್ನ ಹೋರಾಟ ಇನ್ನೂ ತೀವ್ರವಾಗುತ್ತದೆ ಎಂದು ಅವರು ಕಿಡಿಕಾರಿದರು.

ಕೈಲಾಗದವನ ಕೊನೆಯ ಅಸ್ತ್ರವೇ ಅಪಪ್ರಚಾರ. ಅದನ್ನೇ ಡಿ.ಕೆ.ಶಿವಕುಮಾರ್ ಮಾಡುತ್ತಿದ್ದಾರೆ. ಪೋಸ್ಟರ್ ಅಂಟಿಸಿ ಅಪಪ್ರಚಾರ ಮಾಡುತ್ತಿದ್ದಾರೆ. ನನ್ನ ಪತ್ನಿಯ ಚಿತ್ರವನ್ನು ಪೋಸ್ಟರ್‌ನಲ್ಲಿ ಹಾಕಿದ್ದಾರೆ. ಹಾಗೆ ನೋಡಿದರೆ ಈ ವ್ಯಕ್ತಿಯ ಬಗ್ಗೆ ನಾವು ಎಷ್ಟು ಪೋಸ್ಟರ್‌ಗಳನ್ನು ಅಂಟಿಸಬೇಕು ಎಂದು ಅವರು ಪ್ರಶ್ನಿಸಿದರು.

100 ಎಕರೆ ಅಂತ ಪೋಸ್ಟರ್‌ನಲ್ಲಿ ಬರೆದು ನನ್ನ ಮತ್ತು ನನ್ನ ಪುತ್ರ ನಿಖಿಲ್ ಫೋಟೋಗಳನ್ನು ಹಾಕಿದ್ದಾರೆ. ನನ್ನದೂ ಅಂತ ಭೂಮಿ ಇರುವುದೇ 46 ಎಕರೆ. 40 ವರ್ಷಗಳ ಹಿಂದೆ ಕಷ್ಟಪಟ್ಟು ಖರೀದಿ ಮಾಡಿರುವ ಜಮೀನು ಅದು. ಅದು ಬಿಟ್ಟು ನನ್ನ ಹೆಸರಿನಲ್ಲಿ ಯಾವ ಜಮೀನು ಇಲ್ಲ. ನೂರು ಎಕರೆ ಎಲ್ಲಿದೆ ಎಂದು ಅವರು ತೋರಿಸಲಿ. ಅನಿತಾ ಕುಮಾರಸ್ವಾಮಿ ಅವರು 36–


ಹೆಚ್.ಡಿ.ಕುಮಾರಸ್ವಾಮಿ

37 ಎಕರೆ ಭೂಮಿ ಖರೀದಿಸಿದ್ದಾರೆ. ಅದಕ್ಕೆ ಇನ್ನೂ ಯಾವನೋ ಒಬ್ಬನ ಫೋಟೋ ಹಾಕಿ ಅಂಟಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಸತ್ತವರ ಹೆಬ್ಬೆಟ್ಟು ಒತ್ತಿಸಿಕೊಂಡು ಭೂಮಿ ಲಪಟಾಯಿಸಿದ ವ್ಯಕ್ತಿ: ನಿಮಗೆ ಬೆನ್ನಿಗಾನಹಳ್ಳಿ ಡಿನೋಟಿಫಿಕೇಷನ್ ಪ್ರಕರಣ ಗೊತ್ತಿರಬಹುದು. ಸತ್ತವರ ಹೆಬ್ಬೆಟ್ಟು ಒತ್ತಿಸಿಕೊಂಡು ಭೂಮಿ ಲೂಟಿ ಹೊಡೆದ ಕೆಟ್ಟ ಚರಿತ್ರೆ ಈ ವ್ಯಕ್ತಿಯದು. ಜನಕ್ಕೆ ಗೊತ್ತಿದೆ, ನಾನು ಏನು, ಈ ವ್ಯಕ್ತಿಯ ಯೋಗ್ಯತೆ ಏನು ಎಂದು. ಮುಖ್ಯಮಂತ್ರಿ ಆಗಿರುವ ವ್ಯಕ್ತಿಗೆ ಒಂದು ಸ್ಟ್ಯಾಂಡರ್ಡ್ ಬೇಡವಾ. ರಾಜ್ಯ ಯಾವ ದಿಕ್ಕಿಗೆ ಹೋಗುತ್ತದೆ ಅನ್ನುವುದನ್ನು ರಾಜ್ಯದ ಜನತೆಯೇ ಆಲೋಚನೆ ಮಾಡಬೇಕು ಎಂದು ಹೇಳಿದರು.

ನನ್ನ ಬದುಕು ತೆರೆದ ಪುಸ್ತಕ: ನನ್ನ ಬದುಕು ತೆರದ ಪುಸ್ತಕ. ನನ್ನ ಕಾರ್ಯಕರ್ತರಿಗೆ, ಜನತೆಗೆ ಗೊತ್ತು. ಇಂತಹ ಬೆದರಿಕೆ, ಅಪಪ್ರಚಾರಕ್ಕೆ ಹೆದರುವ ಪ್ರಶ್ನೆ ಇಲ್ಲ. ಜನರಿಗಾಗಿ, ರೈತರಿಗಾಗಿ ನಮ್ಮ ಪಕ್ಷದ ಹೋರಾಟ ಮುಂದುವರಿಯುತ್ತದೆ. ಬಿಡದಿ ಟೌನ್‌ಶಿಪ್ ನನ್ನ ಕಾಲದಲ್ಲಿ ಮಾಡಲು ಹೊರಟಿದ್ದು ನಿಜ. ಜನ ವಿರೋಧ ಮಾಡಿದರು. ಅವರಿಗೇ ಬೇಡದ ಯೋಜನೆಯನ್ನು ಅಲ್ಲಿಗೇ ಕೈಬಿಟ್ಟೆ. ನಾನು ಮಾಡಲೇಬೇಕು ಅಂತಿದ್ದರೆ ಎರಡನೇ ಬಾರಿ ಮುಖ್ಯಮಂತ್ರಿ ಆಗಿದ್ದಾಗ ಮಾಡುತ್ತಿದ್ದೆ. ಅಂತಹ ಕೆಲಸ ನಾನು ಮಾಡಲಿಲ್ಲ. ನನ್ನ ಹೆಸರು ಹೇಳಿಕೊಂಡು ಭೂಮಿ ಲಪಟಾಯಿಸಲು ಹೊರಟಿದ್ದಾರೆ. ಉದ್ದೇಶ ಒಳ್ಳೆಯದು ಇದ್ದರೆ ಬೆಂಬಲ ಕೊಡೋಣ. ಇವರು ಯಾವುದೇ ಕೆಲಸ ಕೈಗೆತ್ತಿಕೊಂಡರೂ ಎಷ್ಟು ದುಡ್ಡು ಹೊಡೆಯಬಹುದು ಎಂದು ನೋಡುತ್ತಾರೆ. ಇಂತಹ ವ್ಯಕ್ತಿ ಬಗ್ಗೆ ನಾನು ಎಷ್ಟು ಸಾರಿ ಮಾತಾಡಲಿ ಎಂದು ಡಿಕೆಶಿ ವಿರುದ್ಧ ಕೇಂದ್ರ ಸಚಿವರು ಹರಿಹಾಯ್ದರು.


ಇದು ಡಿಕೆಶಿ ವಿಕೃತಿ


ಆರಂಭದಿಂದಲೂ ಇವರ ಹಿನ್ನೆಲೆಯೇ ಇದೇ ಆಗಿದೆ. ಈ ಚಾಳಿಯಲ್ಲಿ ಬಂದ ವ್ಯಕ್ತಿ ಮುಖ್ಯಮಂತ್ರಿ ಆದ ಮೇಲೂ ಸಿಎಂ ಕುರ್ಚಿಗೆ ಗೌರವ ಕೊಡೋದು ಬೇಡವಾ. ಪೋಸ್ಟರ್ ಹಾಕಿಕೊಂಡು ಅಪಪ್ರಚಾರ ಮಾಡ್ತಾ ಇದ್ದಾರೆ. ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಬಿ.ವೈ.ವಿಜಯೇಂದ್ರ ಅವರ ವಿರುದ್ಧವೂ ಪೋಸ್ಟರ್ ಹಾಕಿಸಿದ್ದಾರೆ. ಆಯಿತು, ನಾವು ತಪ್ಪು ಮಾಡಿದ್ದರೆ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳಲು ಹೇಳಿ. ಸುಮ್ಮನೆ ಯಾಕೆ ಪೋಸ್ಟರ್ ಹಾಕಿದ್ದೀರಾ. ಇಲ್ಲಿವರೆಗೂ ಕಾಂಗ್ರೆಸ್ ಪಕ್ಷದ ಶಾಸಕರು, ಮಂತ್ರಿಗಳದ್ದು ನಡೆದು ಹೋಯಿತು. ನನ್ನನ್ನು ಹನಿಟ್ರ್ಯಾಪ್ ಮಾಡಿಸಲು ಸಂಚು ರೂಪಿಸಿದ್ದರು ಎಂದು ಸಚಿವರೊಬ್ಬರೇ ಆರೋಪಿಸಿದ್ದರು. ವಿಧಾನ ಸಭೆ ಕಲಾಪದಲ್ಲಿ ನಡೆದಿದ್ದನ್ನು ಇಡೀ ರಾಜ್ಯವೇ ನೋಡಿತು. ಕೊನೆಗೆ ಅವರ ಬಾಯಿ ಮುಚ್ಚಿಸಿದರು. ಸತ್ಯ ಹೇಳುತ್ತೇನೆ ಎಂದ ಅವರು ಕೊನೆಗೆ ಬಾಯಿ ತೆಗೆಯಲಿಲ್ಲ. ಹಾಳಾಗಿ ಹೋಗಲಿ, ಮುಖ್ಯಮಂತ್ರಿ ಆಗಿದ್ದಾರೆ, ಮುಂದೆ ಎಲ್ಲವೂ ನಿಲ್ಲುತ್ತದೆ ಎಂದು ಕೊಂಡಿದ್ದೆ. ಇವರ ಚಾಳಿ ಬಿಡುವ ಹಾಗೆ ಕಾಣುತ್ತಿಲ್ಲ ಎಂದು ಕುಮಾರಸ್ವಾಮಿ ಟೀಕಾಪ್ರಹಾರ ನಡೆಸಿದರು.

ರಾಜ್ಯದ ಮಾವು ಬೆಳೆಗಾರರ ಸಂಕಷ್ಟದ ಬಗ್ಗೆ ಕೇಂದ್ರ ಕೃಷಿ ಸಚಿವರಿಗೆ ಪತ್ರ ಬರೆದ ಹೆಚ್‌ಡಿಕೆ

- ಬೆಲೆ ಕುಸಿತದಿಂದ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ರಾಜ್ಯದ ವಿವಿಧ ಜಿಲ್ಲೆಗಳ ಮಾವು ಬೆಳೆಗಾರರ ಸಂಕಷ್ಟ
- ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆಯಡಿ ರೈತರಿಗೆ ಬೆಂಬಲ ಬೆಲೆ ನೀಡಲು ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಹೆಚ್‌ಡಿಕೆ ಮನವಿ

ಬೆಂಗಳೂರು: ಬೆಲೆ ಕುಸಿತದಿಂದ ಕಂಗೆಟ್ಟಿರುವ ರಾಜ್ಯದ ಮಾವು ಬೆಳೆಗಾರರ ನೆರವಿಗೆ ಧಾವಿಸುವಂತೆ ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಲ್ಲಿ ಮನವಿ ಮಾಡಿದ್ದಾರೆ.





ಈ ಬಗ್ಗೆ ಕೃಷಿ ಸಚಿವರಿಗೆ ಪತ್ರವನ್ನು ಬರೆದು, ರೈತರ ಸಂಕಷ್ಟದ ಬಗ್ಗೆ ಚರ್ಚೆ ನಡೆಸಿದ ಸಚಿವ ಕುಮಾರಸ್ವಾಮಿ, 2026–27ರ ಋತುವಿನಲ್ಲಿ ರೈತರು ಎದುರಿಸುತ್ತಿರುವ ಬೆಲೆ ಕುಸಿತ ಸಂಕಷ್ಟವನ್ನು ತಗ್ಗಿಸಲು ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆ (ಎಂಐಎಸ್) ಮೂಲಕ ನೆರವಾಗಬೇಕು ಹಾಗೂ ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್) ಅಡಿಯಲ್ಲಿ ಬೆಂಬಲ ಬೆಲೆ ನೀಡಬೇಕು ಎಂದು ಕೇಂದ್ರ ಕೃಷಿ ಸಚಿವರನ್ನು ವಿನಂತಿಸಿದ್ದಾರೆ.

ಮಾರುಕಟ್ಟೆ ಬೆಲೆ ಕುಸಿತ ಮತ್ತು ಹೆಚ್ಚುತ್ತಿರುವ ಕೃಷಿ ವೆಚ್ಚಗಳಿಂದಾಗಿ ಮಾವು ಬೆಳೆಗಾರರು ಎದುರಿಸುತ್ತಿರುವ ಸವಾಲುಗಳನ್ನು ತಮ್ಮ ಪತ್ರದಲ್ಲಿ ಕೃಷಿ ಸಚಿವರ ಗಮನಕ್ಕೆ ತಂದಿರುವ ಸಚಿವ ಕುಮಾರಸ್ವಾಮಿ ಅವರು; ರೈತರು ಮತ್ತು ತೋಟಗಾರಿಕೆ ವಲಯದ ಹಿತಾಸಕ್ತಿಯ ದೃಷ್ಟಿಯಿಂದ ಈ ವಿಷಯವನ್ನು ಸಹಾನುಭೂತಿಯಿಂದ ಪರಿಗಣಿಸುವಂತೆ ಕೋರಿದ್ದಾರೆ.

ಕರ್ನಾಟಕವು ಅತೀ ಹೆಚ್ಚು ಮಾವು ಬೆಳೆಯುವ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ಸುಮಾರು 1.45 ಲಕ್ಷ ಹೆಕ್ಟೇರ್‌ಗಳಲ್ಲಿ ಮಾವು ಕೃಷಿ ಮಾಡಲಾಗುತ್ತಿದ್ದು, ಪ್ರಸಕ್ತ ಋತುವಿನಲ್ಲಿ ಸುಮಾರು 10 ಲಕ್ಷ ಮೆಟ್ರಿಕ್ ಟನ್ ಮಾವು ಬೆಳೆಯಲಾಗಿದೆ. ಆದರೆ, ಬೆಲೆ ಕುಸಿತ ಹಾಗೂ ಪ್ರತಿಕೂಲಕರ ಹವಾಮಾನದಿಂದ ರೈತರು ಸಂಕಷ್ಟಕ್ಕೆ ತುತ್ತಾಗಿದ್ದಾರೆ ಎಂದು ಸಚಿವರು ಕೃಷಿ ಸಚಿವರ ಗಮನ ಸೆಳೆದಿದ್ದಾರೆ.

ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ಧಾರವಾಡ, ತುಮಕೂರು ಮತ್ತು ಹಾವೇರಿ ಯಂತಹ ಜಿಲ್ಲೆಗಳಲ್ಲಿ ಸಾವಿರಾರು ರೈತ ಕುಟುಂಬಗಳು ಮಾವು ಕೃಷಿಯನ್ನು ಅವಲಂಬಿಸಿವೆ. ಇದು ಅತ್ಯಂತ ಪ್ರಮುಖ ವಾಣಿಜ್ಯ ತೋಟಗಾರಿಕಾ ಬೆಳೆಯಾಗಿದೆ. ಮಾರುಕಟ್ಟೆಯ ಏರಿಳಿತಗಳು ಮತ್ತು ಅತಿಯಾದ ಪೂರೈಕೆ ಪರಿಸ್ಥಿತಿಗಳಿಂದಾಗಿ ಅನೇಕ ಬೆಳೆಗಾರರು ತಮ್ಮ ಉತ್ಪನ್ನಗಳನ್ನು ಲಾಭದಾಯಕ ಮಟ್ಟಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದು ತಮ್ಮ ಪತ್ರದಲ್ಲಿ ಕೇಂದ್ರ ಸಚಿವರು ಉಲ್ಲೇಖಿಸಿದ್ದಾರೆ.

ಕರ್ನಾಟಕ ಕೃಷಿ ಬೆಲೆ ಆಯೋಗದ ಅಂದಾಜಿನ ಪ್ರಕಾರ ಮಾವಿನ ಕೃಷಿಯ (ಅ–3) ವೆಚ್ಚವನ್ನು ಕ್ವಿಂಟಾಲ್‌ಗೆ 3,951 ಎಂದು ಅಂದಾಜಿಸಲಾಗಿದೆ. ಆದರೆ ಚಾಲ್ತಿಯಲ್ಲಿರುವ ಮಾರುಕಟ್ಟೆ ಬೆಲೆಗಳು ಈ ಮಟ್ಟಕ್ಕಿಂತ ಗಣನೀಯವಾಗಿ ಕಡಿಮೆ ಇರುವುದರಿಂದ ನೀರಾವರಿ, ಕಾರ್ಮಿಕರ ವೆಚ್ಚ ಮತ್ತು ಕೊಯ್ಲು ಕಾರ್ಯಾಚರಣೆಗಳಲ್ಲಿ ಗಣನೀಯ ವೆಚ್ಚದ ಹೊರತಾಗಿಯೂ ರೈತರು ದೊಡ್ಡ ಪ್ರಮಾಣದಲ್ಲಿ ಆರ್ಥಿಕ ನಷ್ಟಕ್ಕೆ ಒಳಗಾಗಿದ್ದಾರೆ. ಪಿಡಿಪಿಎಸ್ ಕಾರ್ಯವಿಧಾನದ ಮೂಲಕ ಬೆಂಬಲ ಬೆಲೆ ನೀಡುವುದರಿಂದ ಮಾರುಕಟ್ಟೆ ಬೆಲೆಗಳು ಮತ್ತು ಲಾಭದಾಯಕ ಆದಾಯದ ನಡುವಿನ ಅಂತರವನ್ನು ಕಡಿಮೆ ಮಾಡಲು ಸಹಾಯವಾಗುತ್ತದೆ ಮತ್ತು ಮಾವು ಬೆಳೆಗಾರರಿಗೆ ಆದಾಯ ರಕ್ಷಣೆಯನ್ನು ಖಚಿತಪಡಿಸುತ್ತದೆ ಎಂದು ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ವಿದ್ಯುತ್ ವಿತರಣೆ ಪರವಾನಗಿ ಕೋರಿ ಟಾಟಾ ಕಂಪನಿ ಸಲ್ಲಿಸಿರುವ ಅರ್ಜಿ ತಿರಸ್ಕಾರಕ್ಕೆ ಆಗ್ರಹಿಸಿ ಇಂದು ರಾಜ್ಯಾದ್ಯಂತ ರೈತರ ಪ್ರತಿಭಟನೆ

ಮೈಸೂರು, ಜೂ.17(ಜಿಎ)–ರಾಜ್ಯದಲ್ಲಿ ವಿದ್ಯುತ್ ವಿತರಣಾ ಪರವಾನಗಿ ಕೋರಿ ಟಾಟಾ ಪವರ್ ಕಂಪನಿ ಸಲ್ಲಿಸಿರುವ ಅರ್ಜಿಯನ್ನು ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗ ತಿರಸ್ಕರಿಸಬೇಕು ಎಂದು ಆಗ್ರಹಿಸಿ ರಾಜ್ಯ ರೈತ ಸಂಘದ ವತಿಯಿಂದ ಜೂ.18ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.


ನಾಗೇಂದ್ರ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11 ಗಂಟೆಗೆ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಸೇರಿದಂತೆ ಎಲ್ಲೆಡೆ ಪ್ರತಿಭಟನೆ ನಡೆಸಲಾಗುವುದು ಎಂದು ಅವರು ತಿಳಿಸಿದರು.

ರಾಜ್ಯದ 19 ಜಿಲ್ಲೆಗಳಲ್ಲಿ ಈಗಾಗಲೇ ಇರುವ ಸಾರ್ವಜನಿಕ ವಿದ್ಯುತ್ ವಿತರಣಾ ಕಂಪನಿಗಳಿಗೆ ಸಮಾನಾಂತರವಾಗಿ ವಿದ್ಯುತ್ ವಿತರಣೆ ಕೋರಿ ಟಾಟಾ ಪವರ್ ಕಂಪನಿ ಪರವಾನಗಿಗೆ ಅರ್ಜಿ ಸಲ್ಲಿಸಿದ್ದಾರೆ. ಒಂದು ವೇಳೆ ನೀಡಿದಲ್ಲಿ ರಾಜ್ಯ ಸರ್ಕಾರದ ಯೋಜನೆಗಳಿಗೆ ಧಕ್ಕೆಯುಂಟಾಗಲಿದೆ. ರೈತರ ಪಂಪ್‌ಸೆಟ್‌ಗಳಿಗೆ ದೊರೆಯುತ್ತಿರುವ ವಿದ್ಯುತ್ ಸ್ಥಗಿತಗೊಳ್ಳಲಿದೆ. ಭಾಗ್ಯಜ್ಯೋತಿ, ಕುಟೀರ ಜ್ಯೋತಿಗೂ ಅಡ್ಡಿಯಾಗಲಿದೆ. ಸಣ್ಣ ಮತ್ತು ಮಧ್ಯಮ ಕಾರ್ಖಾನೆಗಳಿಗೆ ದೊರೆಯುತ್ತಿರುವ ವಿದ್ಯುತ್ ರಿಯಾಯಿತಿ ಸ್ಥಗಿತಗೊಳ್ಳಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಜೂ.23ರವರೆಗೆ ಈ ಸಂಬಂಧ ಲಿಖಿತ ಆಕ್ಷೇಪಣೆ ಸಲ್ಲಿಸಲು ಆಯೋಗ ಅವಕಾಶ ನೀಡಿದೆ. ಆದ್ದರಿಂದ ರಾಜ್ಯದ ಜನತೆ ಸದುಪಯೋಗಪಡಿಸಿಕೊಳ್ಳಬೇಕು. ಇದರೊಡನೆ ಜೂ.20ರಂದು 100 ಮಂದಿ ಬೆಂಗಳೂರಿನಲ್ಲಿರುವ ಆಯೋಗದ ಕಚೇರಿಗೆ ಭೇಟಿ ನೀಡಿ ಖುದ್ದು ಆಕ್ಷೇಪಣೆ ಸಲ್ಲಿಸಲಿದ್ದಾರೆ ಎಂದರು. ಬಿಡದಿ ಟೌನ್‌ಶಿಪ್ ಯೋಜನೆಗೆ ಫಲವತ್ತಾದ ಭೂಮಿ ಸ್ವಾಧೀನಪಡಿಸಿಕೊಳ್ಳುವುದನ್ನು ಕೈಬಿಡಬೇಕೆಂದು ಆಗ್ರಹಿಸಿ, ಜೂ.22ರಂದು ಬೆಳಗ್ಗೆ 11ಕ್ಕೆ ಬಿಡದಿ ಬಿಜಿಎಸ್ ವೃತ್ತದಿಂದ ಚಳವಳಿ ನಡೆಯುತ್ತಿರುವ ಭೈರಮಂಗಲಕ್ಕೆ ಪ್ರತಿಭಟನಾ ನಡಿಗೆ ಹಮ್ಮಿಕೊಳ್ಳಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ನೇತ್ರಾವತಿ, ಕುಮಾರ್, ಮರಂಕಯ್ಯ, ಆನಂದೂರು ಪ್ರಭಾಕರ್, ಮಹೇಶ್ ಉಪಸ್ಥಿತರಿದ್ದರು.

ಜೂ.21ರಂದು ಮೈಸೂರಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಮೈಸೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮೈಸೂರು ಅರಮನೆ ಮಂಡಳಿ ಆಯುಷ್ ಇಲಾಖೆ ವತಿಯಿಂದ 12ನೇ ಅಂತರ ರಾಷ್ಟ್ರೀಯ ಯೋಗಾ ದಿನಾಚರಣೆಯನ್ನು ಜೂ.21ರಂದು ಬೆಳಗ್ಗೆ 6ರಿಂದ 8 ಗಂಟೆಗೆ ಅರಮನೆ ಆವರಣದಲ್ಲಿ ಆಯೋಜಿಸಲಾಗಿದೆ. ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ನಗರಾಭಿವೃದ್ಧಿ ಸಚಿವ ಯತೀಂದ್ರ ಹಾಗೂ ನಿಕಟಪೂರ್ವ ಮುಖ್ಯಮಂತ್ರಿ ಸಿದ್ದ ರಾಮಯ್ಯ ಉಪಸ್ಥಿತಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಯು.ಟಿ.ಖಾದರ್ ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಲಿದ್ದಾರೆ. ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷ ಅನಿಲ್‌ಕುಮಾರ್ ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಗೌರವ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಎಂ, ಮೈಸೂರು ಪೇಂಟ್ಸ್ & ವಾರ್ನಿಷ್ ಲಿ. ಅಧ್ಯಕ್ಷ ಹೆಚ್.ಡಿ.ಗಣೇಶ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎನ್.ರಂಗಸ್ವಾಮಿ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಆಗಮಿಸಲಿದ್ದಾರೆ. ಸಮಾರಂಭದ ಅತಿಥಿಗಳಾಗಿ ಶಾಸಕರಾದ ಡಾ.ಹೆಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ತನ್ವೀರ್‌ಸೇಠ್, ಜಿ.ಟಿ. ದೇವೇಗೌಡ, ರವಿಶಂಕರ್ ಡಿ., ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ.ವಿವೇಕಾನಂದ, ಕೆ.ಶಿವಕುಮಾರ್, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ಗಾಣಿಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಅನಂತ್ ಹಾಗೂ ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಪ್ಯಾರಿಜಾನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಜೂ.21, ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ

ಮೈಸೂರು,ಜೂ.17–ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ ಹಾಗೂ ಅರವಿಂದ ಕಣ್ಣಿನ ಆಸ್ಪತ್ರೆ, ಕೊಯಮತ್ತೂರು ಸಂಯುಕ್ತಾಶ್ರಯದಲ್ಲಿ ಜೂ.21ರಂದು ಬೆಳಗ್ಗೆ 7.30ರಿಂದ 12.30ರವರೆಗೆ ಮಂಡಿ ಮೊಹಲ್ಲಾ, ಕಬೀರ್ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಹೆಚ್.ಎಸ್.ಬಸವರಾಜ್, ಮೊ. 94487 53597, ಎಂ.ಎನ್. ಜೈಪ್ರಕಾಶ್, ಮೊ. 99161 55453, 94487 38657 ಸಂಪರ್ಕಿಸಬಹುದು.

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಎನ್.ಭಾಸ್ಕರ್ ಹುಟ್ಟುಹಬ್ಬ ಆಚರಣೆ

ಮೈಸೂರು: ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷರಾದ ಎನ್.ಭಾಸ್ಕರ್ ಅವರಿಗೆ ಕ್ಯಾಬಿನೆಟ್ ದರ್ಜೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನಮಾನ ಸಿಗಬೇಕು ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಅಭಿಪ್ರಾಯಪಟ್ಟರು.

ಮಾತೃಮಂಡಳಿ ಶಾಲೆಯಲ್ಲಿ ಬುಧವಾರ ನಡೆದ ಎನ್.ಭಾಸ್ಕರ್ ಅವರ ಹುಟ್ಟುಹಬ್ಬದ ಕಾರ್ಯಕ್ರಮದ ಅಂಗವಾಗಿ ಶಾಲಾ ಮಕ್ಕಳಿಗೆ ನೋಟ್‌ಬುಕ್ ಮತ್ತು ಪೆನ್ನು ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.





ಬುಧವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅವರನ್ನು ಕಾಂಗ್ರೆಸ್ ನಾಯಕರು, ಅಭಿಮಾನಿಗಳು, ಹಿತೈಷಿಗಳು ಶುಭ ಕೋರಿದರು. ಈ ವೇಳೆ ಮಾತೃಮಂಡಳಿ ಶಾಲಾ ಮಕ್ಕಳಿಗೆ ನೋಟ್‌ಬುಕ್ ಮತ್ತು ಪೆನ್ನು ವಿತರಿಸಲಾಯಿತು(ಬಲಚಿತ್ರ).

ಭಾಸ್ಕರ್ ಅವರ ಹೋರಾಟಕ್ಕೆ ರಾಜಕೀಯವಾಗಿ ಉನ್ನತವಾದ ಹುದ್ದೆ ಸಿಗಬೇಕಿತ್ತು. ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಭಾಸ್ಕರ್ ಅವರಿಗೆ ಕ್ಯಾಬಿನೆಟ್ ದರ್ಜೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಬೇಕೆಂದು ಈ ಹಿಂದೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೆವು. ಆದರೆ ಅಂದು ಅವಕಾಶ ದೊರೆಯಲಿಲ್ಲ ಎಂದು ತಿಳಿಸಿದರು.

ಧಾರವಾಡದ ನ್ಯಾಯಾಧೀಶರೊಬ್ಬರು ಅಂಬೇಡ್ಕರ್ ಅವರ ಭಾವಚಿತ್ರವನ್ನು ಗಣರಾಜ್ಯೋತ್ಸವದಂದು ಇಡದೆ ಅಪಮಾನ ಮಾಡಿದ್ದರ ವಿರುದ್ಧವಾಗಿ ಮೈಸೂರಿನಲ್ಲಿ ದೊಡ್ಡ ಮಟ್ಟದಲ್ಲಿ ಹೋರಾಟ ಮಾಡಿ ಮೈಸೂರು ಬಂದ್ ಕರೆ ನೀಡಿ ಯಶಸ್ವಿ ಆದ ಕಾರಣ ಆ ಹೋರಾಟದಲ್ಲಿ ಭಾಗವಹಿಸಿದ್ದವರ 8 ಮಂದಿಯ ಮೇಲೆ ಎಫ್‌ಐಆರ್ ದಾಖಲಾಯಿತು. ಅದರಿಂದ ನಮ್ಮ ಪಾಸ್‌ಪೋರ್ಟ್ ರದ್ದಾಯಿತು. ಆದರೆ ನಾವು ಧೃತಿಗೆಡಲಿಲ್ಲ. ಒಳ್ಳೆಯ ಕೆಲಸಗಳನ್ನು ಮಾಡುವಾಗ ಇಂತಹ ಘಟನೆಗಳು ಸಹಜ ಎಂದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಎನ್.ಭಾಸ್ಕರ್ ಅವರು ಪ್ರತಿ ವರ್ಷದಂತೆ ಅನೇಕ ಸಮಾಜ ಸೇವೆಗಳ ಮೂಲಕ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಾರೆ. ಅವರು ಸದಾ ಆರೋಗ್ಯವಂತರಾಗಿ 100 ವರ್ಷ ಬಾಳಲಿ ಎಂದು ಶುಭ ಹಾರೈಸಿದರು.

> “ಹಿರಿಯರ ಸಹಕಾರದಿಂದ ಪ್ರತಿ ವರ್ಷ ವಿವಿಧ ಶಾಲೆ, ವೃದ್ಧಾಶ್ರಮಗಳಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದು, ಈ ಬಾರಿ ಮಾತೃಮಂಡಳಿ ಶಾಲೆಯಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳಿ ಎಂದು ತಿಳಿಸಿದ್ದರು. ನನ್ನ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕೆಪಿಸಿಸಿ ಅಧ್ಯಕ್ಷರು, ವಕ್ತಾರರು, ಸದಸ್ಯರೆಲ್ಲರಿಗೂ ಧನ್ಯವಾದಗಳು.
> – ಎನ್.ಭಾಸ್ಕರ್, ರಾಜ್ಯಾಧ್ಯಕ್ಷರು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ

ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಮಾತನಾಡಿ, ಎನ್.ಭಾಸ್ಕರ್ ಅವರ ಇಂತಹ ಸಮಾಜ ಕಾರ್ಯಗಳು, ಹೋರಾಟಗಳು ಹೀಗೆ ಮುಂದುವರೆಯಲಿ. ಭಗವಂತ ಅವರಿಗೆ ಒಳ್ಳೆಯ ಆರೋಗ್ಯ, ಆಯಸ್ಸು ಕೊಡಲಿ ಎಂದು ಹರಸಿದರು.

ಈ ವೇಳೆ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿಯ ಉಪಾಧ್ಯಕ್ಷ ಪುಟ್ಟ ಅರಸ, ರಾಜ್ಯ ಕಾರ್ಯದರ್ಶಿ ಕಾಂತರಾಜು, ಮಹಿಳಾ ಘಟಕದ ಅಧ್ಯಕ್ಷರಾದ ಮಂಜುಳಾ, ಹಿರಿಯ ವಕೀಲ ತಿಮ್ಮಯ್ಯ, ಪುಟ್ಟಸ್ವಾಮಿ, ಸರಸ್ವತಿ, ಮನೋನ್ಮಣಿ, ಚಂದ್ರಶೇಖರ, ಚರಣ್‌ರಾಜ್ ಮಾತೃಮಂಡಳಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಸುರೇಶ್, ಮೈಸೂರು ಕಿಸಾನ್ ಮೋರ್ಚಾ ಕಾಂಗ್ರೆಸ್ ಘಟಕ ಜಿಲ್ಲಾಧ್ಯಕ್ಷ ಮಹದೇವ್, ಆದಿಕರ್ನಾಟಕ ಹಿತ ರಕ್ಷಣಾ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ಕೆ.ಮುರುಳಿ, ಮುಖಂಡರಾದ ಭರತ್ ರಾಮಸ್ವಾಮಿ, ಶಿವಕುಮಾರ್, ಹೆಡತಲೆ ಮಂಜುನಾಥ್, ರೇವಣ್ಣ, ಶಿವನಾಗಪ್ಪ, ವಕೀಲರಾದ ಆನಂದ್, ಪ್ರಭು, ಗಂಗಾಧರ, ಕೆ.ಚಂದ್ರಶೇಖರ ಸೂರ್ಯದೇವ ಮಧುಸೂದನ ಜೆ.ಪ್ರಭು, ಕರುನಾಡ ಸೇನೆ ರಾಜ್ಯಾಧ್ಯಕ್ಷ ಗಣೇಶ, ನಾಂಯುಕರ ಸಂಘದ ಮುಖಂಡರಾದ ಶ್ರೀನಿವಾಸ ನಾಯಕ, ದೇವಪ್ಪ ನಾಯಕ, ಪ್ರಭಾಕರ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು,ಜೂ.17–ಮೈಸೂರು ಜಿಲ್ಲೆ ಒಕ್ಕಲಿಗರ ಸಂಘವು (ಚಾಮರಾಜನಗರ ಜಿಲ್ಲೆ ಒಳಗೊಂಡು) 2025–26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಆಯೋಜಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.90ಕ್ಕಿಂತ ಅಧಿಕ ಅಂಕ ಗಳಿಸಿದ ಮತ್ತು ಸರ್ಕಾರಿ ಶಾಲೆಯಲ್ಲಿ ಶೇ.85ಕ್ಕಿಂತ ಅಧಿಕ ಅಂಕ ಗಳಿಸಿದ ಒಕ್ಕಲಿಗ ಜನಾಂಗದ ವಿದ್ಯಾರ್ಥಿಗಳಿಗೆ ಜೂ.27ರಂದು ನಡೆಯಲಿರುವ 517ನೇ ಕೆಂಪೇಗೌಡ ಜಯಂತಿ ದಿನ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಅಂಕಪಟ್ಟಿ ಜೆರಾಕ್ಸ್, ಆಧಾರ್ ಕಾರ್ಡ್ ಪ್ರತಿ, ಜಾತಿ ಪ್ರಮಾಣ ಪತ್ರ, ಇತ್ತೀಚಿನ ಭಾವಚಿತ್ರಗಳ ದಾಖಲಾತಿಯೊಂದಿಗೆ ಜೂ.22ರಂದು ಸಂಜೆ 5 ಗಂಟೆಯೊಳಗೆ ಮೈಸೂರಿನ ವಿದ್ಯಾರಣ್ಯಪುರಂ 2ನೇ ಮುಖ್ಯ ರಸ್ತೆಯಲ್ಲಿರುವ ಜಿಲ್ಲಾ ಒಕ್ಕಲಿಗರ ಸಂಘದ ಕಚೇರಿಗೆ ತಲುಪಿಸಲು ಕೋರಲಾಗಿದೆ.

ದೇಶ - ವಿದೇಶ

ವಿದ್ಯುತ್ ಪ್ರವಹಿಸಿ ಯುವಕ ಬಲಿ

ವೃಂದಾವನ: ಉತ್ತರ ಪ್ರದೇಶದ ಪವಿತ್ರ ಯಾತ್ರಾ ಸ್ಥಳವಾದ ವೃಂದಾವನದ ಇಸ್ಕಾನ್ ದೇವಾಲಯದ ದ್ವಾರದ ಬಳಿ ಅಳವಡಿಸಲಾಗಿದ್ದ ಕೂಲರ್ ಮುಟ್ಟಿದ್ದಕ್ಕೆ ಅದರಿಂದ ವಿದ್ಯುತ್ ಪ್ರವಹಿಸಿ 21 ವರ್ಷದ ಯುವಕ ಸಾವನ್ನಪ್ಪಿದ್ದಾನೆ.



ಮಧ್ಯಪ್ರದೇಶದ ಛತ್ತರ್‌ಪುರ ನಿವಾಸಿ ಅಭಿಗ್ಯಾನ್ ಗುಪ್ತಾ ಎಂಬ ಯುವಕ ತನ್ನ ತಂದೆ ಅಮಿತ್‌ಕುಮಾರ್ ಗುಪ್ತಾ ಅವರೊಂದಿಗೆ ವೃಂದಾವನ ದರ್ಶನಕ್ಕೆ ಬಂದಿದ್ದರು. ಇಸ್ಕಾನ್ ದೇವಾಲಯದ ಶೂ ಸ್ಟ್ಯಾಂಡ್ ಬಳಿ ಅವರಿಬ್ಬರೂ ತಮ್ಮ ಪಾದರಕ್ಷೆಗಳನ್ನು ಬಿಟ್ಟಿದ್ದರು.

ಈ ವೇಳೆ ತೀವ್ರ ಬೇಸಿಗೆಯ ಶಾಖದಿಂದ ಭಕ್ತರಿಗೆ ತಂಪು ನೀಡಲು ನಗರಸಭೆ ಅಲ್ಲಿ ಇರಿಸಿದ್ದ ಶವರ್ ಕೂಲರ್ ಯಂತ್ರವನ್ನು ಅಭಿಗ್ಯಾನ್ ಆಕಸ್ಮಿಕವಾಗಿ ಮುಟ್ಟಿದ್ದಾರೆ. ಆ ಕೂಲರ್‌ನಲ್ಲಿ ತಾಂತ್ರಿಕ ದೋಷವಿದ್ದ ಕಾರಣ ಕೂಡಲೇ ವಿದ್ಯುತ್ ಪ್ರವಹಿಸಿದೆ. ಅಭಿಗ್ಯಾನ್ ದೇಹದ ಮೂಲಕ ಕರೆಂಟ್ ಹರಿದ ತಕ್ಷಣ ಆತ ಜೋರಾಗಿ ಕಿರುಚಿಕೊಂಡಿದ್ದಾರೆ. ಮಗನ ಕೂಗು ಕೇಳಿ ತಂದೆ ಅಮಿತ್‌ಕುಮಾರ್ ಆತನನ್ನು ರಕ್ಷಿಸಲು ಧಾವಿಸಿ ಹಿಂದಕ್ಕೆ ಎಳೆಯಲು ಯತ್ನಿಸಿದರಾದರೂ, ವಿದ್ಯುತ್ ಆಘಾತದ ತೀವ್ರತೆಗೆ ತಂದೆಯೇ ದೂರ ಹೋಗಿ ಬಿದ್ದಿದ್ದಾರೆ. ಯುವಕ ಕೂಲರ್‌ಗೆ ಸಿಲುಕಿ ಒದ್ದಾಡಿದ್ದಾರೆ. ನಂತರ ಸ್ಥಳೀಯರು ಹಾಗೂ ಇತರ ಭಕ್ತರು ಒಟ್ಟಾಗಿ ಆತನನ್ನು ಯಂತ್ರದಿಂದ ಬೇರ್ಪಡಿಸಿ ತಕ್ಷಣವೇ ಜಿಲ್ಲಾ ಜಂಟಿ ಆಸ್ಪತ್ರೆಗೆ ಸಾಗಿಸಿದರಾದರೂ, ಪರೀಕ್ಷಿಸಿದ ವೈದ್ಯರು ಆತ ಈಗಾಗಲೇ ಮೃತಪಟ್ಟಿದ್ದಾನೆ ಎಂದು ಘೋಷಿಸಿದರು.

ಸೊಳ್ಳೆ ಗಾತ್ರದ ಡ್ರೋನ್ ಸೃಷ್ಟಿಸಿದ ಚೀನಾ

ಹುನಾನ್: ಇತ್ತೀಚೆಗೆ ಜಗತ್ತಿನ ಎಲ್ಲಾ ದೇಶಗಳು ಭದ್ರತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿವೆ. ಅದಕ್ಕಾಗಿ ನೂತನ ತಂತ್ರಜ್ಞಾನಗಳನ್ನು ಬಳಸಿ ಮಾರಕ ಶಸ್ತ್ರಾಸ್ತ್ರಗಳು, ರೋಬೋಟ್, ಡ್ರೋನ್‌ಗಳನ್ನು ಕಂಡುಹಿಡಿದು ಸಂಗ್ರಹಿಸುತ್ತಿವೆ. ಈಗ ಅದೆಲ್ಲಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಚೀನಾ ಸೊಳ್ಳೆ ಗಾತ್ರದ ಡ್ರೋನ್ ನಿರ್ಮಿಸಿದೆ.



ಚೀನಾದ ಹುನಾನ್ ಪ್ರಾಂತ್ಯದ ರಾಷ್ಟ್ರೀಯ ರಕ್ಷಣಾ ತಂತ್ರಜ್ಞಾನ ವಿಶ್ವವಿದ್ಯಾಲಯದ ರೊಬೋಟಿಕ್ಸ್ ಪ್ರಯೋಗಾಲಯ ರಹಸ್ಯ ಮಿಲಿಟರಿ ಕಾರ್ಯಾಚರಣೆಗಳಿಗಾಗಿ ಸೊಳ್ಳೆ ಗಾತ್ರದ ಡ್ರೋನ್ ಅಭಿವೃದ್ಧಿಪಡಿಸಿದೆ. ಮೈಕ್ರೋ–ಡ್ರೋನ್ ಗಾತ್ರ ಮತ್ತು ವಿನ್ಯಾಸ ಎರಡರಲ್ಲೂ ಸೊಳ್ಳೆಯನ್ನು ಹೋಲುತ್ತದೆ. ಇದು ಎರಡು ಸಣ್ಣ ಎಲೆ ಆಕಾರದ ರೆಕ್ಕೆಗಳು ಮತ್ತು ಮೂರು ಕೂದಲು ಗಾತ್ರದ ತೆಳುವಾದ ಕಾಲುಗಳನ್ನು ಹೊಂದಿದೆ. ಕೋಲು ಆಕಾರದ ದೇಹ ಹೊಂದಿದೆ. ಈ ಡ್ರೋನನ್ನು ಸ್ಮಾರ್ಟ್‌ಫೋನ್ ಬಳಸಿ ನಿಯಂತ್ರಿಸಬಹುದು. ಡ್ರೋನ್ ತುಂಬಾ ಚಿಕ್ಕದಾಗಿದ್ದು ಅದನ್ನು 2 ಬೆರಳುಗಳ ನಡುವೆ ಹಿಡಿದಿಟ್ಟುಕೊಳ್ಳಬಹುದಾಗಿದೆ. ಸೊಳ್ಳೆಯಂತಹ ರೋಬೋಟ್ ಯುದ್ಧ ಭೂಮಿಯಲ್ಲಿ ಮಾಹಿತಿ ಕಲೆಹಾಕಲು ಮತ್ತು ವಿಶೇಷ ಕಾರ್ಯಾಚರಣೆಗಳಿಗಾಗಿ ವಿನ್ಯಾಸಗೊಳಿಸಲಾಗಿದೆ. ಇದರ ಸಣ್ಣ ಗಾತ್ರದಿಂದ ಅದು ಡ್ರೋನ್ ಎಂದು ಊಹಿಸಲು ಕಷ್ಟಸಾಧ್ಯ. ಈ ಪುಟ್ಟ ಡ್ರೋನ್ ದೊಡ್ಡ ಡ್ರೋನ್‌ಗಳನ್ನು ಪತ್ತೆ ಹಚ್ಚುತ್ತದೆ. ಸೂಕ್ಷ್ಮ ಪ್ರದೇಶಗಳಲ್ಲಿ ರಹಸ್ಯ ಕಣ್ಗಾವಲು, ಗುಪ್ತಚರ ಮಾಹಿತಿ ಕಲೆ ಹಾಕಲು ಸಹಕಾರಿಯಾಗಿದೆ ಎಂದು ಎನ್‌ಯುಡಿಟಿ ವಿದ್ಯಾರ್ಥಿ ಹೆಕ್ಸಿಯಾಂಗ್ ಹೇಳಿಕೊಂಡಿದ್ದಾನೆ.

ಇಡಿ ವಿಚಾರಣೆಗೆ ಹಾಜರಾದ ಪಿಣರಾಯಿ ಪುತ್ರಿ ವೀಣಾ


ಕೊಚ್ಚಿ: ಸಿಎಂಆರ್‌ಎಲ್ ಕಂಪನಿಗೆ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇರಳ ಮಾಜಿ ಸಿಎಂ ಪಿಣರಾಯಿ ವಿಜಯನ್ ಅವರ ಪುತ್ರಿ ವೀಣಾ ಜಾರಿ ನಿರ್ದೇಶನಾಲಯದ ಮುಂದೆ ವಿಚಾರಣೆಗೆ ಹಾಜರಾದರು.



ವೀಣಾ ಅವರಿಗೆ ಸೇರಿದ ಎಕ್ಸಾಲಜಿಕ್ ಸಲ್ಯೂಷನ್ಸ್ ಪ್ರೈ.ಲಿಮಿ. ಮತ್ತು ಕೊಚಿನ್ ಮಿನರಲ್ಸ್ ಅಂಡ್ ರೂಟೈಲ್ ಲಿ. ಕಂಪನಿಯ ನಡುವೆ ನಡೆದಿದೆ ಎನ್ನಲಾದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ ಅಧಿಕಾರಿಗಳು ಈ ವಿಚಾರಣೆ ನಡೆಸುತ್ತಿದ್ದಾರೆ. ಸಿಎಂಆರ್‌ಎಲ್ ಕಂಪನಿಯು ವೀಣಾ ಅವರಿಗೆ ಸೇರಿದ ಎಕ್ಸಾಲಾಜಿಕ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್‌ಗೆ 2.78 ಕೋಟಿ ಹಣ ಪಾವತಿಸಿದೆ. ಇದಕ್ಕೆ ಪ್ರತಿಯಾಗಿ ಯಾವುದೇ ಸೇವೆ ಪಡೆದಿಲ್ಲ ಎಂಬ ಆರೋಪ ಇದೆ. ಜೂ.12ರಂದು ವಿಚಾರಣೆಗೆ ಹಾಜರಾಗುವಂತೆ ಇ.ಡಿ ನೋಟಿಸ್ ನೀಡಿತ್ತು. ಆದರೆ, ಅನಾರೋಗ್ಯದ ಕಾರಣ ನೀಡಿದ್ದ ವೀಣಾ ಅವರು ಇ–ಮೇಲ್ ಮೂಲಕ ಮತ್ತಷ್ಟು ಕಾಲಾವಕಾಶ ಕೋರಿದ್ದರು. ಸಿಎಂಆರ್‌ಎಲ್ ವ್ಯವಸ್ಥಾಪಕ ನಿರ್ದೇಶಕ ಶಶಿಧರನ್ ಕಾರ್ತಾ ಅವರ ಇಐಸಿಪಿಎಲ್ ಕಂಪನಿಯಿಂದಲೂ ವೀಣಾ ಅವರ ಐಟಿ ಸಂಸ್ಥೆಗೆ 50 ಲಕ್ಷ ಸಾಲ ನೀಡಲಾಗಿದೆ. ನಿಗದಿತ ಅವಧಿಯಲ್ಲಿ ಮರುಪಾವತಿ ಮಾಡದಿದ್ದರೂ ಸಾಲ ನೀಡಿರುವ ಬಗ್ಗೆ ಇ.ಡಿ. ಅನುಮಾನ ವ್ಯಕ್ತಪಡಿಸಿದೆ.

ಲಘು ವಿಮಾನ ಪತನ: ಕಾಕ್‌ಪಿಟ್ ಗ್ಲಾಸ್ ಒಡೆದು ಪ್ರಯಾಣಿಕರ ರಕ್ಷಣೆ


ಲಾರೆಡೊ (ಟೆಕ್ಸಾಸ್): ಅಮೆರಿಕದ ಟೆಕ್ಸಾಸ್‌ನ ಲಾರೆಡೊ ಹೆದ್ದಾರಿಯಲ್ಲಿ ಮಂಗಳವಾರ ತಡರಾತ್ರಿ ಲಘು ವಿಮಾನವೊಂದು ಭೀಕರವಾಗಿ ಪತನಗೊಂಡು ಬೆಂಕಿ ಹೊತ್ತಿಕೊಂಡ ಭೀಕರ ಘಟನೆ ನಡೆದಿದೆ.



ಅಪಘಾತದ ಬೆನ್ನಲ್ಲೇ ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಸಾರ್ವಜನಿಕರು ತಮ್ಮ ವಾಹನಗಳನ್ನು ನಿಲ್ಲಿಸಿ, ಉರಿಯುತ್ತಿದ್ದ ವಿಮಾನದ ಕಾಕ್‌ಪಿಟ್ ಕಿಟಕಿಯನ್ನು ಒಡೆದು ಒಳಗಿದ್ದವರನ್ನು ರಕ್ಷಿಸಲು ಸಾಹಸ ನಡೆಸಿದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಈ ಭೀಕರ ದುರಂತದಲ್ಲಿ ವಿಮಾನದಲ್ಲಿದ್ದ ಆರು ಜನರ ಪೈಕಿ ಒಬ್ಬರು ಸಾವನ್ನಪ್ಪಿದ್ದಾರೆ ಎಂದು ಲಾರೆಡೊ ಪೊಲೀಸ್ ಇಲಾಖೆಯ ತನಿಖಾಧಿಕಾರಿ ಜೋಸ್ ಬೇಜಾ ತಿಳಿಸಿದ್ದಾರೆ. ಘಟನೆಯಿಂದಾಗಿ ಹೆದ್ದಾರಿಯಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಲೂಪ್ 20 ಹೆದ್ದಾರಿಯ ರಸ್ತೆ ತಡೆಗೋಡೆಗೆ (ಬ್ಯಾರಿಕೇಡ್) ವಿಮಾನವು ಡಿಕ್ಕಿ ಹೊಡೆದು ಪಕ್ಕಕ್ಕೆ ಉರುಳಿದೆ. ತಕ್ಷಣವೇ ಇಂಜಿನ್‌ನಲ್ಲಿ ಭಾರಿ ಬೆಂಕಿ ಕಾಣಿಸಿಕೊಂಡಿದ್ದರಿಂದ ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಸಾರ್ವಜನಿಕರಲ್ಲಿ ತಲ್ಲಣ ಸೃಷ್ಟಿಯಾಯಿತು. ಮುನ್ನೆಚ್ಚರಿಕೆ ಕ್ರಮವಾಗಿ ಹೆದ್ದಾರಿಯ ಎರಡೂ ಬದಿಯ ಸಂಚಾರವನ್ನು ಪೊಲೀಸರು ಸಂಪೂರ್ಣವಾಗಿ ಸ್ಥಗಿತಗೊಳಿಸಿದ್ದಾರೆ.

ಖರ್ಚಿಗೆ ಹಣ ಕೊಡಲಿಲ್ಲವೆಂದು ತಂದೆಗೇ ಗುಂಡಿಕ್ಕಿದ ಮಗ!

ಪ್ರಯಾಗ್‌ರಾಜ್: ಖರ್ಚಿಗೆ ಸರಿಯಾಗಿ ಹಣ ನೀಡುತ್ತಿಲ್ಲ ಎಂಬ ಕಾರಣಕ್ಕೆ ಮಗನೇ ತಂದೆಯ ಮೇಲೆ ಗುಂಡು ಹಾರಿಸಿ ಕೊಂದ ಘಟನೆ ಉತ್ತರ ಪ್ರದೇಶದ ಪ್ರಯಾಗ್‌ರಾಜ್ ಜಿಲ್ಲೆಯ ನಾರಾ ಗ್ರಾಮದಲ್ಲಿ ನಡೆದಿದೆ.



ಮೃತರನ್ನು ರಾಮನರೇಶ್ ಕೋರಿ (48) ಎಂದು ಗುರುತಿಸಲಾಗಿದೆ. ಗುಂಡೇಟಿನಿಂದ ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ತಕ್ಷಣವೇ ಪ್ರಯಾಗ್‌ರಾಜ್‌ನ ಎಸ್‌ಆರ್‌ಎನ್ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ರಾಮನರೇಶ್ ಅವರು ಮಂಜನ್‌ಪುರದಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ತಮ್ಮ ಮಗ ರಾಹುಲ್ ಜೊತೆ ಮೋಟಾರ್ ಸೈಕಲ್‌ನಲ್ಲಿ ಕೆಲಸಕ್ಕೆ ಹೊರಟಿದ್ದಾಗ ಈ ಘಟನೆ ನಡೆದಿದೆ. ಇಬ್ಬರೂ ಮಂಜನ್‌ಪುರ ಪಟ್ಟಣದ ಬಿಪಿ ಪಬ್ಲಿಕ್ ಶಾಲೆ ಬಳಿ ತಲುಪುತ್ತಿದ್ದಂತೆ ಮಗ ರಾಹುಲ್ ಬೈಕ್ ನಿಲ್ಲಿಸುವಂತೆ ತಂದೆಗೆ ಹೇಳಿದ್ದಾನೆ. ತಂದೆ ಬೈಕ್ ನಿಲ್ಲಿಸುತ್ತಿದ್ದಂತೆಯೇ, ರಾಹುಲ್ ತನ್ನ ಬಳಿ ಇದ್ದ ಪಿಸ್ತೂಲಿನಿಂದ ತಂದೆಯ ಎದೆಗೆ ನೇರವಾಗಿ ಎರಡು ಸುತ್ತು ಗುಂಡು ಹಾರಿಸಿದ್ದಾನೆ. ಪರಿಣಾಮ ರಾಮನರೇಶ್ ರಕ್ತದ ಮಡುವಿನಲ್ಲಿ ಬೀಳುತ್ತಿದ್ದಂತೆ ಆರೋಪಿ ಸ್ಥಳದಿಂದ ಪರಾರಿಯಾಗಿದ್ದಾನೆ. ಮೃತರ ಅಣ್ಣ ರಾಕೇಶ್ ನೀಡಿದ ದೂರಿನ ಮೇರೆಗೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ತಲೆಮರೆಸಿಕೊಂಡಿರುವ ಆರೋಪಿ ರಾಹುಲ್‌ನ ಬಂಧನಕ್ಕಾಗಿ ತೀವ್ರ ಶೋಧ ಕೈಗೊಳ್ಳಲಾಗಿದೆ.

ಮೈಸೂರು ಮಿತ್ರ ಗುರುವಾರ 18 ಜೂನ್ 2026

ಜಾಗ ಮಂಜೂರಾತಿಯ 1500 ಅರ್ಜಿ ವಿಲೇವಾರಿ ಆಗಿಲ್ಲ

ಜಿಲ್ಲಾ ಮಾಜಿ ಸೈನಿಕರ ಅಸಮಾಧಾನ



ಜಿಲ್ಲಾ ಮಾಜಿ ಸೈನಿಕರ ಸಂಘದ ಪ್ರಮುಖರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮಡಿಕೇರಿ, ಜೂ.17–ರಾಷ್ಟ್ರದ ಗಡಿಗಳನ್ನು ಕಾಯ್ದು ನಿವೃತ್ತರಾಗಿ ಕೊಡಗಿಗೆ ಬಂದು ನೆಲೆಸಿ, ಜಾಗ ಮಂಜೂರಾತಿಗಾಗಿ ಕಳೆದ ಸುಮಾರು ಎರಡು ದಶಕಗಳ ಅವಧಿಯಲ್ಲಿ ಮಾಜಿ ಸೈನಿಕರು ಸಲ್ಲಿಸಿರುವ 1500 ಅರ್ಜಿಗಳು ಇಂದಿಗೂ ವಿಲೇವಾರಿಯಾಗದೆ ಹಾಗೆಯೇ ಬಾಕಿ ಉಳಿದಿದೆ ಎಂದು ಜಿಲ್ಲಾ ಮಾಜಿ ಸೈನಿಕರ ಸಂಘದ ಪ್ರಮುಖರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

5 ವರ್ಷಗಳಿಂದ ಜಿಲ್ಲೆಯಲ್ಲಿ ನೆಲೆಸಿರುವ ಮಾಜಿ ಸೈನಿಕರ ಸಂಕಷ್ಟಗಳನ್ನು ಕೇಳುವ ಮತ್ತು ಅವುಗಳನ್ನು ಪರಿಹರಿಸುವ ಸಂಬಂಧ ಕುಂದು ಕೊರತೆ ಸಭೆಗಳು ನಡೆದಿರಲಿಲ್ಲ. ಈಗಿನ ಜಿಲ್ಲಾಧಿಕಾರಿ ಸೋಮಶೇಖರ್ ನಡೆಸಿದ ಸಭೆಯಲ್ಲಿ ಮಾಜಿ ಯೋಧರ ಜಾಗ ಮಂಜೂರಾತಿ, ನಿವೇಶನ ಮಂಜೂರಾತಿ, ಸಮುದಾಯ ಭವನ ಮೊದಲಾದವುಗಳ ಬಗ್ಗೆ ಜಿಲ್ಲಾಧಿಕಾರಿಗಳ ಗಮನ ಸೆಳೆಯ ಲಾಗಿದೆ. ಅದಕ್ಕೆ ಸ್ಪಂದಿಸಿರುವ ಅವರು, ಸಂಬಂಧಪಟ್ಟ ಅಧಿಕಾರಿಗಳಿಗೆ 2 ತಿಂಗಳ ಒಳಗಾಗಿ ಮಾಜಿ ಯೋಧರ ಸಂಕಷ್ಟಗಳಿಗೆ ಸ್ಪಂದಿಸಿ ಅವರ ಅಗತ್ಯ ಕೆಲಸ ಕಾರ್ಯ ಮಾಡುವಂತೆ ನಿರ್ದೇಶನ ನೀಡಿರುವುದಾಗಿ ಸಂಘದ ಅಧ್ಯಕ್ಷ ನಿವೃತ್ತ ಮೇಜರ್ ಜನರಲ್ ಬಿ.ಎ.ಕಾರ್ಯಪ್ಪ, ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಘದ ಗೌರವ ಕಾರ್ಯದರ್ಶಿ ನಿವೃತ್ತ ಮೇಜರ್ ಓ.ಎಸ್.ಚಿಂಗಪ್ಪ ಮಾತನಾಡಿ, 20 ವರ್ಷಗಳ ಅವಧಿಯಲ್ಲಿ ಜಾಗ ಮಂಜೂರಾತಿಗಾಗಿ 1500 ಹೆಚ್ಚಿನ ಅರ್ಜಿಗಳು ಮಾಜಿ ಸೈನಿಕರಿಂದ ಸಲ್ಲಿಕೆಯಾಗಿದ್ದರೂ ಅವುಗಳು ವಿಲೇವಾರಿಯಾಗಿಲ್ಲ. ಕೆಲವೊಂದು ಅರ್ಜಿಗಳು ವಿಲೇವಾರಿಯಾಗಿದ್ದರು, ಸಂಘದ ಗಮನಕ್ಕೆ ಅದು ಬಂದಿಲ್ಲ ಎಂದು ಸ್ಪಷ್ಟಪಡಿಸಿದರು.

ಕೊಡಗಿನಲ್ಲಿ ನೆಲೆಸಿರುವ ಮಾಜಿ ಯೋಧರಲ್ಲಿ ಶೇ.90ಕ್ಕೂ ಹೆಚ್ಚಿನ ಮಂದಿಗೆ ಮನೆಗಳು ಇವೆ. ಕೇವಲ ಶೇ.10ರಷ್ಟು ಮಂದಿಗೆ ಮಾತ್ರ ನಿವೇಶನಗಳಿಲ್ಲ. ಇಂಥವರು ಸಲ್ಲಿಸಿರುವ 200ರಿಂದ 300 ಅರ್ಜಿಗಳು ಇಂದಿಗೂ ವಿಲೇವಾರಿಯಾಗಿಲ್ಲ ಇವುಗಳನ್ನು ವಿಲೇ ವಾರಿ ಮಾಡಿ ಮಾಜಿ ಯೋಧರಿಗೆ ನೆಲೆಯೊದಗಿಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಲೆಫ್ಟಿನೆಂಟ್ ಕರ್ನಲ್ ಅಯ್ಯುಡ ಗಣಪತಿ (ನಿವೃತ್ತ), ಪೊನ್ನಂಪೇಟೆ ತಾಲೂಕು ಮಾಜಿ ಸೈನಿಕರ ಸಂಘದ ಅಧ್ಯಕ್ಷ ಐನಂಡ ಮಂದಣ್ಣ, ಸೋಮವಾರಪೇಟೆ ತಾಲೂಕು ಅಧ್ಯಕ್ಷ ಬಿ.ಆರ್.ಈರಪ್ಪ, ವಿರಾಜಪೇಟೆ ತಾಲೂಕು ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಉಪಸ್ಥಿತರಿದ್ದರು.

ಮರ ಬಿದ್ದು ರಸ್ತೆ ಸಂಪರ್ಕ ಸ್ಥಗಿತ

ನಾಪೋಕ್ಲು, ಜೂ.17–ಅಪ್ಪಂಗಲ–ಕಾಟಗೇರಿ ರಸ್ತೆಗೆ ಮರ ಬಿದ್ದು ರಸ್ತೆ ಸಂಪರ್ಕ ಸಂಪೂರ್ಣ ಸ್ಥಗಿತಗೊಂಡ ಘಟನೆ ಬುಧವಾರ ಜರುಗಿದೆ.



ಮರಬಿದ್ದು ರಸ್ತೆ ಸಂಪರ್ಕ ಸಂಪೂರ್ಣ ಸ್ಥಗಿತಗೊಂಡಿದೆ

ಭಾಗಮಂಡಲ–ಮಡಿಕೇರಿ ಹಾಗೂ ಮಡಿಕೇರಿ–ಮಂಗಳೂರು ರಸ್ತೆಯನ್ನು ಸಂಪರ್ಕಿಸುವ ಅಪ್ಪಂಗಲ–ಕಾಟಗೇರಿ ರಸ್ತೆಗೆ ಬೃಹತ್ ಗಾತ್ರದ ಮರ ಮುರಿದು ಬಿದ್ದ ಪರಿಣಾಮ ಬುಧವಾರ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಎಲ್ಲಾ ವಾಹನಗಳು ಪರ್ಯಾಯವಾಗಿ ತಾಳತ್ಮನೆ ರಸ್ತೆಯನ್ನು ಅವಲಂಬಿಸಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿತ್ತು. ನಂತರ ರಸ್ತೆ ಪಿಡಬ್ಲ್ಯೂಡಿ ಮತ್ತು ಸಾರ್ವಜನಿಕರ ಸಹಕಾರದೊಂದಿಗೆ ಮರವನ್ನು ತೆರವುಗೊಳಿಸಲಾಗಿ ವಾಹನ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಆಯತಪ್ಪಿ ಬಿದ್ದ ಬೈಕ್: ಪೊಲೀಸ್ ಸೇರಿ ಇಬ್ಬರಿಗೆ ತೀವ್ರ ಗಾಯ



ತೀವ್ರವಾಗಿ ಗಾಯಗೊಂಡಿರುವ ಹೋಂ ಗಾರ್ಡ್ ಮತ್ತು ಪೊಲೀಸ್.

ಮಡಿಕೇರಿ: ಸವಾರನ ನಿಯಂತ್ರಣ ಕಳೆದುಕೊಂಡು ಬೈಕ್ ಆಯತಪ್ಪಿ ರಸ್ತೆಯಲ್ಲಿ ಬಿದ್ದ ಪರಿಣಾಮ ಪೊಲೀಸ್ ಸಿಬ್ಬಂದಿ ಹಾಗೂ ಹೋಂ ಗಾರ್ಡ್ ಗಂಭೀರ ಗಾಯಗೊಂಡಿರುವ ಘಟನೆ ಮಡಿಕೇರಿ ಮಾಣಿ ರಾಜ್ಯ ಹೆದ್ದಾರಿಯ ದೇವರಕೊಲ್ಲಿ ಬಳಿ ನಡೆದಿದೆ.

ಅಪಘಾತದಲ್ಲಿ ಸುಳ್ಯ ಠಾಣೆಯ ಪೊಲೀಸ್ ಸಿಬ್ಬಂದಿ ವಿಖ್ಯಾತ್(28) ಎಂಬವರಿಗೆ ತಲೆ ಹಾಗೂ ಕೈಗೆ ತೀವ್ರ ಗಾಯವಾಗಿ ಕೈ ತುಂಡರಿಸಲ್ಪಟ್ಟಿದೆ. ಹೋಂ ಗಾರ್ಡ್ ಸಿಬ್ಬಂದಿ ಗಿರಿಧರ್(48) ಅವರ ಕಾಲು, ಕೈಗೆ ಗಾಯಗಳಾಗಿದ್ದು, ಇಬ್ಬರನ್ನು ಸುಳ್ಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಲ್ಲುಗುಂಡಿ ಪೊಲೀಸ್ ಹೊರ ಠಾಣೆಯಲ್ಲಿ ಕರ್ತವ್ಯ ಮುಗಿಸಿ ಸಂಜೆ ಸುಳ್ಯ ಕಡೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ಈ ಅಪಘಾತ ಸಂಭವಿಸಿದೆ ಎಂದು ತಿಳಿದು ಬಂದಿದೆ.

ಬಡ್ಡಿ ಸಹಿತ 13 ಸಾವಿರ ರೂ. ಪಾವತಿಸಲು ಕೆಎಸ್‌ಆರ್‌ಟಿಸಿಗೆ ಆದೇಶ

ಮಡಿಕೇರಿ: ಈವಿ ಪವರ್ ಪ್ಲಸ್ ಬಸ್‌ನಲ್ಲಿ ಅಗತ್ಯ ಸೇವೆಯನ್ನು ಒದಗಿಸದ ಕೆಎಸ್‌ಆರ್‌ಟಿಸಿ ನಿಗಮಕ್ಕೆ ಬಡ್ಡಿ ಸಹಿತ 13 ಸಾವಿರ ರೂ. ಪಾವತಿಸುವಂತೆ ಕೊಡಗು ಜಿಲ್ಲಾ ಗ್ರಾಹಕರ ಆಯೋಗ ಆದೇಶಿಸಿರುವ ಘಟನೆ ನಡೆದಿದೆ.

ಮಡಿಕೇರಿ ತಾಲೂಕಿನ ಬಿಳಿಗೇರಿ ಗ್ರಾಮದ ನಿವಾಸಿ ಕೆ.ಹೆಚ್ ಸಚ್ಚಿತ್ ಎಂಬುವರು 2025ರ ನ.6ರಂದು ಮಡಿಕೇರಿಯಿಂದ ಬೆಂಗಳೂರಿಗೆ ಕೆಎಸ್‌ಆರ್‌ಟಿಸಿಯ ಈವಿ ಪವರ್‌ಪ್ಲಸ್ ಬಸ್‌ನಲ್ಲಿ ಪ್ರಯಾಣಿಸಿದ್ದರು. ಪ್ರಯಾಣದ ಸಂದರ್ಭ ಮಾರ್ಗದ ಮಧ್ಯೆ ಬಸ್‌ನ ಹವಾ ನಿಯಂತ್ರಣ ವ್ಯವಸ್ಥೆ ಸರಿಯಾಗಿ ಕಾರ್ಯ ನಿರ್ವಹಿಸದೆ ಸಚ್ಚಿತ್ ತೊಂದರೆ ಅನುಭವಿಸಿದ್ದರು. ಈ ಬಗ್ಗೆ ಬಸ್ಸಿನ ನಿರ್ವಾಹಕರಿಗೆ ಈ ಬಗ್ಗೆ ಗಮನ ಸೆಳೆದರೂ ಸಹ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಸದರಿ ಬಸ್‌ನಲ್ಲಿ ಟಿಕೆಟ್ ತೆಗೆಯುವ ವ್ಯವಸ್ಥೆ ಕೂಡ ಇಲ್ಲದಿರುವುದರಿಂದ ಸಚ್ಚಿತ್ ಸಂಕಷ್ಟಕ್ಕೆ ಒಳಗಾಗಿದ್ದರು.

ನಿಗಮದ ಜವಾಬ್ದಾರಿ: ಈ ಬಗ್ಗೆ ಸಚ್ಚಿತ್ ಪರಿಹಾರ ಕೋರಿ ಸಲ್ಲಿಸಿದ ದೂರಿನ ಮೇರೆ ವಿಚಾರಣೆ ನಡೆಸಿದ ಜಿಲ್ಲಾ ಗ್ರಾಹಕರ ಆಯೋಗದ ಪ್ರಭಾರ ಅಧ್ಯಕ್ಷೆ ಡಾ.ರೇಣುಕಾಂಬ ಸದಸ್ಯ ಗೌರಮ್ಮಣ್ಣಿ ನೀಡಿರುವ ಆದೇಶದಲ್ಲಿ ಎಸಿ ಬಸ್ ಸೌಲಭ್ಯಕ್ಕಾಗಿ ಮುಂಗಡವಾಗಿ ತೆರಿಗೆ ಒಳಗೊಂಡ ಟಿಕೆಟ್ ದರ ಪಾವತಿಸಿ ಕಾಯ್ದಿರಿಸಿದ ಮೇಲೆ ಎ.ಸಿ ಕೆಲಸ ಮಾಡುತ್ತಿಲ್ಲ ಎಂದಾದರೆ ಮೈಸೂರು ಬಸ್ ನಿಲ್ದಾಣದಲ್ಲಿ ಮತ್ತೊಂದು ತಮ್ಮ ನಿಗಮದ ಬಸ್ಸಿನಲ್ಲಿ ಪ್ರಯಾಣಿಸಲು ಅನುವು ಮಾಡಿಕೊಡುವುದು ನಿಗಮದವರ ಜವಾಬ್ದಾರಿಯಾಗಿತ್ತು. ಆದರೆ, ಇದನ್ನು ಮಾಡದಿರುವ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ನಿಗಮ ಒಟ್ಟು 13 ಸಾವಿರ ರೂ.ಗಳನ್ನು ಶೇ.9ರ ಬಡ್ಡಿ ದರದಂತೆ ಅರ್ಜಿದಾರ ಸಚ್ಚಿತ್ ರವರಿಗೆ ಪಾವತಿಸಬೇಕೆಂದು ಸೂಚಿಸಿದ್ದಾರೆ.

ವಿವಾಹಿತ ಮಹಿಳೆ ಆತ್ಮಹತ್ಯೆ

ಕುಶಾಲನಗರ, ಜೂ.17–ತಾಲೂಕಿನ ಗೊಂದಿಬಸವನಹಳ್ಳಿಯಲ್ಲಿ ವಿವಾಹಿತ ಮಹಿಳೆಯೊರ್ವರು ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ. ಗೊಂದಿಬಸವನಹಳ್ಳಿ ಸುಬ್ರಮಣ್ಯ ಕಾಫಿ ವರ್ಕ್ಸ್ ಬಳಿಯ ನಿವಾಸಿ ಮಹೇಶ್ ಎಂಬುವರ ಪತ್ನಿ ತೇಜ(27) ಮೃತ ಮಹಿಳೆಯಾಗಿದ್ದಾರೆ.

ಮಂಗಳವಾರ ರಾತ್ರಿ ಪತಿ ಮಹೇಶ್ ಹಾಲು ತರಲು ಅಂಗಡಿಗೆ ತೆರಳಿದ ಸಂದರ್ಭದಲ್ಲಿ ತೇಜ ಸ್ನಾನಗೃಹ ಚಾವಣಿಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತ ಮಹಿಳೆಗೆ ಇಬ್ಬರು ಪುತ್ರಿಯರಿದ್ದಾರೆ. ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ.

ಲಾರಿ–ಕಾರು ಡಿಕ್ಕಿ: ಓರ್ವನ ಸಾವು, ಇಬ್ಬರಿಗೆ ತೀವ್ರ ಗಾಯ

ವಿರಾಜಪೇಟೆ: ಲಾರಿ ಹಾಗೂ ಕಾರಿನ ನಡುವೆ ಸಂಭವಿಸಿದ ಅಪಘಾತದಲ್ಲಿ ಪ್ರಯಾಣಿಕರೊಬ್ಬರು ಸ್ಥಳದಲ್ಲೇ ಅಸುನೀಗಿದ್ದು, ಇಬ್ಬರು ತೀವ್ರವಾಗಿ ಗಾಯಗೊಂಡಿರುವ ಘಟನೆಯೊಂದು ಬುಧವಾರ ವಿರಾಜಪೇಟೆ–ಮಾಕುಟ್ಟ ಹೆದ್ದಾರಿಯಲ್ಲಿ ಸಂಭವಿಸಿದೆ.



ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಕಾರು ಮತ್ತು ಲಾರಿ

ಬೆಂಗಳೂರಿನ ಎಸ್.ಆರ್.ನಗರದ ನಿವಾಸಿ ಸಿ.ರೋಹಿತ್ (29ವರ್ಷ) ಮೃತಪಟ್ಟವರಾಗಿದ್ದಾರೆ. ಕೇರಳದ ಶಬರಿಮಲೆಗೆ ಶಿಫ್ಟ್ ಕಾರಿ(ಕೆಎ 05, ಎನ್ ಕ್ಯೂ– 62 89)ನಲ್ಲಿ ಹೋಗಿ ಬೆಂಗಳೂರಿಗೆ ಹಿಂದಿರುಗುವಾಗ ಪೆರುಂಬಾಡಿ ಚೆಕ್ ಪೋಸ್ಟ್ ಬಳಿ ಎದುರಿನಿಂದ ಬಂದ ಲಾರಿ(ಕೆಎಲ್ 78, ಬಿ–2039) ಡಿಕ್ಕಿ ಹೊಡೆದಿದೆ.

ಕಾರಿನಲ್ಲಿದ್ದ ಮನೋಜ್, ರುಕ್ಮಾಂಗದರಿಗೆ ಗಂಭೀರ ಗಾಯಗಳಾಗಿದ್ದು, ವಿರಾಜಪೇಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕೊಂಡೊಯ್ಯಲಾಗಿದೆ. ಕಾರಿನಲ್ಲಿ ಒಟ್ಟು 4 ಮಂದಿ ಪ್ರಯಾಣಿಸುತ್ತಿದ್ದು, ಕಾರಿನ ಚಾಲಕ ಷಣ್ಮುಗಂ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾನೆ.

ಕಾರಿನ ಚಾಲಕ ನೀಡಿದ ದೂರಿನ ಮೇರೆಗೆ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಲಾರಿ ಚಾಲಕನನ್ನು ಬಂಧಿಸಿರುವ ಪೊಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಇಂದು ರಜತ ಉಬ್ಬು ಚಿತ್ರ ಸ್ಥಾಪನೆ

ನಾಪೋಕ್ಲು: ಪುತ್ತ ಪೆರಾಜೆಯ ಶ್ರೀ ಅನ್ನಪೂರ್ಣೇಶ್ವರಿ ಭಜನಾ ಮಂಡಳಿ ವತಿಯಿಂದ ನೂತನವಾಗಿ ನಿರ್ಮಿಸಲಾದ ಮಂದಿರದ ಪ್ರವೇಶ ಹಾಗೂ ಅನ್ನಪೂರ್ಣೇಶ್ವರಿ ದೇವಿಯ ರಜತ ಉಬ್ಬು ಚಿತ್ರ ಸ್ಥಾಪನೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಜೂ 18ರಂದು ನಡೆಯಲಿದೆ.



ಪೆರಾಜೆ ಗ್ರಾಮದ ಶಾಸ್ತಾವು ದೇವಸ್ಥಾನದ ಪ್ರಧಾನ ಅರ್ಚಕ ವೆಂಕಟರಮಣ ಪಾಂಜಣ್ಣಾಯ ನೇತೃತ್ವದಲ್ಲಿ ಪೂರ್ವಾಹ್ನ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾಗ ಬೇಕೆಂದು ಅನ್ನಪೂರ್ಣೇಶ್ವರಿ ಭಜನಾ ಮಂಡಳಿಯ ಕಾರ್ಯಾಧ್ಯಕ್ಷ ನಾಗೇಶ್ ಕುಂದಲಪಾಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

18 ವರ್ಷಗಳ ಹಿಂದೆ ಆರಂಭವಾದ ಅನ್ನಪೂರ್ಣೇಶ್ವರಿ ಭಜನಾ ಮಂಡಳಿ ಪ್ರತಿ ಶನಿವಾರ ಸಂಜೆ ನಿಗದಿತ ಮನೆಮನೆಗಳಲ್ಲಿ ಭಜನೆ ನಡೆಸಿಕೊಂಡು ಬರುತ್ತಿದ್ದ ತಂಡದ ಸದಸ್ಯರ ಅನ್ನಪೂರ್ಣೇಶ್ವರಿ ದೇವಿಗೆ ಶಾಶ್ವತ ನೆಲೆ ಕಲ್ಪಿಸಬೇಕೆಂಬ ಸಂಕಲ್ಪದಿಂದ ದೇವಸ್ಥಾನ ಸ್ಥಾಪನೆಯಾಗಿದೆ. ಸುಳ್ಯದ ದತ್ತ ಜಯಂತಿ ಚಾರಿಟೇಬಲ್ ಟ್ರಸ್ಟ್‌ನ ಸದಸ್ಯ ಪಿ.ಎಲ್. ಶ್ರೀನಾಥ್ ಮಾರ್ಗದರ್ಶನದಲ್ಲಿ ಮೇದಪ್ಪ ಬಂಗಾರ ಕೋಡಿ ದಾನವಾಗಿ ನೀಡಿದ ಜಾಗದಲ್ಲಿ ಮಂದಿರ ನಿರ್ಮಾಣಗೊಂಡಿದೆ.

ರಾಷ್ಟ್ರೀಯ ಲೋಕ ಅದಾಲತ್

ವಿರಾಜಪೇಟೆ: ತಾಲೂಕು ಕಾನೂನು ಸೇವಾ ಸಮಿತಿ ನ್ಯಾಯಾಲಯಗಳ ಸಮುಚ್ಚಯದಲ್ಲಿ ಜು.11 ರಂದು ರಾಷ್ಟ್ರೀಯ ಲೋಕ ಅದಾಲತ್ತನ್ನು ಆಯೋಜಿಸಿದೆ.

ನ್ಯಾಯಾಲಯಗಳಲ್ಲಿ ಬಾಕಿ ಇರುವಂತ ವೈವಾಹಿಕ ವಿವಾದ ದಾವೆಗಳು, ಸಿವಿಲ್ ಮೊಕದ್ದಮೆಗಳು, ಚೆಕ್ ಬೌನ್ಸ್ ಪ್ರಕರಣಗಳು, ಮೋಟಾರು ವಾಹನ ಕಾಯಿದೆ ಪ್ರಕರಣಗಳು, ಕಂದಾಯ ಪ್ರಕರಣಗಳು, ಗಣಿ ಮತ್ತು ಖನಿಜ ನಿಯಂತ್ರಣ ಕಾಯಿದೆ ಪ್ರಕರಣಗಳು, ಬ್ಯಾಂಕಿಂಗ್ ಸಂಬಂಧಪಟ್ಟ ವ್ಯಾಜ್ಯ ಪೂರ್ವ ಪ್ರಕರಣಗಳು, ಪಟ್ಟಣ ಪಂಚಾಯಿತಿಯಲ್ಲಿ ಬಾಕಿ ಇರುವಂತಹ ತೆರಿಗೆ ಪ್ರಕರಣಗಳು ಮತ್ತು ಇತರೆ ಕ್ರಿಮಿನಲ್ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಷತ್ರ ಆಮೆ ಮಾರಾಟ ಮಾಡಲು ಯತ್ನಿಸಿದ ಆರೋಪಿಗಳ ಬಂಧನ

ಮಡಿಕೇರಿ: ಅಕ್ರಮವಾಗಿ ನಕ್ಷತ್ರ ಆಮೆಯನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಬಂಧಿಸಿದ್ದಾರೆ.



ಕೇರಳ ರಾಜ್ಯದ ಕಾಸರಗೋಡುವಿನ ಮಡಿಕ್ಕೈ ಎಂಬಲ್ಲಿನ ನಿವಾಸಿ ಶ್ರೀಧರನ್ ಸಿ.ಕೆ(70) ಮತ್ತು ಕಾಸರಗೋಡಿನ ವಿಷ್ಣು ಆಚಾರ್ಯ(68) ಎಂಬವರೆ ಬಂಧಿತ ಆರೋಪಿ ಗಳಾಗಿದ್ದಾರೆ.

ಸೋಮವಾರಪೇಟೆ ಕಡೆಗೆ ತೆರಳುವ ರಸ್ತೆಯ ಕನ್ನಂಡ ಪಡೆಬೀರ ವೃತ್ತದ ಬಳಿ ಇರುವ ಬಸ್ ತಂಗುದಾಣದಲ್ಲಿ ಇಬ್ಬರು ವ್ಯಕ್ತಿಗಳು ನಕ್ಷತ್ರ ಆಮೆಯನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಬಗ್ಗೆ ಅರಣ್ಯ ಸಂಚಾರಿ ದಳದ ಪೊಲೀಸರಿಗೆ ಮಾಹಿತಿ ಲಭಿಸಿದ ಮೇರೆಗೆ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿ, ನಕ್ಷತ್ರ ಆಮೆಯನ್ನು ವಶಕ್ಕೆ ಪಡೆದಿದ್ದಾರೆ.

ಸಿಐಡಿ ಅರಣ್ಯ ಘಟಕದ ಪೊಲೀಸ್ ಉಪ ಮಹಾನಿರೀಕ್ಷಕಿ ಜಿ.ಸಂಗೀತಾ, ಮಡಿಕೇರಿ ಸಿಐಡಿ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕ ಪವನ್ ನೆಜ್ಜೂರು ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮಡಿಕೇರಿ ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸ್ ಉಪನಿರೀಕ್ಷಕ ಶಿವಶಂಕರ್ ಸಿಬ್ಬಂದಿ ಉಮೇಶ್ ಎನ್.ಕೆ, ಶನಂತ ಕೆ.ಪಿ, ದಿವ್ಯಶ್ರೀ ಮತ್ತು ಎಂ.ಸ್ವಾಮಿ. ಪಾಲ್ಗೊಂಡಿದ್ದರು.

ಗುಂಡ್ಲುಪೇಟೆಯಲ್ಲಿ ವೈಭವದ ಬಸವ ಜಯಂತಿ ಉತ್ಸವ

• ಸಾವಿರಾರು ಮಂದಿ ಭಾಗಿ, ಅದ್ದೂರಿ ಮೆರವಣಿಗೆ • ರಾರಾಜಿಸಿದ ಬಸವೇಶ್ವರರು, ಸಿದ್ದಗಂಗಾ ಶಿವಕುಮಾರರ ಬೃಹತ್ ಕಟೌಟ್



ಗುಂಡ್ಲುಪೇಟೆಯಲ್ಲಿ ಬುಧವಾರ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಠಾಧೀಶರು, ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಇತರರು ಪುಷ್ಪಾರ್ಚನೆ ಮೂಲಕ ಚಾಲನೆ ನೀಡಿದರು.

ಗುಂಡ್ಲುಪೇಟೆ, ಜೂ.17 (ಸೋಮ್.ಜಿ) ಪಟ್ಟಣದಲ್ಲಿ ಬುಧವಾರ 'ಗುಂಡ್ಲುಪೇಟೆ ಬಸವ ಜಯಂತಿ ಉತ್ಸವ 2026' ಸಾವಿರಾರು ಬಸವ ಭಕ್ತರ ಸಡಗರ, ಸಂಭ್ರಮದೊಂದಿಗೆ ಅದ್ದೂರಿಯಾಗಿ ನೆರವೇರಿತು.

ಅಖಿಲ ವೀರಶೈವ–ಲಿಂಗಾಯತ ಮಹಾಸಭಾ ತಾಲೂಕು ಮತ್ತು ಯುವ ಘಟಕ, ವಿವಿಧ ವೀರಶೈವ ಲಿಂಗಾಯತ ಸಂಘಟನೆಗಳ ವತಿಯಿಂದ ಹಮ್ಮಿಕೊಂಡಿದ್ದ ಗುಂಡ್ಲುಪೇಟೆ ಬಸವ ಜಯಂತಿ ಉತ್ಸವ 2026 ಹಿನ್ನೆಲೆಯಲ್ಲಿ ಪಟ್ಟಣದ ಮೂಲಕ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 766 ಇತರೆ ಸಂಪರ್ಕ ರಸ್ತೆಗಳಲ್ಲಿ ಬಸವೇಶ್ವರ ಭಾವಚಿತ್ರವುಳ್ಳ ಮಹಾದ್ವಾರ ಮತ್ತು ಸ್ವಾಗತ ಕಮಾನು ನಿರ್ಮಿಸಲಾಗಿತ್ತು. ರಸ್ತೆ ವಿಭಜಕಗಳಿಗೆ ಕೇಸರಿ ತೋರಣ ಮತ್ತು ಬಸವೇಶ್ವರ ದೊಡ್ಡ ಕಟೌಟ್‌ಗಳನ್ನು ಕಟ್ಟಲಾಗಿತ್ತು. ಆಯಕಟ್ಟಿನ ಸ್ಥಳಗಳಲ್ಲಿ ಬಸವೇಶ್ವರರು ಮತ್ತು ಸಿದ್ದಗಂಗಾ ಶಿವಕುಮಾರಸ್ವಾಮೀಜಿಯವರ ದೀಪಾಲಂಕಾರದ ಕಟೌಟ್‌ಗಳನ್ನು ಅಳವಡಿಸಲಾಗಿತ್ತು. ಪ್ರಮುಖ ರಸ್ತೆಗಳಲ್ಲಿ ಕಂಗೊಳಿಸುವ ಸಾಲು ವಿದ್ಯುತ್ ದೀಪಗಳನ್ನು ಹಾಕಲಾಗಿತ್ತು.

ಹರಿದು ಬಂದ ಜನ ಸಾಗರ: ಗುಂಡ್ಲುಪೇಟೆ ಬಸವ ಜಯಂತಿ ಉತ್ಸವ 2026ದ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿತ್ತು. ಗ್ರಾಮ ಮಟ್ಟದಲ್ಲೂ ಮನೆ ಮನೆಗೂ ಕರ ಪತ್ರಗಳನ್ನು ಹಂಚಲಾಗಿತ್ತು. ಪಕ್ಷಾತೀತ ಆಚರಣೆ ಹಿನ್ನೆಲೆಯಲ್ಲಿ ತಾಲೂಕಿನ ಎಲ್ಲಾ ಗ್ರಾಮಗಳಿಂದ ಬಸವ ಭಕ್ತರು ಸಾವಿರ ಸಂಖ್ಯೆಯಲ್ಲಿ ಆಗಮಿಸಿದ್ದರು. ಹೀಗಾಗಿ ಪಟ್ಟಣದಲ್ಲಿ ಎತ್ತ ನೋಡಿದರೂ ಜನವೋ ಜನ ಎಂಬಂತೆ ಇತ್ತು.

ಪ್ರತಿಭಾ ಪುರಸ್ಕಾರ: ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು ಆವರಣದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಅಂತರ ರಾಷ್ಟ್ರೀಯ ಪ್ರಿಸ್ಟಿ ಕ್ರೀಡಾ ಸ್ಪರ್ಧಿ ಸಂಧ್ಯಾರನ್ನು ಸನ್ಮಾನಿಸಲಾಯಿತು.

ಮೆರವಣಿಗೆಗೆ ಚಾಲನೆ: ತಾಲೂಕಿನ ವಿವಿಧ ಮಠಗಳ ಹರಗುರು ಚರಮೂರ್ತಿಗಳು, ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್ ಮತ್ತು ಮಾಜಿ ಶಾಸಕ ಸಿ.ಎಸ್.ನಿರಂಜನ್‌ಕುಮಾರ್, ಜನಪ್ರತಿನಿಧಿಗಳು, ವಿವಿಧ ಸಂಘ, ಸಂಸ್ಥೆಗಳ ಪದಾಧಿಕಾರಿಗಳು ಸಾಮೂಹಿಕವಾಗಿ ಕೃತಕ ಬೆಳ್ಳಿ ಅಲಂಕೃತ ಸಾರೋಟಿನಲ್ಲಿ ಇರಿಸಿದ್ದ ಶ್ರೀ ಬಸವೇಶ್ವರ ಪುತ್ಥಳಿಗೆ ಮತ್ತು ಅಶ್ವರೂಢ ಬಸವೇಶ್ವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಅಧಿಕೃತ ಚಾಲನೆ ನೀಡಿದರು.

ದೇವರ ಬಸವ, ಅಲಂಕೃತಗೊಂಡ ಹಳ್ಳಿಕಾರ್ ಜೋಡೆತ್ತುಗಳು, ನಂದಿಧ್ವಜ, ವೀರಭದ್ರ ಕುಣಿತ, ಡೊಳ್ಳು ಕುಣಿತ, ಕೇರಳದ ಚಂಡೆ ಮೇಳ, ನಗಾರಿ, ಮಂಗಳವಾದ್ಯ, ಕಂಸಾಳೆ ಇತರೆ ಕಲಾತಂಡಗಳೊಂದಿಗೆ ಮೆರವಣಿಗೆ ಪಟ್ಟಣದ ಬೀದಿಗಳಲ್ಲಿ ಸಾಗಿತು.

ಡಿಜೆ ತಾಳಕ್ಕೆ ಕುಣಿದು ಕುಪ್ಪಳಿಸಿದ ಯುವ ಸಮುದಾಯ: ಬಸವೇಶ್ವರ ಭಾವಚಿತ್ರ ಮೆರವಣಿಗೆ ಮುಂದೆ ಸಾಗಿದ ಡಿಜೆ ವಾಹನದ ಮೂಲಕ ಪ್ರಸಾರ ಮಾಡಿದ ಚಲನ ಚಿತ್ರ ಗೀತೆಗಳ ತಾಳಕ್ಕೆ ಯುವ ಸಮುದಾಯ ಕುಣಿದು ಕುಪ್ಪಳಿಸಿದರು. ಪಟಾಕಿ ಸಿಡಿಸಿ, ಬಣ್ಣದ ಪೇಪರ್ ತುಣುಕುಗಳು ಸಿಂಚನ ಮೆರವಣಿಗೆಗೆ ರಂಗು ತಂದಿತು. ಮೆರವಣಿಗೆಯಲ್ಲಿ ಸಾಗುತ್ತಿದ್ದವರಿಗೆ ಅಂಗಡಿ ಬೀದಿಯಲ್ಲಿ ವ್ಯಾಪಾರಿಗಳು ಮಜ್ಜಿಗೆ, ನೀರು ವಿತರಣೆ ಮಾಡಿದರು.

ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಎಎಸ್‌ಪಿ ಶಶಿಧರ್, ಡಿಎಸ್‌ಪಿ ಸ್ನೇಹರಾಜ್ ನೇತೃತ್ವದಲ್ಲಿ ಪೊಲೀಸರು ಬಂದೋಬಸ್ತ್ ಆಯೋಜಿಸಿದ್ದರು. ಮಳೆ ಸಿಂಚನದ ನಡುವೆ ಬೆಳಗ್ಗೆ 11 ಗಂಟೆ ವೇಳೆಗೆ ಪ್ರಾರಂಭವಾದ ಮೆರವಣಿಗೆ ಸಂಜೆತನಕ ನಡೆಯಿತು

ಪ್ರಸಾದ ವಿನಿಯೋಗ: ಗುಂಡ್ಲುಪೇಟೆ ಬಸವ ಜಯಂತಿ ಉತ್ಸವ 2026 ಕ್ಕೆ ಆಗಮಿಸಿದ್ದ ಬಸವ ಭಕ್ತರಿಗೆ ಪಟ್ಟಣದ ಸೋಮೇಶ್ವರ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಸ್ವಸಹಾಯ ಪದ್ಧತಿಯಲ್ಲಿ ಭಕ್ತರು ಸಾವಧಾನದಿಂದ ಪ್ರಸಾದ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಎಚ್.ಎಂ. ಗಣೇಶ್‌ಪ್ರಸಾದ್, ಮಾಜಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರನಂದೀಶ್, ತಾಲೂಕು ಘಟಕದ ಅಧ್ಯಕ್ಷ ಕೊಡಸೋಗೆ ಶಿವಪ್ರಸಾದ್(ರಾಜು), ಮಾಜಿ ಅಧ್ಯಕ್ಷರಾದ ಎಚ್.ಎಸ್.ನಂಜಪ್ಪ, ಕಮರಹಳ್ಳಿರವಿ, ಯುವ ಘಟಕದ ರಾಜ್ಯ ಕಾರ್ಯದರ್ಶಿ ಹಂಗಳಪ್ರಣಯ್, ತಾಲೂಕು ಯುವ ಘಟಕದ ಅಧ್ಯಕ್ಷ ಗುರುಪ್ರಸಾದ್ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಮತ್ತು ತಾಲೂಕು ಸಮಿತಿ, ವೀರಶೈವ ಲಿಂಗಾಯತ ಸಂಘ, ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಗ್ರೈಂಡರ್‌ನಿಂದ ವಿದ್ಯುತ್ ಪ್ರವಹಿಸಿ ಮಗು ಸಾವು

ಗುಂಡ್ಲುಪೇಟೆ: ಗ್ರೈಂಡರ್‌ನಿಂದ ಪ್ರವಹಿಸಿದ ವಿದ್ಯುತ್ ಮಗುವನ್ನು ಬಲಿ ಪಡೆದ ಘಟನೆ ತಾಲೂಕಿನ ಕಲ್ಲಿಗೌಡನಹಳ್ಳಿಯಲ್ಲಿ ನಡೆದಿದೆ. ಎರಡು ನಿಮಿಷದ ಅಂತರದಲ್ಲಿ ಹೆತ್ತವರ ಮುಂದೆ ಹಾಡುತ್ತ ಕುಣಿಯುತ್ತಿದ್ದ ಮಗು ಉಸಿರು ಚೆಲ್ಲಿದ್ದು ಇಡೀ ಗ್ರಾಮವನ್ನೇ ಕಣ್ಣೀರಲ್ಲಿ ಮುಳುಗಿಸಿದೆ.



ಗ್ರಾಮದ ಆನಂದ್ ಹಾಗೂ ಪುಟ್ಟಮ್ಮ ದಂಪತಿಯ ಅದ್ವಿತ(4) ಇಡೀ ಕುಟುಂಬವನ್ನು ಅಗಲಿದ್ದು ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ.

ಘಟನಾ ವಿವರ: ಮಂಗಳವಾರ ಸಂಜೆ ತಾಯಿ ಪುಟ್ಟಮ್ಮ ಅಕ್ಕಿಹಿಟ್ಟು ರುಬ್ಬುತ್ತಿದ್ದ ವೇಳೆ ನೀರು ತರಲು ಹೊರಹೋಗಿದ್ದರು ಎನ್ನಲಾಗಿದೆ ಆದರೆ ಪಕ್ಕದ ಮನೆಯಲ್ಲಿ ಆಟವಾಡುತ್ತಿದ್ದ ಪುಟ್ಟ ಕಂದಮ್ಮ ಮನೆಗೆ ವಾಪಾಸ್ಸಾಗಿದೆ. ಚಾಲ್ತಿಯಲ್ಲಿದ್ದ ಗ್ರೈಂಡರ್ ಬಳಿ ಬಂದು ಕುತೂಹಲದಿಂದ ಕೈ ಹಾಕಿದ್ದೆ ತಡ ವಿದ್ಯುತ್ ಪ್ರವಹಿಸಿ ಸ್ಥಳದಲ್ಲಿಯೇ ಅಸುನೀಗಿದೆ.

ಇಡೀ ಗ್ರಾಮವೇ ಶೋಕಸಾಗರದಲ್ಲಿ ಮುಳುಗಿದ್ದು ಮಗು ಕಳೆದುಕೊಂಡ ತಂದೆ ತಾಯಿ ಅವರ ಪೋಷಕರನ್ನು ಸಂತೈಸುವುದಾದರು ಹೇಗೆ ಎಂದು ಸ್ಥಳೀಯರು ಮರುಗಿದ್ದಾರೆ. ಈ ಕುರಿತು ಯಾವುದೇ ಪ್ರಕರಣ ದಾಖಲಾಗಿಲ್ಲ.

ಚಾಮರಾಜನಗರದಲ್ಲಿ ಪಿಓಪಿ ಗಣೇಶ ವಿಗ್ರಹ ಮಾರಾಟಗಾರರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಪ್ರತಿಭಟನೆ

ಚಾಮರಾಜನಗರ: ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನಲ್ಲಿ ಪಿಓಪಿ ಗಣೇಶ ವಿಗ್ರಹಗಳ ಅಕ್ರಮ ತಯಾರಿಕೆ, ಸಾಗಾಟ, ಮಾರಾಟವನ್ನು ಸಂಪೂರ್ಣ ತಡೆಗಟ್ಟಲು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿ ಮಣ್ಣಿನ ಗೌರಿ ಗಣೇಶ ವಿಗ್ರಹ ತಯಾರಕರ ಮತ್ತು ಮಾರಾಟಗಾರರ ಸಂಘದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.



ಪಿಓಪಿ ಗಣೇಶ ವಿಗ್ರಹಗಳ ಅಕ್ರಮ ತಯಾರಿಕೆ ವಿರೋಧಿಸಿ ಪ್ರತಿಭಟನೆ ನಡೆಯಿತು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಸಂಘದ ಅಧ್ಯಕ್ಷ ಶಿವಕುಮಾರ್ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ಉಪ ತಹಸೀಲ್ದಾರ್ ರಂಗರಾಜ್ ಅವರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಶಿವಕುಮಾರ್ ಮಾತನಾಡಿ, ಪಿಓಪಿ ಗಣೇಶ ವಿಗ್ರಹ ತಯಾರಿಸುವವರು, ಹೊರಜಿಲ್ಲೆಗಳಿಂದ ತಂದು ಮಾರಾಟ ಮಾಡುವವರು ಹಾಗೂ ಮಾರಾಟಕ್ಕೆ ಸಹಕರಿಸುವವರ ವಿರುದ್ಧ ಅತ್ಯಂತ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಪೊಲೀಸ್ ಇಲಾಖೆ, ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ತುರ್ತು ನಿರ್ದೇಶನ ನೀಡಬೇಕು. ಜಿಲ್ಲಾ ಮಟ್ಟದಲ್ಲಿ 24x7 ಏಕೀಕೃತ ಸಹಾಯವಾಣಿ ಆರಂಭಿಸಿ, ಸಾರ್ವಜನಿಕರು ಎಲ್ಲಿಂದಲಾದರೂ ಪಿಓಪಿ ವಿಗ್ರಹಗಳ ತಯಾರಿಕೆ, ಸಾಗಾಟ ಹಾಗೂ ಮಾರಾಟದ ಬಗ್ಗೆ ಮಾಹಿತಿ ನೀಡಲು ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು

ದೂರು ಬಂದ ತಕ್ಷಣ ಸಂಬಂಧಿಸಿದ ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ತೆರಳಿ ತಕ್ಷಣ ಕ್ರಮ ಕೈಗೊಳ್ಳುವ ವ್ಯವಸ್ಥೆ ರೂಪಿಸಬೇಕು,. ಪಿಓಪಿ ಹಾಗೂ ಮಣ್ಣಿನ ವಿಗ್ರಹಗಳ ವ್ಯತ್ಯಾಸವನ್ನು ಗುರುತಿಸಲು ಅನುಭವ ಹೊಂದಿರುವ ಮಣ್ಣಿನ ಗಣೇಶ ಕಲಾವಿದರು, ತಾಂತ್ರಿಕ ತಜ್ಞರು ಹಾಗೂ ಪರಿಸರ ತಜ್ಞರನ್ನು ಒಳಗೊಂಡ ವಿಶೇಷ ಪರಿಶೀಲನಾ ತಂಡಗಳನ್ನು ರಚಿಸಬೇಕು, ಜಿಲೆಯಲ್ಲಿ ಶೀಘ್ರವಾಗಿ ಮಣ್ಣಿನ ಗಣೇಶ ವಿಗ್ರಹ ತಯಾರಕರ ಸಭೆ ನಡೆಸಿ, ನಿಯಮಗಳು, ಕಾನೂನು ಕ್ರಮಗಳು ಹಾಗೂ ಪರಿಸರ ಸಂರಕ್ಷಣೆಯ ಕುರಿತು ಸಮಗ್ರ ಚರ್ಚೆ ನಡೆಸಿ ಎಲ್ಲರಿಗೂ ಅಗತ್ಯ ಮಾರ್ಗದರ್ಶನ ಹಾಗೂ ಎಚ್ಚರಿಕೆ ನೀಡಬೇಕು ಎಂದು ಆಗ್ರಹಿಸಿದರು.

ಪಿಓಪಿ ವಿಗ್ರಹಗಳ ಆನ್‌ಲೈನ್ ಜಾಹೀರಾತು, ಸಾಮಾಜಿಕ ಜಾಲತಾಣಗಳ ಪ್ರಚಾರ ಹಾಗೂ ಮಾರಾಟದ ವಿರುದ್ಧವೂ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು, ಸಾರ್ವಜನಿಕ ಗಣೇಶೋತ್ಸವ ಮಂಡಳಿಗಳಿಗೆ ಅನುಮತಿ ನೀಡುವಾಗ "ಮಣ್ಣಿನ ಗಣೇಶ ವಿಗ್ರಹ ಮಾತ್ರ ಪ್ರತಿಷ್ಠಾಪಿಸಬೇಕು" ಎಂಬ ಷರತ್ತನ್ನು ಕಡ್ಡಾಯಗೊಳಿಸಬೇಕು. ಮಣ್ಣಿನ ಗಣಪತಿ ಮತ್ತು ಪೇಪರ್ ಗಣಪತಿಯನ್ನು ಮಾರಾಟ ಮಾಡಲು ಹಾಗೂ ಕೂರಿಸಲು ಅವಕಾಶ ಮಾಡಿ ಕೊಡಬೇಕು ಎಂದು ಒತ್ತಾಯಿಸಿದರು

ಪ್ರತಿಭಟನೆಯಲ್ಲಿ ಮಣ್ಣಿನ ಗೌರಿಗಣೇಶ ವಿಗ್ರಹ ತಯಾರಕರ ಮತ್ತು ಮಾರಾಟಗಾರರ ಸಂಘದ ಉಪಾಧ್ಯಕ್ಷ ವಿ.ನಿತ್ಯ, ಪ್ರಧಾನ ಕಾರ್ಯದರ್ಶಿ ಡಿ.ವಿನಯ್ ಕುಮಾರ್, ಸದಸ್ಯರಾದ ಸಿದ್ದಪ್ಪಾಜಿ, ನಟರಾಜು, ಮಂಜುನಾಥ್, ಪುಟ್ಟಸ್ವಾಮಿಶೆಟ್ಟಿ, ಬಸವಣ್ಣ, ಸೋಮಣ್ಣ, ಮಹೇಶ್, ಅವಿನಾಶ್, ರಂಗಸ್ವಾಮಿ, ನಾಗರಾಜು, ವಿ.ಎಂ.ರವಿಕುಮಾರ್, ಮಮತ, ಗೌರಮ್ಮ, ಆಶಾ, ಬೇಬಿ, ಭಾಗ್ಯ ಇತರರು ಭಾಗವಹಿಸಿದ್ದರು.

ಮಸಣಾಪುರದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಪ್ರಕರಣ

ನಾಳೆ ಚಾ.ನಗರ ಉಪ್ಪಾರ ಸಮಾಜದಿಂದ ಪ್ರತಿಭಟನೆ

ಚಾಮರಾಜನಗರ: ತಾಲೂಕಿನ ಮಸಣಾಪುರ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಪ್ರಕರಣ ಸಂಬಂಧ ಚಂದ್ರು ಎಂಬಾತನಿಗೆ ಮಾರಣಾಂತಿಕ ಹಲ್ಲೆ ನಡೆಸಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಜೂ. 19ರಂದು ನಗರದಲ್ಲಿ ಉಪ್ಪಾರ ಜನಾಂಗದಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಉಪ್ಪಾರ ಎಸ್‌ಟಿ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಬಾಗಳಿ ರೇವಣ್ಣ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಅಂಬೇಡ್ಕರ್ ಭಾವಚಿತ್ರಕ್ಕೆ ಚಂದ್ರು ಎಂಬಾತ ಅಪಮಾನ ಮಾಡಿದ್ದರೆ ತನಿಖೆ ಮಾಡಿ ಕಾನೂನಿನಡಿ ಶಿಕ್ಷೆ ಕೊಡಿಸಬೇಕು. ಆದರೆ, ಏಕಾಏಕಿ ಕಂಬಕ್ಕೆ ಕಟ್ಟಿ, ಮನಸೋ ಇಚ್ಛೆ ಹಲ್ಲೆ ನಡೆಸಿರುವುದು ಖಂಡನೀಯವಾಗಿದೆ. ಹಲ್ಲೆ ನಡೆಸಿರುವವರ ವಿರುದ್ಧ ಪೊಲೀಸರು ಕೊಲೆ ಯತ್ನ ಪ್ರಕರಣ ದಾಖಲಿಸಿಕೊಂಡು ಕ್ರಮವಹಿಸಬೇಕು. ಜೊತೆಗೆ ಹಲ್ಲೆ ಮಾಡುವುದನ್ನು ತಪ್ಪಿಸದೇ ನಿರ್ಲಕ್ಷ್ಯ ಮಾಡಿರುವ ಯಳಂದೂರು ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ನನ್ನು ಅಮಾನತುಪಡಿಸಬೇಕು ಎಂದು ಆಗ್ರಹಿಸಿದರು.

ನಾಳೆ ದಲಿತ ಸಮುದಾಯದಿಂದ ಪ್ರತಿಭಟನೆ

ಚಾಮರಾಜನಗರ: ತಾಲೂಕಿನ ಮಸಣಾಪುರ ಗ್ರಾಮದಲ್ಲಿ ಇತ್ತೀಚಿಗೆ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿರುವ ಕಿಡಿಗೇಡಿ ಚಂದ್ರು ಬಂಧನದ ಜೊತೆಗೆ ಆತನ ಹಿಂದಿರುವ ಆರೋಪಿಗಳನ್ನು ಪತ್ತೆ ಹಚ್ಚಿ ಬಂಧಿಸಬೇಕು ಎಂದು ಒತ್ತಾಯಿಸಿ ದಲಿತ ಬಲಗೈ ಸಮುದಾಯವು ಜೂ.19 ರಂದು ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಿದೆ ಎಂದು ಜಿ.ಪಂ. ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ನಗರದ ಅಂಬೇಡ್ಕರ್ ಭವನದಿಂದ ಜಿಲ್ಲಾಡಳಿತ ಭವನದವರಗೆ ಬೃಹತ್ ಮೆರವಣಿಗೆ ಸಾಗಲಿದೆ. ಈ ಪ್ರತಿಭಟನೆಯಲ್ಲಿ ಎಲ್ಲಾ ಸಮುದಾಯದ ಮುಖಂಡರು ಭಾಗವಹಿಸಿ ಯಶಸ್ವಿಗೊಳಿಸಿಕೊಡಬೇಕು ಎಂದು ಮನವಿ ಮಾಡಿದರು. ನಲ್ಲೂರು ಸೋಮೇಶ್ವರ್, ರವಿ ಕುಮಾರ್, ನಾಗರಾಜು, ರಂಗಸ್ವಾಮಿ, ರೇವಣ್ಣ, ನಂಜಯ್ಯ, ಮಂಜುನಾಥ್ ಸುದ್ದಿಗೋಷ್ಠಿಯಲ್ಲಿದ್ದರು

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟ್ ಮಾರಾಟಕ್ಕಿದೆ
30x40 11 "A"
ಖಾತಾ ಸೊಸೈಟಿ ಸೈಟು ಮಾರಾಟಕ್ಕಿದೆ 20 ಲಕ್ಷಗಳು, ನಂಜುಂಡೇಶ್ವರನಗರ, ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

HOUSE FOR LEASE
3 BHK house with Solar, Geyser for lease
17.50 lakhs at H block Ramakrishnanagar, Mysore
9448601689
9535060896

Commercial Building for Sale
2.5 yrs old Single Floor Commercial Building for Sale,53x40, W/S Corner, 50 ft Road at NR Mohalla, Rajputh Road, Mysore, (Close to Fountain Circle)
8660105902

ಕೆಲಸಕ್ಕೆ ಬೇಕಾಗಿದ್ದಾರೆ
ನೈರುತಿ ಚಿಟ್ ಫಂಡ್ ಪ್ರೈವೇಟ್ ಲಿ.,
ವಯೋಮಿತಿ: 21–50 ವರ್ಷ ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ/ಪಿಯುಸಿ/ಡಿಗ್ರಿ ಚಿಟ್‌ಫಂಡ್‌ನಲ್ಲಿ ಅನುಭವ ಉಳ್ಳವರಿಗೆ ಮೊದಲ ಆದ್ಯತೆ. ಸಂಪರ್ಕಿಸಿ:
9611395012 / 6366286462

MUDA APPROVED
SITE FOR SALE
IPS SRINIVASA NAGAR (Police Layout) 40'x60' West Face Site.
Call : 9886048471

ಬಾಡಿಗೆಗಿದೆ
ವಕೀಲರ ಕಛೇರಿಗೆ ಅನುಕೂಲಕರವಾದ ಸ್ಥಳ, ಅಗ್ರಹಾರದಲ್ಲಿ ಬಾಡಿಗೆಗಿದೆ
9343441210

NSE Nypunya School of Excellence MYSURU ದಟ್ಟಗಳ್ಳಿ ಮತ್ತು ಆರ್.ಟಿ. ನಗರ
ಬೇಕಾಗಿದ್ದಾರೆ
ಶಾಲೆಯಲ್ಲಿ ಕೆಲಸ ಮಾಡಲು ಮಹಿಳಾ ಆಯಾ ಬೇಕಾಗಿದ್ದಾರೆ. ಶಾಲಾ ವಾಹನ ಚಲಾಯಿಸಲು ಹೆವಿ ಲೈಸೆನ್ಸ್ ಉಳ್ಳ ಅನುಭವಿ ಡ್ರೈವರ್ ಬೇಕಾಗಿದ್ದಾರೆ. ಶಾಲೆಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
ಆಸಕ್ತರು ಕೆಳಗಿನ ಸಂಖ್ಯೆಗೆ ಸಂಪರ್ಕಿಸಿ :
96069 59451

ಬೇಕಾಗಿದ್ದಾರೆ
Showroomನಲ್ಲಿ (Sales) ಕೆಲಸ ಮಾಡಲು ಹುಡುಗ ಮತ್ತು ಹುಡುಗಿಯರು ಬೇಕಾಗಿದ್ದಾರೆ
8197947788

ತಕ್ಷಣ ಬೇಕಾಗಿದ್ದಾರೆ
1) ಅನುಭವವುಳ್ಳ ಅಕೌಂಟೆಂಟ್‌ಗಳು
2) ಡಿಪ್ಲೋಮಾ ಹುಡುಗರು
3) C.N.C ಮೆಷಿನ್ ಆಪರೇಟರ್‌ಗಳು
4) ವೆಲ್ಡರ್‌ಗಳು, ಟೈಲರುಗಳು ಹೆಲ್ಪರ್ ಕೆಲಸಕ್ಕೆ ಹುಡುಗರು ಹುಡುಗಿಯರು, ಡ್ರೈವರುಗಳು, ಡ್ರೈವರ್ Cum ಮಾರ್ಕೇಟಿಂಗ್.
8105249880
7795285485


ಸ್ಕೂಲ್ ಯೂನಿಫಾರಂ ಹೋಲ್‌ಸೇಲ್ ಬೆಲೆಯಲ್ಲಿ ಷೂಗಳು, ಸಾಕ್ಸ್ ಬ್ಯಾಗ್‌ಗಳು
1 ಜೊತೆ ಷೂಕೊಂಡಲ್ಲಿ 1 ಜೊತೆ ಸಾಕ್ಸ್ ಉಚಿತ
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

ಎಸ್.ಬಿ.ಜಿ ಪದವಿ ಪೂರ್ವ ಕಾಲೇಜು
ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಡ್ರೈವರ್ಸ್ ಹಾಗೂ ಸೆಕ್ಯೂರಿಟಿ ಗಾರ್ಡ್ಸ್,
ಸಂಪರ್ಕಿಸಿ: 9742474243

TO LET
Ground Floor, 2300 sq.ft., Gaganachumbi Road, Kuvempunagar, Mysore.
SUITABLE FOR : Corporate Offices, Quick Commerce Stores, Banks, Restaurant, etc.,
Call : 88614 84737

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಅನುಭವವುಳ್ಳ ನಾನ್‌ವೆಜ್ ಅಡಿಗೆ ಭಟ್ಟರು ಬೇಕಾಗಿದ್ದಾರೆ (ಮೈಸೂರು) ಸಂಪರ್ಕಿಸಿ
9449738155
9945321020

ಬೇಕಾಗಿದ್ದಾರೆ
ಮೈಸೂರಿನ ಕುವೆಂಪುನಗರದಲ್ಲಿರುವ ಜೆ.ಎಸ್.ಎಸ್ ಕಾನೂನು ಕಾಲೇಜು ಹಾಗೂ ಸೆಂಟ್ ಜೋಸೆಫ್ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಲು ಅನುಭವವುಳ್ಳ ಸ್ವಚ್ಛತಾ ಕೆಲಸಗಾರರು (House keeper) ಪುರುಷರಿಗೆ ಆದ್ಯತೆ. ವಾರದ ರಜೆ, ಉತ್ತಮ ವೇತನ ಹಾಗೂ ಇಎಸ್‌ಐ ಮತ್ತು ಪಿಎಫ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಕರ್ನಾಟಕ ಸೆಕ್ಯೂರಿಟಿ ಏಜೆನ್ಸಿ, ನಂ 513, ಲಕ್ಷ್ಮಿ ಚಿತ್ರಮಂದಿರ ಎದುರು ರಸ್ತೆ, ಕೆ.ಆರ್.ಮೊಹಲ್ಲ ಮೈಸೂರು–24
0821-4247385
9480420666

ಬೇಕಾಗಿದ್ದಾರೆ
ಕೊರಿಯರ್ ಸಂಸ್ಥೆಯಲ್ಲಿ ಆಫೀಸ್ ಕೆಲಸಕ್ಕೆ ವಿಜಯನಗರ, ಎನ್.ಆರ್.ಮೊಹಲ್ಲಾ ಶಾಖೆಗಳಲ್ಲಿ ಡೇಟಾ ಎಂಟ್ರಿ ಬರುವ ಹುಡುಗಿಯರು ಬೇಕಾಗಿದ್ದಾರೆ. ಹತ್ತಿರದಲ್ಲಿ ಇದ್ದವರಿಗೆ ಮೊದಲ ಆದ್ಯತೆ, ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು. ಸಂಪರ್ಕಿಸಿ :
9449871790

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೊಮೋ ಇನ್ ಹೆಲ್ತ್ ಕೇರ್ (DMLT) ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರಿಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
9916908454

ಬೋಳು ತಲೆಯ ಸಮಸ್ಯೆಯೇ?

ಕಿಮೊಥೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU: 9591311161 MANGALORE: 9901910161

ಬೇಕಾಗಿದ್ದಾರೆ
ಮೈಸೂರಿನ ಇಲವಾಲದಲ್ಲಿ 3000 ಚದರ ಅಡಿ ವಿಸ್ತೀರ್ಣದ ಶೆಡ್ ಬಾಡಿಗೆಗೆ ಲಭ್ಯವಿದೆ. ಸಂಪರ್ಕಿಸಿ
7899381450

OLD AGE HOME
We offer nursing and Medical Services to Bedridden and Senior Citizens with Veg. Food and Accomodation at Our Centre in Gokulam Mysore at a Reasonable Cost
9880102700

ಸದ್ಗುರು ಜ್ಯೋತಿಷ್ಯಂ
ಮದುವೆ ವಿಳಂಬ, ಹಣಕಾಸಿನ ತೊಂದರೆ, ವ್ಯಾಪಾರದಲ್ಲ ನಷ್ಟ, ಸಾಲಬಾಧೆ, ಗಂಡ-ಹೆಂಡತಿ ಜಗಳ, ಶತ್ರುಗಳ ಕಾಟ ಇನ್ನೂ ಎಲ್ಲಾ ಸಮಸ್ಯೆಗಳಿಗೆ ಸಲಹೆ ಮತ್ತು ಪರಿಹಾರ
ಇಂದೇ ಸಂಪರ್ಕಿಸಿ ಡಾ. ಗುರೂಜಿ
6361740552
9449408551

ಬೇಕಾಗಿದ್ದಾರೆ
ದಿನಸಿ ಅಂಗಡಿಗೆ ಹುಡುಗರು –2
23, 3ನೇ ಹಂತ, ಇಂಡಸ್ಟ್ರಿಯಲ್ ಸಬರ್ಬ್–570008, ಮೈಸೂರು,
9986756866

ಬೇಕಾಗಿದ್ದಾರೆ
ಬದನಗುಪ್ಪೆ ಕೈಗಾರಿಕಾ ಪ್ರದೇಶದಲ್ಲಿನ ಕಂಪನಿಯೊಂದರಲ್ಲಿ ಸೆಕ್ಯೂರಿಟಿ ಕೆಲಸ ಮಾಡಲು ಅನುಭವ ಇರುವ ಪುರುಷ ಅಭ್ಯರ್ಥಿಗಳಿಗೆ ತಕ್ಷಣ ಬೇಕಾಗಿದ್ದಾರೆ. ಆಕರ್ಷಕ 20,000/– ಸಾವಿರ ಸಂಬಳ, ESIC + PF ಹಾಗೂ ಕ್ಯಾಂಟೀನ್ ಸೌಲಭ್ಯ ಇರುತ್ತದೆ. (SSLC ಹಾಗೂ PUC). ತಕ್ಷಣ ಸಂಪರ್ಕಿಸಿ :
9483076815
7019378337

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

WANTED TEACHERS
for preschool in Bogadi Teachers (Nst or NST) Teaching assistant (any Degree) Contact :
91132 57683

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಡ್ರೈವರ್ ಬೇಕಾಗಿದ್ದಾರೆ
ಅಶೋಕ್ ಲೇ ಲ್ಯಾಂಡ್ ದೋಸ್ತ್‌ಗೆ ಡ್ರೈವರ್ ಬೇಕಾಗಿದ್ದಾರೆ.
WANTED
Driver for Ashok Leyland Dost vehicle.
Mob: 91085 68165

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 91080 48064

ತಕ್ಷಣ ಬೇಕಾಗಿದ್ದಾರೆ
ಹೆಸರಾಂತ ಬ್ರ್ಯಾಂಡೆಡ್ ಬಟ್ಟೆ ಶೋರೂಂಗಳಲ್ಲಿ ಹೌಸ್‌ಕೀಪಿಂಗ್ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ತಕ್ಷಣ ಬೇಕಾಗಿದ್ದಾರೆ. 08 ಗಂಟೆಗಳ ಕೆಲಸದ ಸಮಯ : ಆಕರ್ಷಕ 21,000/– ರೂ. ಸಂಬಳ ESI + PF ವ್ಯವಸ್ಥೆ, ಇರುತ್ತದೆ. ಮೈಸೂರಿನ ಕುವೆಂಪುನಗರ ಹಾಗೂ ವಿಜಯನಗರ ಎರಡು ಸ್ಥಳಗಳಲ್ಲಿ, ತಕ್ಷಣ ಸಂಪರ್ಕಿಸಿ
7019378337

ವೃದ್ಧಾಶ್ರಮ
ನಿಮ್ಮ ವಯಸ್ಸಾದ ವೃದ್ಧರನ್ನು ಸುಸಜ್ಜಿತವಾದ ಜಾಗದಲ್ಲಿ ಇರಿಸಲು ನಮ್ಮನ್ನು ಇಂದೇ ಸಂಪರ್ಕಿಸಿ, ಶುದ್ಧತೆ, ಶುದ್ಧ ಆಹಾರ ಮತ್ತು ಮೆಡಿಕಲ್ ಸೌಲಭ್ಯ ನಮ್ಮ ಮೊದಲ ಆದ್ಯತೆ.
9916905188

HOUSE FOR RENT
3 BHK, 1st Floor, Near Tippu Circle, N.R. Mohalla, Mysore.
(BROKERS EXCUSE)
9448734460, 9972994650

ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಂಪನಿಗೆ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಹುದ್ದೆ: ಲೋಡಿಂಗ್ ಮತ್ತು ಅನ್‌ಲೋಡಿಂಗ್. ವಯೋಮಿತಿ: 18 ರಿಂದ 45. ಸಂಬಳ: 19,766 ರಿಂದ 24,000. ಸಂಪರ್ಕಿಸಿ:
7892725603, 8971460235

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್: ಬೆಳಿಗ್ಗೆ ಮತ್ತು ರಾತ್ರಿ ಪಾಳಿಗೆ (ಮೊಗರಳ್ಳಿ, ಜೆ.ಕೆ. ಟೈರ್ಸ್, ಮೇಟಗಳ್ಳಿ, ಫಾಲ್ಕಾನ್, ಯೋಗನರಸಿಂಹಸ್ವಾಮಿ ದೇವಸ್ಥಾನ, ವಿಜಯನಗರ, ಹಿನಕಲ್, ಪಂಪ್‌ಹೌಸ್).
ESI & PF ನೊಂದಿಗೆ ಉತ್ತಮ ಸಂಬಳ.
9731663856, 9739166772

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಸುದ್ದಿ ವಾಹಿನಿಯಲ್ಲಿ ಕೆಲಸ ನಿರ್ವಹಿಸಲು ರಿಪೋರ್ಟರ್, ವಿಡಿಯೋ ಎಡಿಟರ್ ಮತ್ತು ಮಹಿಳಾ ರಿಸೆಪ್ಷನಿಸ್ಟ್ ತಕ್ಷಣ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 9738591367

SIDDESWARA TOUR & ಟ್ರಾವೆಲ್ಸ್
ಆಷಾಡ ಮಾಸದ 8 ದಿನಗಳ ಯಾತ್ರೆ
Date 19-7-2026 ರಂದು ಹೊರಡುವುದು, ವಿಡಿಯೋ ಕೋಚ್ ಬಸ್‌ನಲ್ಲಿ, ಸಂದರ್ಶಿಸುವ ಸ್ಥಳಗಳು, ಬನ್ನಾರಿ, ಈಶ, ಪಳನಿ, ಮಧುರೆ, ಕನ್ಯಾಕುಮಾರಿ, ರಾಮೇಶ್ವರ, ತಿರುಚೆಂದೂರು, ಶ್ರೀರಂಗ 9 ನವಗ್ರಹ ತಂಜಾವೂರು, ಚಿದಂಬರಂ ಓಂಶಕ್ತಿ, ಕಂಚಿ, ಗೋಲ್ಡನ್ ಟೆಂಪಲ್ ಮಹದೇಶ್ವರ ಬೆಟ್ಟ, ಸಂಪರ್ಕಿಸಿ, ರಾಜಣ್ಣ :
8296956718
9343288718

---

3 BHK Triplex House for SALE
3 Bedroom House, 30x40,Gated Community MUDA Approved, N/F, 2.5 years Old,Near Vijayanagar 4th Stage, Mysore, PRICE - 2 Cr,
Behind NPS School
8660105902

30x40 ಸೈಟು ಮಾರಾಟಕ್ಕಿದೆ
ಕೆ.ಆರ್. ವೃತ್ತದಿಂದ 8 ಕಿ.ಮೀ. ದೇವೇಗೌಡ ವೃತ್ತದಿಂದ 2.5 ಕಿಮಿ. ವಿದ್ಯಾವಿಕಾಸ್ ಕಾಲೇಜಿನಿಂದ 1.5 ಕಿ.ಮೀ. ಬನ್ನೂರು ರಸ್ತೆ, ಮೈಸೂರು
9964923399

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
6362150462, 7795749881

ತಕ್ಷಣ ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

WANTED
We need a experienced Male Housekeeping staff for our Icecream Parlour who should also assist our Chefs in preparation and supply cleaning Table Vessels etc. Please Call
8970773012

JOB VACANCY
OFFICE BOY
Panchakarma therapist
Male staff Required for ayurvedic clinic
9632020620

SITE FOR SALE
MUDA Approved, 30x40 SF Facing Vijayanagara 4th Stage attached Yureka Enclave Buyers only/Broker Excuse
8971222868
9108254742

30x30 ಮತ್ತು 30x40 ಸೈಟುಗಳು ಮಾರಾಟಕ್ಕಿದೆ
ವರುಣ ಊರಿಗೆ ಹೊಂದಿಕೊಂಡಿದೆ. ರಿಂಗ್ ರಸ್ತೆಯಿಂದ 6 ಕಿ.ಮೀ. ಕೆ.ಆರ್.ವೃತ್ತದಿಂದ 12 ಕಿ.ಮೀ. ಟಿ ನರಸೀಪುರ ರಸ್ತೆ, ಮೈಸೂರು
9964923399

S.K. CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ಹೊಸ ಮನೆ ಕಟ್ಟಬೇಕೆ ಚಿಂತೇ ಬೇಡ. Approved Plan 3D-Elivation. ಇಂಟಿರಿಯರ್ ಡಿಸೈನ್ & Work Construction ಮತ್ತು ಅಲ್ಟ್ರೇಶನ್ ಸಹಿತ ಮಾಡಿಕೊಡುತ್ತೇವೆ.
9620528490

WANTED
Marking Executive Male Candidates Education : SSLC/PUC, Attractive Salary, Mysuru.
9945858055
9036024191

SITE FOR SALE
30x40 East facing, MUDA Approval Sai Layout, Near trends apartment, Vijayanagara 4th stage, Mysore.
8073389870

FOR RENT
1 BHK HOUSE SEMI FURNISHED FOR LADIES ONLY, NEAR PRAMATHI SCHOOL, KUVEMPUNAGAR, MYSORE
8861057170

ಬೇಕಾಗಿದ್ದಾರೆ
ಅನುಭವಿ ದೋಸೆ ಭಟ್ಟರು, ಚಾಟ್ ಮತ್ತು ಚೈನೀಸ್ ಐಟಂಗಳನ್ನು ಮಾಡುವವರು, ಕೌಂಟರ್ ಸೇಲ್ಸ್, ಸರ್ವಿಸ್‌ಗೆ, ಕ್ಲೀನಿಂಗ್‌ಗೆ ಸಿಬ್ಬಂದಿ ಬೇಕಾಗಿದ್ದಾರೆ. ಉತ್ತಮ ಸಂಬಳ ಮತ್ತು ಇ.ಎಸ್.ಐ, ಪಿ.ಎಫ್ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ :
9620923923
9972245511

ತಕ್ಷಣ ಬೇಕಾಗಿದ್ದಾರೆ
ಟಿ.ನರಸೀಪುರ ರಸ್ತೆ, ಚಿಕ್ಕಳ್ಳಿ, ವರುಣ, ಅಶೋಕಪುರಂ, ಬೋಗಾದಿ, ಒಂಟಿಕೊಪ್ಪಲ್, ಕೂರ್ಗಳ್ಳಿ ಏರಿಯಾಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್, ಸೆಕ್ಯೂರಿಟಿ ಗಾರ್ಡ್ ಹಾಗೂ ಫೀಲ್ ಆಫೀಸರ್ ಬೇಕಾಗಿದ್ದಾರೆ. ESI & PF ಹಾಗೂ ವಸತಿ, ಊಟದ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ :
8660309477

ಬೇಕಾಗಿದ್ದಾರೆ
ಮೈಂಟೇನೆನ್ಸ್ ಸಿಬ್ಬಂದಿ ಬೇಕಾಗಿದ್ದಾರೆ(ಅನುಭವಿ)
1. ಎಲೆಕ್ಟ್ರಿಷಿಯನ್‌ಗಳು – 2 ಸಂಖ್ಯೆ,
2. ಪ್ಲಂಬರ್‌ಗಳು – 2 ಸಂಖ್ಯೆ
ಸಂಬಳ: 18,000 ರಿಂದ 25,000 ಇಎಸ್‌ಐ ಮತ್ತು ಪಿಎಫ್, ಆಹಾರ ಮತ್ತು ವಸತಿಯೊಂದಿಗೆ, ನೇರ ಸಂದರ್ಶನ
ದಿ ಕೋರಂ ಹೋಟೆಲ್
#2257/1, ವಿನೋಬಾ ರಸ್ತೆ, ಮೈಸೂರು – 570001
9035062106
9886166044

ತಕ್ಷಣ ಬೇಕಾಗಿದ್ದಾರೆ
ಕಡಕೊಳ, ನಂಜನಗೂಡು TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಸಂಬಳ: 19000 (26 ದಿನಗಳು, 8 ಗಂಟೆ) ವಯೋಮಿತಿ : 55 ವರ್ಷದೊಳಗೆ ESI, PF, ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620667819
9620777819

ಡ್ರೈವರುಗಳು ಬೇಕಾಗಿದ್ದಾರೆ
ಲಘು ವಾಣಿಜ್ಯ ವಾಹನಗಳು(LCV) ಹೂಟಗಳ್ಳಿ, ಮೈಸೂರು
8548880066
8970242928

ಬೇಕಾಗಿದ್ದಾರೆ
ಮೈಸೂರಿನ ಕಂಪನಿಗಳು, ಫ್ಯಾಕ್ಟರಿಗಳು ಹಾಗೂ ಖಾಸಗಿ ಬ್ಯಾಂಕ್‌ಗಳಿಗೆ ಸಿಬ್ಬಂದಿ ಬೇಕಾಗಿದ್ದಾರೆ. SSLC/PUC/ITI/Diploma/Any Degree ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ವಿದ್ಯಾರ್ಹತೆಗೆ ಅನುಗುಣವಾಗಿ ಉದ್ಯೋಗ ನೀಡಲಾಗುವುದು. ಯುವಕ ಹಾಗೂ ಯುವತಿಯರಿಗೆ ಅವಕಾಶ, ವಯೋಮಿತಿ : 18 ರಿಂದ 35 ವರ್ಷ, ಮಾಸಿಕ ವೇತನ : 18,500 ರಿಂದ 35,000, ಉಚಿತ ಊಟ ಹಾಗೂ ವಸತಿ ಸೌಲಭ್ಯ (ಅವಶ್ಯಕತೆ ಇದ್ದಲ್ಲಿ) ನೀಡಲಾಗುವುದು. ಸಂಪರ್ಕಿಸಿ :
9741819026

ಜಾಗ ಬೇಕಾಗಿದೆ
ಮೈಸೂರು ನಗರದಲ್ಲಿ ವೆಜ್ ರೆಸ್ಟೋರೆಂಟ್ ನಡೆಸಲು ಜಾಗ ಬೇಕಾಗಿದೆ. ಸಂಪರ್ಕಿಸಿ
9900661620

(40x60)
@ "Pragma Layout" Mys-Hunsur By-pass Road., near Central St. Joseph School, N.J. Hospital Road.
MUDA APPROVED
Mob: 95388-39926

WANTED TEACHERS
EVS, KANNADA, for 1 to 5th
A qualified teacher with fluency in English is a must.
JNANA GANGOTHRI CONVENT
Rajendra Nagara Mysore 570007
Walk in with originals
9113980741

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ, ಸರಸ್ವತಿಪುರಂ, ಕೆ.ಜಿ.ಕೊಪ್ಪಲ್‌ನಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ, ಸಂಬಳ : 27,000/- ESI, PF , ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819

AFFIDAVIT
SUNITHA JAIN, Residing @ D.No. 95/F-1, Gurukar Devanna Street, Fort Mohalla, Mysore-570004, have changed my name from SUNITHA RAJESH KUMAR JAIN TO SUNITHA JAIN. on my own will sworn in before Notary S.V. Nagendra, Mysore vide affidavit dtd 15-6-2026, Hence forth in all my records, deeds and in my future communication. I will called and Known as SUNITHA JAIN,
Sd/- SUNITHA JAIN

ತಕ್ಷಣ ಬೇಕಾಗಿದ್ದಾರೆ
1. ಕ್ಯಾಂಟೀನ್ ಕೆಲಸಕ್ಕೆ ಹುಡುಗರು.
2.ಆಯಾ / ಬಸ್ ಮದರ್ ಕೆಲಸಕ್ಕೆ ಮಹಿಳೆಯರು.
ಸ್ಥಳ:ಭುಗತಹಳ್ಳಿ, ಮೈಸೂರು. ಉಚಿತ ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ.
9964586817

ಬೇಕಾಗಿದ್ದಾರೆ
ಶಾಲೆಯಲ್ಲಿ ಕೆಲಸ ಮಾಡಲು ಆಯಾ ಬೇಕಾಗಿದ್ದಾರೆ
ಸ್ಥಳ : ತಿರುಮಲ ಪಬ್ಲಿಕ್ ಸ್ಕೂಲ್ ಆಲನಹಳ್ಳಿ, ಟಿ ನರಸೀಪುರ ರಸ್ತೆ ಮೈಸೂರು–28. ಸಂಪರ್ಕಿಸಿ
9148089175

ಬೇಕಾಗಿದ್ದಾರೆ
ಶಾಲೆಯ ಆಫೀಸ್ ನಲ್ಲಿ ಕೆಲಸ ಮಾಡಲು ಹೆವಿ ಡ್ರೈವಿಂಗ್ ಲೈಸೆನ್ಸ್ ಹೊಂದಿರುವ ಆಫೀಸ್ ಬಾಯ್ ಬೇಕಾಗಿದ್ದಾರೆ. ಸ್ಥಳ : ತಿರುಮಲ ಪಬ್ಲಿಕ್ ಸ್ಕೂಲ್ ಆಲನಹಳ್ಳಿ, ಟಿ.ನರಸೀಪುರ ರಸ್ತೆ ಮೈಸೂರು–28
9148089175

WANTED
Tempo Drivers For a Plywood Co Depot
Call 9731591267

KANNADA TUITION
(Tutor is available)
CBSE / ICSE / STATE 1 -10 and Spoken Kannada
MA, B.Ed, NET, KSET, TET
Qualified Home Tution, Online and offline
Mob: 8884197841

ಹೊಸ ಮನೆ ಮಾರಾಟಕ್ಕಿದೆ
20x30 (DTCP), ಉತ್ತರಕ್ಕೆ ಬಾಗಿಲು, 2 BHK, semi furnished, borewell available.
Price: 54 ಲಕ್ಷ. Slightly negotiable.
ಸ್ಥಳ: ಇಲವಾಲ, ಮೈಸೂರು
Mob: 9901453272

MUDA LAYOUT
NEW HOUSE FOR SALE
30x40, N/F
Gopal Gowda Nagar
Call: 9035460999

SITES FOR SALE
Near Vajmangala, T.Narasipura Road & Near Upkar Layout, Hunsur
Mob: 8123387555
7259348777

ಬೇಕಾಗಿದ್ದಾರೆ
ಮೈಸೂರಿನಾದ್ಯಂತ ಮನೆಯಿಂದಲೇ ಮಾಡುವ ಕೆಲಸಕ್ಕೆ ಹಾಗೂ ಕಂಪನಿ ಕೆಲಸಕ್ಕೆ ಬೇಕಾಗಿದ್ದಾರೆ, ಪಾರ್ಕಿಂಗ್ ಪಿಕಿಂಗ್, ಡೇಟಾ ಎಂಟ್ರಿ, ಅಪ್ಲಿಕೇಶನ್ ಫಿಲ್ಲಿಂಗ್, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
8951835051, 6361167510

ಕಾರು ಮಾರಾಟಕ್ಕಿದೆ
TATA INDIGO ECS (2015)
CIAZ ZDI (2016)
ಹಳದಿ ಬೋರ್ಡ್ (ಟ್ಯಾಕ್ಸಿ)
SINGLE OWNER, MYSORE RTO (09). Contact:
Mob: 94481 50408

Godown for Rent
23x40 sq.ft. G/F commercial purpose.
Bogadi Village.
9481815553, 9035250232

ಮೊಬೈಲ್‌ನಲ್ಲಿ ಕೆಲಸ
ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

IMMEDIATE REQUIREMENT
Data Entry Operator with MS-Office (Kannada and English Typing)
Accountant (Talley ERP 9)
Auditor (Expert in MS-Office)
(Minimum 2 Year Experience)
(Attractive Salary with ESI and EPF)
0821-2543527
0821-4148888
https://maps.app.goo.gl/1v3kQyFCGjfEyUn1A

HOUSE FOR RENT
ಮನೆ ಬಾಡಿಗೆ ವಿದ್ಯಾರಣ್ಯಪುರಂ, ಜೆ.ಪಿ.ನಗರ, ದಟ್ಟಗಳ್ಳಿ, ಶ್ರೀರಾಂಪುರ, ಕುವೆಂಪುನಗರ, ರಾಮಕೃಷ್ಣನಗರ ಸುತ್ತಮುತ್ತ
9902506368

WANTED TEACHER'S
Ideal School, Yelwala English Medium, Qualification : BA, BEd, MA, BEd, (Social Science) Only Lady teacher
9900593211

SHOP FOR SALE
Good running Hotel and grocery shop for sale, with Nandini milk agency, staying available
8747933845

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮುಂದುವರೆದ ವರ್ಗೀಕೃತ ಜಾಹೀರಾತಿಗಾಗಿ 11ನೇ ಪುಟ ನೋಡಿ

ಕೇರಳದ ವೈನಾಡು, ಕಬಿನಿ ಜಲಾಶಯ ವ್ಯಾಪ್ತಿ ಮಳೆ ಕೊರತೆ ಹಿನ್ನಲೆ

ಕಬಿನಿ ಹಿನ್ನೀರಲ್ಲಿ ಮುಳುಗಿದ್ದ ನಡುತಟ್ಟು ಬಸಪ್ಪ ಪ್ರತ್ಯಕ್ಷ



ನೀರಿಲ್ಲದೆ ಕಬಿನಿ ಜಲಾಶಯ ಖಾಲಿಯಾಗಿರುವುದು.

ಹೆಚ್.ಡಿ.ಕೋಟೆ, ಜೂ.17– ಕೇರಳದ ವೈನಾಡು ಸೇರಿದಂತೆ ಕಬಿನಿ ಜಲಾಶಯ ವ್ಯಾಪ್ತಿಯಲ್ಲಿ ಮಳೆ ಕೊರತೆ ಹಿನ್ನೆಲೆಯಲ್ಲಿ ಇಲ್ಲಿನ ಪ್ರಸಿದ್ಧ ಕಬಿನಿ ಜಲಾಶಯದಲ್ಲಿ ನೀರಿನ ಪ್ರಮಾಣ ಕುಸಿತಗೊಂಡ ಪರಿಣಾಮ ಜಲಾಶಯದ ಹಿನ್ನೀರಿನಲ್ಲಿ ಮುಳುಗಿದ್ದ ನಡುತಟ್ಟು ಬಸಪ್ಪ ದೇವಾಲಯ ಸೇರಿದಂತೆ ಶಿವಲಿಂಗ, ದೇವಾಲಯದ ದ್ವಾರಪಾಲಕ ವಿಗ್ರಹಗಳು ಸಾರ್ವಜನಿಕರಿಗೆ ಪ್ರತ್ಯಕ್ಷವಾಗಿವೆ.

ಈ ಬಾರಿ ಮಳೆ ಕೈ ಕೊಟ್ಟ ಹಿನ್ನೆಲೆಯಲ್ಲಿ ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ರಾಜ್ಯದಲ್ಲೇ ಮೊಟ್ಟ ಮೊದಲೇ ಭರ್ತಿಯಾಗುವ ಜಲಾಶಯ ಎಂಬ ಖ್ಯಾತಿಯ ಕಬಿನಿ ಜಲಾಶಯದ ಗರಿಷ್ಠ ನೀರಿನ ಮಟ್ಟ 2284 ಅಡಿಗಳಾಗಿದ್ದು, ಪ್ರಸ್ತುತ 2253 ಅಡಿಗೆ ಕುಸಿತಗೊಂಡಿದೆ.

ಜೂನ್ ತಿಂಗಳಲ್ಲಿ ಕೇರಳಕ್ಕೆ ಪ್ರವೇಶಿಸಬೇಕಿದ್ದ ಮಾನ್ಸೂನ್ ಮಳೆ ಈ ಬಾರಿ ತಡವಾಗಿ ಕರ್ನಾಟಕ ಪ್ರವೇಶಿಸಿದ್ದಲ್ಲದೇ ವಾಡಿಕೆಗಿಂತ ಕಡಿಮೆ ಮಳೆಯಾಗಿರುವ ಪರಿಣಾಮ ಕಬಿನಿ ಜಲಾಶಯಕ್ಕೆ 531 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು,

ಮಳೆಗಾಗಿ ತೆರಣಿಮುಂಟಿ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರಿಂದ ವಿಶೇಷ ಪೂಜೆ



ಮಳೆಗಾಗಿ ಕಬಿನಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಿದ್ದ ನಡುತಟ್ಟು ಬಸಪ್ಪನಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ಕಬಿನಿ ಜಲಾಶಯದ ನೀರಿನ ಮಟ್ಟ

ಗರಿಷ್ಠ ಮಟ್ಟ	– 2284 ಅಡಿ.
ಇಂದಿನ ಮಟ್ಟ	– 2253 ಅಡಿ.
ಒಳಹರಿವು	– 531 ಕ್ಯೂಸೆಕ್.
ಹೊರಹರಿವು	– 100 ಕ್ಯೂಸೆಕ್.

ಕಳೆದ ವರ್ಷದ ನೀರಿನ ಮಟ್ಟ

ಇದೇ ದಿನ	– 2278 ಅಡಿ.
ಒಳಹರಿವು	– 15849 ಕ್ಯೂಸೆಕ್.
ಹೊರಹರಿವು 5 ಸಾವಿರ ಕ್ಯೂಸೆಕ್.	

100 ಕ್ಯೂಸೆಕ್ ನೀರನ್ನು ಜಲಾಶಯದಿಂದ ನದಿಗೆ ಹರಿಸಲಾಗುತ್ತಿದೆ. ಕಳೆದ ವರ್ಷ ಇದೇ ದಿನ 2278 ಅಡಿ ನೀರು ಜಲಾಶಯದಲ್ಲಿ ಸಂಗ್ರಹವಾಗಿತ್ತು. ಅಲ್ಲದೇ 15849 ಕ್ಯೂಸೆಕ್ ನೀರು ಒಳ ಹರಿವಿದ್ದು, ಜಲಾಶಯದಿಂದ 5 ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿತ್ತು. ಕಬಿನಿ ಜಲಾಶಯದಲ್ಲಿ ಕಳೆದ ವರ್ಷ ಇದೇ ವೇಳೆಗೆ 15.31 ಟಿಎಂಸಿ ಅಡಿ ನೀರಿತ್ತು. ಈ ಬಾರಿ ಕೇವಲ 4.84 ಟಿಎಂಸಿ ನೀರು ಮಾತ್ರ ಸಂಗ್ರಹವಾಗಿದ್ದು, ಇದರಿಂದ ಮೈಸೂರು ನಗರ ಹಾಗೂ ಜನ ಜಾನುವಾರುಗಳಿಗೆ ನೀರಿನ ಸಮಸ್ಯೆ ಉಂಟಾಗಬಹುದು ಎನ್ನಲಾಗಿದೆ. ಇತ್ತ ಮಳೆ ಆಗಮನದ ನಿರೀಕ್ಷೆಯಲ್ಲಿ ಬಿತ್ತನೆ ಕಾರ್ಯ ಪೂರ್ಣಗೊಳಿಸಿರುವ ರೈತರು ಮಳೆಗಾಗಿ ಆಕಾಶದತ್ತ ಮುಖ ಮಾಡುವಂತಾಗಿದೆ. ಅಲ್ಲದೇ ಕೊಳವೆ ಬಾವಿಗಳಲ್ಲಿಯೂ ನೀರು ಬತ್ತಿ ಹೋಗಿದ್ದು, ಮಳೆಯೂ ಇಲ್ಲದೇ, ಕೊಳವೆ ಬಾವಿ ನೀರೂ ಇಲ್ಲ ರೈತರು ಕಂಗಾಲಾಗಿದ್ದಾರೆ.



ಹಿನ್ನೀರಿನಲ್ಲಿ ಮುಳುಗಿದ್ದ ಶಿವಲಿಂಗ.

ಇನ್ನು ಕಬಿನಿ ಜಲಾಶಯದ ನೀರನ್ನೇ ನಾಗರಹೊಳೆ, ಬಂಡೀಪುರ ರಾಷ್ಟ್ರೀಯ ಉದ್ಯಾನವನದ ವನ್ಯ ಜೀವಿಗಳು ಹಾಗೂ ಜನಜಾನುವಾರುಗಳು ಅವಲಂಬಿಸಿದ್ದು, ಇದೀಗ ಮಳೆಯಾಗದಿರುವುದರಿಂದ ಮುಂದಿನ ದಿನಗಳಲ್ಲಿ ತೊಂದರೆಯಾಗಲಿದೆ. ಅಲ್ಲದೇ ಕಬಿನಿ ಭಾಗದ ನೀರನ್ನು ನಂಬಿರುವ ಗ್ರಾಮಗಳ ಗ್ರಾಮಸ್ಥರಿಗೂ ಕುಡಿಯುವ ನೀರಿಗೆ ತೊಂದರೆಯಾಗಲಿದೆ.



ದೇವಾಲಯದ ದ್ವಾರಪಾಲಕ ವಿಗ್ರಹ.


ಮಳೆಗಾಗಿ ನಡುತಟ್ಟು ಬಸಪ್ಪನಿಗೆ ಅಭಿಷೇಕ

ಕಬಿನಿ ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆಯಾದ ಹಿನ್ನೆಲೆಯಲ್ಲಿ ಹಿನ್ನೀರಿನಲ್ಲಿ ಮುಳುಗಿದ್ದ ಪುರಾತನ ನಡುತಟ್ಟು ಬಸಪ್ಪನ ದೇವಾಲಯ, ಶಿವಲಿಂಗ, ದೇವಾಲಯದ ದ್ವಾರಪಾಲಕ ವಿಗ್ರಹಗಳು ಕಾಣಿಸಿಕೊಂಡಿದ್ದು, ತೆರಣಿಮುಂಟಿ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ಮಳೆಗೆ ಆಗ್ರಹಿಸಿ ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ನಡುತಟ್ಟು ಬಸಪ್ಪನಿಗೆ ಚಪ್ಪರ ಹಾಕಿ ಮಳೆಗಾಗಿ ಕಪಿಲಾ ನದಿಯಿಂದ ನೂರೊಂದು ಬಿಂದಿಗೆ ನೀರನ್ನು ಹೊತ್ತು ತಂದು ಬಸಪ್ಪನಿಗೆ ಸಮರ್ಪಿಸಿದರು. ಅಲ್ಲದೇ ಕುಂಕುಮ, ಅರಿಶಿನ ಅಭಿಷೇಕ, ವಿಭೂತಿ ಅಭಿಷೇಕ, ಜೇನುತುಪ್ಪ, ಹಾಲು, ಮೊಸರು, ಪಂಚಾಮೃತ ಅಭಿಷೇಕ ನಡೆಸಿ ನಂತರ ಬಸಪ್ಪನಿಗೆ ಹೂವಿನಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಿದರು.

ಇದೇ ವೇಳೆ ಜಲಾಶಯದಲ್ಲಿ ನೀರು ಕಡಿಮೆಯಾಗಿ ಹಿನ್ನೀರಿನಲ್ಲಿ ಮುಳುಗಿದ್ದ ನಡುತಟ್ಟು ಬಸಪ್ಪ ದೇವಾಲಯ ಗೋಚರವಾದ ವಿಚಾರ ತಿಳಿದು ಸ್ಥಳಕ್ಕಾಗಮಿಸಿದ ಸುತ್ತಮುತ್ತಲ ಸಾವಿರಾರು ಗ್ರಾಮಸ್ಥರು ದೇವರ ದರ್ಶನ ಪಡೆದರು. ಇದೇ ವೇಳೆ ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ಶಾಸಕ ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನ ನೀಡಲು ಒತ್ತಾಯ



ಸುದ್ದಿಗೋಷ್ಠಿಯಲ್ಲಿ ಕ್ಯಾತನಹಳ್ಳಿ ನಾಗರಾಜು ಮಾತನಾಡಿದರು.

ಹುಣಸೂರು, ಜೂ.17– ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ, ಹಾಸನ ಜಿಲ್ಲೆಯ ಏಕೈಕ ನಾಯಕ ಸಮಾಜದ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡುವಂತೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ದಿ.ಎಸ್.ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜು ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಈ 5 ಜಿಲ್ಲೆಗಳ ಪ.ಪಂಗಡದ 6 ಲಕ್ಷ ಮತದಾರರಿದ್ದು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶೇ.70ರಷ್ಟು ನಾಯಕ ಸಮಾಜದವರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದರಿಂದ ಪಕ್ಷ ಅಧಿಕಾರಕ್ಕೆ ಬಂದಿದೆ. ಕಳೆದ 30 ವರ್ಷಗಳಿಂದ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಮೈಸೂರು ಪ್ರಾಂತ್ಯದ ಪ.ಪಂಗಡದವರಿಗೆ ಸಚಿವ ಸ್ಥಾನ ನೀಡದಿರುವುದು ನೋವಿನ ವಿಚಾರ. ಸಂವಿಧಾನಬದ್ಧ, ಕಾನೂನಾತ್ಮಕವಾಗಿ ಪ.ಪಂಗಡದವರು ರಾಜಕೀಯವಾಗಿ ಮುನ್ನಲೆಗೆ ಬರಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ್, ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಹಾಗೂ ಕೆ.ಸಿ.ವೇಣುಗೋಪಾಲ್ ಅವರು ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡಿ, ರಾಜ್ಯದ ಅಭಿವೃದ್ಧಿಗೆ ಶ್ರಮಿಸಲು ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಮತ್ತೊಬ್ಬ ಪ.ಪಂಗಡದ ನಾಯಕ, ಮಾಜಿ ಜಿಪಂ ಅಧ್ಯಕ್ಷರೂ ಆದ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಅವರನ್ನು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆ ಮಾಡಬೇಕು ಎಂದು ಒತ್ತಾಯಿಸಿದರು.

ಸಮಾಜದ ಮುಖಂಡರಿಗೆ ನಿಗಮ ಮಂಡಳಿಗಳಲ್ಲಿ 3 ಅಧ್ಯಕ್ಷ ಸ್ಥಾನ ನೀಡಬೇಕು. ನಿಗಮಗಳಿಗೆ 15 ಮುಖಂಡರನ್ನು ನಿರ್ದೇಶಕರಾಗಿ ನಾಮನಿರ್ದೇಶನ ಮಾಡಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ನಗರಸಭೆ ಸದಸ್ಯ ದೇವರಾಜು, ಉಪಾಧ್ಯಕ್ಷರು ಮಹದೇವ, ಕಾರ್ಯದರ್ಶಿ ಕೆ.ಎನ್.ಮಹೇಶನಾಯಕ, ದೇವರಾಜು, ಕೃಷ್ಣನಾಯಕ, ಚಂದ್ರ ನಾಯಕ, ಮಹೇಶ ನಾಯಕ, ಶ್ರೀನಿವಾಸ್, ಗೋವಿಂದನಾಯಕ, ಎಸ್.ಚಿಕ್ಕಮಾದು ಅಭಿಮಾನಿಗಳು ಹಾಜರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ತಿ.ನರಸೀಪುರ, ಜೂ.17– ತಾಲೂಕಿನ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕಗಳಿಸಿರುವ ನಾಯಕ ಜನಾಂಗದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ತಾಲೂಕು ನಾಯಕ ಸಂಘ, ತಾಲೂಕು ನಾಯಕ ನೌಕರರ ಸಂಘಗಳ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ನಾಯಕ ಜನಾಂಗದ ವಿದ್ಯಾರ್ಥಿಗಳು ತಮ್ಮ ಸ್ವ–ವಿಳಾಸದೊಂದಿಗೆ ಭಾವಚಿತ್ರ, ಅಂಕಪಟ್ಟಿ ಹಾಗೂ ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯ ದೃಢೀಕೃತ ದಾಖಲೆಗಳೊಂದಿಗೆ ಮಹರ್ಷಿ ವಾಲ್ಮೀಕಿ ಸ್ಕೂಲ್ ತಿ.ನರಸೀಪುರ ಟೌನ್, ಈ ವಿಳಾಸಕ್ಕೆ ಜು.6ರೊಳಗೆ ಅರ್ಜಿ ಸಲ್ಲಿಸಬಹುದು ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಜು.12 ರಂದು ಬೆಳಗ್ಗೆ 11.30ಕ್ಕೆ ಮಹರ್ಷಿ ವಾಲ್ಮೀಕಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಹಿತಿಗೆ ನಾಗರಾಜ್ ಮೊ.9986672558, ಆರ್.ರಾಜು ಮೊ. 9916266568 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ನಂ.ಗೂಡು ಹಳೇ ಬಸ್ ನಿಲ್ದಾಣಕ್ಕೆ ಮೂಲ ಸೌಕರ್ಯ ಕಲ್ಪಿಸಿ

ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ ಸೂಚನೆ

ನಂಜನಗೂಡು, ಜೂ.17– ನಗರದ ಹಳೇ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಕನಿಷ್ಠ ಮೂಲ ಸೌಕರ್ಯ ಒದಗಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ ಕೆಎಸ್‌ಆರ್‌ಟಿಸಿ ವಿಭಾಗೀಯ ಅಧಿಕಾರಿ ಜಗದೀಶ್ ಅವರಿಗೆ ಸೂಚನೆ ನೀಡಿದರು.

ಬುಧವಾರ ನಗರಸಭೆ ಅಧಿಕಾರಿಗಳು, ಕೆಎಸ್‌ಆರ್‌ಟಿಸಿ ಅಧಿಕಾರಿಗಳ ಜೊತೆ ನಿಲ್ದಾಣ ಪರಿಶೀಲಿಸಿ ಮಾತನಾಡಿದ ಅವರು, ಹಳೇ ಬಸ್ ನಿಲ್ದಾಣದ ಕಟ್ಟಡ ಶಿಥಿಲಾವಸ್ಥೆ ತಲುಪಿದೆ ಎಂಬ ನೆಪವೊಡ್ಡಿ ಕಟ್ಟಡ ಬಂದ್ ಮಾಡಲಾಗಿದೆ. ಹೊರಗಡೆಯ ಬಸ್ ಶೆಲ್ಟರ್‌ನಲ್ಲಿ ಕುಡಿಯುವ ನೀರು, ಶೌಚಾಲಯ, ಆಸನ ವ್ಯವಸ್ಥೆಯಿಲ್ಲ. ಅಲ್ಲದೇ ಮಳೆ ಬಂದಲ್ಲಿ ಇಡೀ ನಿಲ್ದಾಣವೇ ಸೋರುತ್ತದೆ. ಆದ್ದರಿಂದ ಸಾರ್ವಜನಿಕರಿಗೆ ಕನಿಷ್ಠ ಮೂಲ ಸೌಕರ್ಯ ಒದಗಿಸುವಂತೆ ಸಾರ್ವಜನಿಕರಿಂದ ದೂರು ಕೇಳಿ ಬಂದಿದೆ. ಆದ್ದರಿಂದ ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಅಧಿಕಾರಿಗಳ ಜೊತೆ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಪರಿಶೀಲಿಸುವಂತೆ ಸೂಚನೆ ನೀಡಿದ ಮೇರೆಗೆ ಪರಿಶೀಲನೆ ನಡೆಸಿದ್ದೇನೆ ಎಂದರು.

ಈ ನಿಲ್ದಾಣದಲ್ಲಿ ಕಳೆದ 42 ವರ್ಷಗಳಿಂದ ಕುಡಿಯುವ ನೀರಿನ ನಲ್ಲಿ ಬದಲಾವಣೆ ಮಾಡಿಲ್ಲ. ನಲ್ಲಿ ಸುತ್ತಮುತ್ತ ಪಾಚಿ ಕಟ್ಟಿ ಗಬ್ಬೇರುವಂತಿದೆ. ಜೊತೆಗೆ ಶೌಚಾಲಯ ವ್ಯವಸ್ಥೆ ಸರಿ ಇಲ್ಲದಿರುವುದು. ಕುಳಿತುಕೊಳ್ಳಲು ಆಸನ ಇಲ್ಲದಿರುವುದು. ಬಸ್ ಶೆಲ್ಟರ್ ಸೋರಿಕೆ ಕಂಡು ಬಂದಿದ್ದು, ತ್ವರಿತವಾಗಿ ರಿಪೇರಿಗೊಳಿಸುವಂತೆ ಸೂಚಿಸಲಾಗಿದೆ.



ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ ಹಳೇ ಬಸ್ ನಿಲ್ದಾಣ ಪರಿಶೀಲಿಸಿದರು.

> “ಹಳೇ ಬಸ್ ನಿಲ್ದಾಣ ನಗರದ ಮಧ್ಯ ಭಾಗದಲ್ಲಿದ್ದು, ಅತ್ಯಂತ ಜನನಿಬಿಡ ಪ್ರದೇಶವಾಗಿರುವುದರಿಂದ ಇಲ್ಲಿ ಮೂಲ ಸೌಕರ್ಯ ಕಲ್ಪಿಸುವುದು ಅನಿವಾರ್ಯ. ಅಲ್ಲದೇ ನಿಲ್ದಾಣದ ಸುತ್ತಮುತ್ತ ಕಸದ ರಾಶಿ ಮತ್ತು ಅನುಪಯುಕ್ತ ವಸ್ತು ತೆರವುಗೊಳಿಸಿ ಸ್ವಚ್ಛತೆ ಕಾಪಾಡಲಾಗುವುದು ಮತ್ತು ಮುಂದೆ ಮಳೆಗಾಲ ಪ್ರಾರಂಭವಾಗುವುದರಿಂದ ನಿಲ್ದಾಣದಲ್ಲಿರುವ ಬಸ್ ಶೆಲ್ಟರ್ ಅನ್ನು ದುರಸ್ತಿಗೊಳಿಸಲಾಗುವುದು. ಜೊತೆಗೆ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಲಾಗುವುದು. ಶೌಚಾಲಯವನ್ನು ಒಳಚರಂಡಿಗೆ ಸಂಪರ್ಕ ಕಲ್ಪಿಸದಿರುವ ಕಾರಣ ಈ ನಿಲ್ದಾಣದಲ್ಲಿ ಶೌಚಾಲಯದ ವ್ಯವಸ್ಥೆ ಸರಿ ಇಲ್ಲ. ಆದ್ದರಿಂದ ನಗರಸಭೆ ಅಧಿಕಾರಿಗಳು ಕೂಡಲೇ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಬೇಕು. – ಜಗದೀಶ್, ಕೆಎಸ್‌ಆರ್‌ಟಿಸಿ ವಿಭಾಗೀಯ ಅಧಿಕಾರಿ.

ಅಲ್ಲದೇ ಬಸ್ ನಿಲ್ದಾಣದ ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸುವಂತೆ ಸೂಚನೆ ನೀಡಲಾಗಿದೆ. ಜೊತೆಗೆ ನುರಿತ ತಜ್ಞರಿಂದ ತಾಂತ್ರಿಕವಾಗಿ ಕಟ್ಟಡದ ಸಾಮರ್ಥ್ಯ ಪರಿಶೀಲಿಸುವಂತೆ ತಿಳಿಸಲಾಗಿದ್ದು, ಕಟ್ಟಡ ಸಾಮರ್ಥ್ಯ ಉತ್ತಮವಾಗಿದ್ದರೆ ಈ ಕಟ್ಟಡವನ್ನೇ ದುರಸ್ತಿಗೊಳಿಸಿ ಸಾರ್ವಜನಿಕರ ಅನುಕೂಲಕ್ಕೆ ನೀಡಲಾಗುವುದು. ಒಂದು ವೇಳೆ ಶಿಥಿಲಾವಸ್ಥೆ ತಲುಪಿದಲ್ಲಿ ಶಾಸಕರ ಜೊತೆಗೆ ಚರ್ಚಿಸಿ ಸರ್ಕಾರದಿಂದ ಅನುದಾನ ತಂದು ಕಟ್ಟಡ ಕೆಡವಿ ಹೊಸ ಕಟ್ಟಡ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು ಎಂದರು.

ನಗರಸಭಾ ಆಯುಕ್ತ ಬಸವರಾಜು ಮಾತನಾಡಿ, ಹಳೇ ಬಸ್ ನಿಲ್ದಾಣ ಪಕ್ಕದ ಅಶೋಕಪುರಂ ಬಡಾವಣೆ ನಿವಾಸಿಗಳು ಆಕ್ಷೇಪ ವ್ಯಕ್ತಪಡಿಸಿರುವುದರಿಂದ ಒಳಚರಂಡಿ ಸಂಪರ್ಕ ಕಲ್ಪಿಸದಿರುವುದರಿಂದ ನಿಲ್ದಾಣದಲ್ಲಿ ಶೌಚಾಲಯ ಸಮಸ್ಯೆಯಾಗಿದೆ. ಈ ಬಗ್ಗೆ ಶಾಸಕ ದರ್ಶನ್ ಗಮನಕ್ಕೆ ತಂದು ಸ್ಥಳೀಯರೊಂದಿಗೆ ಮಾತುಕತೆ ನಡೆಸಿ ಒಳ ಚರಂಡಿಗೆ ಸಂಪರ್ಕ ಕಲ್ಪಿಸಿ ಶೌಚಾಲಯ ಸಮಸ್ಯೆ ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕಿ ಸುಮ, ನಗರಸಭೆ ಎಇಇ ಮಹೇಶ್, ಮುಖಂಡ ಲಿಂಗಯ್ಯ ಹಲವರಿದ್ದರು.

ಶ್ರೀಬ್ರಹ್ಮಾನಂದ ಭಾರತಿ ಸ್ವಾಮೀಜಿ ವರ್ಧಂತ್ಯೋತ್ಸವ

ಕೆ.ಆರ್.ನಗರ, ಜೂ.17– ಪಟ್ಟಣದ ಎಡತೊರೆ ಯೋಗಾನಂದೇಶ್ವರ ಸರಸ್ವತಿ ಮಠದ ಪೀಠಾಧಿಪತಿ ಶ್ರೀಶಂಕರ ಭಾರತಿ ಸ್ವಾಮೀಜಿ ದಿವ್ಯಾನುಗ್ರಹದೊಂದಿಗೆ ಅವರ ಕರಕಮಲ ಸಂಜಾತರಾದ ಶ್ರೀಬ್ರಹ್ಮಾನಂದ ಭಾರತಿ ಸ್ವಾಮೀಜಿಗಳ ವರ್ಧಂತಿ ಮಹೋತ್ಸವ ಶ್ರೀಮಠದಲ್ಲಿ ನೂರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ಬೆಳಗ್ಗೆ 9.30ಕ್ಕೆ ನಡೆದ ಸಭಾ ಕಾರ್ಯಕ್ರಮದಲ್ಲಿ ವೇದ ಘೋಷ, ಮಹಿಳೆಯರಿಂದ ಶ್ಲೋಕ ಸಮರ್ಪಣೆ, ಗ್ರಂಥ ಲೋಕಾರ್ಪಣೆ, ಹೊರ ರಾಜ್ಯಗಳಿಂದ ಆಗಮಿಸಿದ್ದ ವಿದ್ವಾಂಸರಿಗೆ ಸನ್ಮಾನ, ಗುರು ವಂದನೆ, ಫಲ ಸಮರ್ಪಣೆ ಹಾಗೂ ಫಲಮಂತ್ರಾಕ್ಷತೆ ವಿತರಣೆ ಸೇರಿದಂತೆ ಇನ್ನಿತರ ಕಾರ್ಯಗಳು ನೆರವೇರಿದವು. ಮಾಜಿ ಸಚಿವ ಹೆಚ್.ವಿಶ್ವನಾಥ್ ಅವರು ಅಭಿನಂದನಾ ಭಾಷಣದ ಮೂಲಕ ಗುರುಗಳಿಗೆ ವಂದನೆ ಸಲ್ಲಿಸಿದರು.

ಸಭೆಯಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಶ್ರೀಗಳು, ಶ್ರೀಶಂಕರ ಭಗವತ್ಪಾದರ ತತ್ವ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ನಮ್ಮ ಬಾಳು ಹಸನಾಗುವುದರಲ್ಲಿ ಸಂದೇಹವಿಲ್ಲ. ಧೈರ್ಯದಿಂದ ಧರ್ಮ ಪಾಲನೆ ಮಾಡಿದಾಗ ಜೀವನದಲ್ಲಿ ಯಶಸ್ಸು ಸಾಧಿಸಬಹುದು ಎಂದರು.



ಶ್ರೀಬ್ರಹ್ಮಾನಂದ ಭಾರತಿ ಸ್ವಾಮೀಜಿ ಭಕ್ತರಿಗೆ ಫಲ ಮಂತ್ರಾಕ್ಷತೆ ನೀಡುತ್ತಿರುವುದು.

ಹಿರಿಯ ಶ್ರೀಗಳಾದ ಶ್ರೀಶಂಕರ ಭಾರತಿ ಸ್ವಾಮೀಜಿಗಳು ದೇಶ ಸಂಚಾರದ ಮೂಲಕ ಎಲ್ಲೆಡೆ ಶ್ರೀಶಂಕರ ಭಗವತ್ಪಾದರರ ತತ್ವ ಸಂದೇಶಗಳನ್ನು ಸಾರುತ್ತಿದ್ದಾರೆ. ಇಂದು ಲೋಕಾರ್ಪಣೆಗೊಂಡ ವಿವೇಕ್ ದೀಪ್ತಿ ಇಂಗ್ಲಿಷ್ ಅವತರಣಿಕೆ ಮುಂದಿನ ಪೀಳಿಗೆಗೆ ಜ್ಞಾನ ದೀವಿಗೆಯಾಗಲಿದೆ ಎಂದರು.

ಇದೇ ವೇಳೆ ವಿವಿಧೆಡೆಗಳಿಂದ ಆಗಮಿಸಿದ ಭಕ್ತರ ನಿಸ್ವಾರ್ಥ ಸೇವೆ ಶ್ರೀಮಠ ಹಾಗೂ ಕಾರ್ಯಕ್ರಮಗಳ ಯಶಸ್ವಿಗೆ ಕಾರಣವಾಗಿದೆ ಎಂದ ಶ್ರೀಗಳು ಎಲ್ಲರಿಗೂ ಶುಭವಾಗಲಿ ಎಂದು ಹರಸಿದರು.

ಮಧ್ಯಾಹ್ನ 12 ಗಂಟೆಗೆ ಶತಚಂಡಿ ಮಹಾಯಾಗದ ಪೂರ್ಣಾಹುತಿ ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ವಿ.ರಾಮಕೃಷ್ಣ ಸೋಮಯಾಜಿ, ವಿ.ಪರಮೇಶ್ವರ್ ಭಟ್, ವಿ.ಹೇರಂಭರಾವ್, ಕೆ.ಪಿ.ಪ್ರಭುಶಂಕರ್, ನರಸಿಂಹ ಸೋಮಯಾಜಿ, ಹೃಷಿಕೇಶ್ ಸೇರಿದಂತೆ ಅನೇಕ ಕಾರ್ಯಕರ್ತರು ನೂರಾರು ಭಕ್ತರು ಪಾಲ್ಗೊಂಡಿದ್ದರು. ಕೊನೆಯಲ್ಲಿ ಪ್ರಸಾದ ವಿರ್ಪಡಿಸಲಾಗಿತ್ತು.

ಶ್ರೀಆದಿಚುಂಚನಗಿರಿ ಶಾಲೆಯಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ

ತಿ.ನರಸೀಪುರ, ಜೂ.17– ಪಟ್ಟಣದ ಹೌಸಿಂಗ್ ಬೋರ್ಡ್‌ನಲ್ಲಿರುವ ಶ್ರೀಆದಿ ಚುಂಚನಗಿರಿ ಬಾಲ ಜಗತ್ ಶಾಲೆಯಲ್ಲಿ ಮಕ್ಕಳಿಗೆ ಜ್ಞಾನಾಂಕುರ ಅಕ್ಷರಾಭ್ಯಾಸ ನಡೆಸಲಾಯಿತು.

ಶಾಲಾವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸರಸ್ವತಿ, ಗಣಪತಿಗೆ ಪೂಜೆ ಸಲ್ಲಿಸಿ ಹೋಮ, ಹವನ ಹಾಗೂ ಅಭಿಷೇಕದೊಂದಿಗೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಪೋಷಕರು ಪೂಜೆಯಲ್ಲಿ ಭಾಗವಹಿಸುವ ಜೊತೆಗೆ ತಮ್ಮ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಿದರು. ಈ ವೇಳೆ ಶಾಲೆಯ ನೂರಾರು ಮಕ್ಕಳ ಪೋಷಕರು ಅಕ್ಷರಾಭ್ಯಾಸಕ್ಕೆ ಸಾಕ್ಷಿಯಾಗಿದ್ದರು.

ಶ್ರೀಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀಸೋಮನಾಥ ಸ್ವಾಮೀಜಿ ಮಾತನಾಡಿ, ಗ್ರಾಮೀಣ ಮಕ್ಕಳು ಹೆಚ್ಚು ಬುದ್ಧಿವಂತರಾಗಿದ್ದು, ಶ್ರೀಬಾಲಗಂಗಾಧರನಾಥ ಸ್ವಾಮೀಜಿಗಳ ದೂರದೃಷ್ಟಿ ಫಲವಾಗಿ ಇಂದು ನಮ್ಮ ಸಂಸ್ಥೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರು.

ವಿದ್ಯಾಸಂಸ್ಥೆಗಳಿಂದ ಮಾತ್ರ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲು ಸಾಧ್ಯ. ಹೀಗಾಗಿ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಗಮನ ಹರಿಸಬೇಕು ಎಂದರು.

ಶಾಲೆ ವ್ಯವಸ್ಥಾಪಕ ಬಸವರಾಜು ಮಾತನಾಡಿ, ನಮ್ಮ ಪೂರ್ವಿಕರು, ಹಿರಿಯರು ಶೃಂಗೇರಿ ಶಾರದಾ ಪೀಠದಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುತ್ತಿದ್ದರು. ಶ್ರೀಬಾಲಗಂಗಾಧರನಾಥಶ್ರೀಗಳು ಆರಂಭಿಸಿರುವ ಶಾಲೆಯಲ್ಲಿ ಓದುವ ಗ್ರಾಮೀಣ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲಾಗುತ್ತಿದೆ ಎಂದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ



ಶ್ರೀಆದಿಚುಂಚನಗಿರಿ ಬಾಲ ಜಗತ್ ಶಾಲೆಯಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲಾಯಿತು.

ಮೈಸೂರು ಶಾಖಾ ಮಠದ ಶ್ರೀಸೋಮೇಶ್ವರನಾಥ ಶ್ರೀಗಳ ಸೂಚನೆಯಂತೆ ಸಂಸ್ಥೆಯ ಪ್ರತಿಯೊಂದು ಶಾಲೆಯಲ್ಲೂ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುತ್ತಿದ್ದೇವೆ. ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ, ಸಂಸ್ಕೃತಿ, ನಾಗರಿಕತೆ, ನಮ್ಮ ಆಚಾರ–ವಿಚಾರಗಳನ್ನು ಕಲಿಸಬೇಕಿದೆ. ಆ ನಿಟ್ಟಿನಲ್ಲಿ ನಮ್ಮ ಬಿಜಿಎಸ್ ಮಠದ ಶಾಲೆಗಳು ಕೆಲಸ ಮಾಡುತ್ತಿವೆ ಎಂದರು. ಶಾಲೆ ವ್ಯವಸ್ಥಾಪಕ ಸೋಮಣ್ಣ, ಮುಖ್ಯ ಶಿಕ್ಷಕರಾದ ಪ್ರಶಾಂತ್ ಎಂ.ಬಿ, ಸಹ ಶಿಕ್ಷಕರಾದ ಶಾಂತಕುಮಾರ್, ಜಗದೀಶ್, ರವಿ, ಲಾವಣ್ಯ, ಸೌಮ್ಯ, ರಮ್ಯಶ್ರೀ, ಮಂಜುಶ್ರೀ, ವಿನೋದ್, ಅನಿತಾ, ಮಮತಾ, ಶಿಲ್ಪಶ್ರೀ, ಗಿರಿಜಾ, ನಾಗನಂದಿನಿ, ಕಾವ್ಯಶ್ರೀ ಎಸ್, ಕಾವ್ಯ. ಜೆ, ಪೂಜಶ್ರೀ, ಮಂಜುಳಾ, ನಾಗರತ್ನ, ಕೋಮಲ, ಜಯಲಕ್ಷ್ಮಿ, ರಂಜಿತಾ, ಧನಲಕ್ಷ್ಮಿ, ಅನುಷಾ, ಸುರಭಿ ಮತ್ತು ಆಯಾಗಳಾದ ಅಶ್ವಿನಿ, ಜ್ಯೋತಿ, ಗೀತಾ ಹಾಜರಿದ್ದರು.

ನಾಯಕ ಸಮಾಜ ಹಕ್ಕು, ಸವಲತ್ತಿಗಾಗಿ ಸಂಘಟಿತರಾಗಿ

ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರು



ನೂತನ ಪದಾಧಿಕಾರಿಗಳಿಗೆ ರಾಜ್ಯಾಧ್ಯಕ್ಷ ದೇವರಾಜ್ ನೇಮಕಾತಿ ಪತ್ರ ವಿತರಿಸಿದರು.

ತಿ.ನರಸೀಪುರ, ಜೂ.17– ರಾಜ್ಯದಲ್ಲಿ 70 ಲಕ್ಷ ಜನಸಂಖ್ಯೆ ಇರುವ ನಾಯಕ ಸಮುದಾಯ ಐತಿಹಾಸಿಕ ಹಿನ್ನೆಲೆ ಹಾಗೂ ವೈಭವಶಾಲಿ ಪರಂಪರೆ ಹೊಂದಿದ್ದು, ಸಮಾಜದ ಹಕ್ಕುಗಳು ಮತ್ತು ಸವಲತ್ತುಗಳ ರಕ್ಷಣೆಗೆ ಇನ್ನಷ್ಟು ಸಂಘಟಿತರಾಗುವ ಅಗತ್ಯವಿದೆ ಎಂದು ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರು ತಿಳಿಸಿದರು.

ಪಟ್ಟಣದಲ್ಲಿ ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ತಾಲೂಕು ಘಟಕದ ನೂತನ ಕಚೇರಿ ಉದ್ಘಾಟಿಸಿ, ಸಂಘದ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಅವರು, ನಾಯಕ ಸಮುದಾಯ ಇತಿಹಾಸದಲ್ಲಿ ರಾಜಮಹಾರಾಜರಾಗಿ ಆಡಳಿತ ನಡೆಸಿದ ಸಮಾಜವಾಗಿದೆ. ಮಹರ್ಷಿ ವಾಲ್ಮೀಕಿ ಅವರ ಆದರ್ಶಗಳನ್ನು ಅನುಸರಿಸಿಕೊಂಡು ಬಂದಿರುವ ಈ ಸಮಾಜವು ಕೋಟೆ, ಕೊತ್ತಲ, ಅರಮನೆಗಳನ್ನು ನಿರ್ಮಿಸಿ ಇತಿಹಾಸದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ದೇಶದ ಆಡಳಿತ ವ್ಯವಸ್ಥೆಯಲ್ಲಿಯೂ ಸಮಾಜದವರು ಮಹತ್ವದ ಪಾತ್ರ ವಹಿಸಿರುವ ಹೆಗ್ಗಳಿಕೆ ಹೊಂದಿದ್ದಾರೆ. ಆದರೆ ಸ್ವಾತಂತ್ರ್ಯ ನಂತರ ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದಡಿ ನ್ಯಾಯಯುತವಾಗಿ ದೊರೆಯಬೇಕಾದ ಹಕ್ಕುಗಳು ಹಾಗೂ ಸವಲತ್ತುಗಳಿಗಾಗಿ ಸಮಾಜ ಹೋರಾಟ ನಡೆಸುವ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯದ ದೊಡ್ಡ ಸಮುದಾಯಗಳಲ್ಲಿ ಒಂದಾಗಿದ್ದರೂ ಸಂಘಟನೆ ವಿಷಯದಲ್ಲಿ ನಾಯಕ ಸಮಾಜ ಇನ್ನೂ ಹಿಂದುಳಿದಿರುವುದು ವಿಷಾದನೀಯ ಸಂಗತಿ ಎಂದು ಅಭಿಪ್ರಾಯಪಟ್ಟರು.

ಸಮಾಜದ ಯುವಕರನ್ನು ಸಂಘಟಿಸುವ ಉದ್ದೇಶದಿಂದ 2003ರಲ್ಲಿ ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ಸ್ಥಾಪಿಸಲಾಗಿದ್ದು, ಪ್ರಸ್ತುತ ರಾಜ್ಯದ 22 ಜಿಲ್ಲೆಗಳ 103 ತಾಲೂಕುಗಳಲ್ಲಿ ತಾಲೂಕು ಘಟಕಗಳನ್ನು ರಚಿಸಲಾಗಿದೆ. ಪ್ರತಿ ತಾಲೂಕಿನಲ್ಲಿ ಯುವಕರನ್ನು ಸಂಘಟಿಸಿ ಸಮಾಜದ ಪರ ಹೋರಾಟ ನಡೆಸಲು ಸಜ್ಜುಗೊಳಿಸಲಾಗಿದೆ ಎಂದರು.

ಬೃಹತ್ ಪ್ರತಿಭಟನೆಗೆ ಸಿದ್ದರಾಗಿ

ನಾಯಕ ಸಮಾಜದವರಿಗೆ ಜಾತಿ ಪ್ರಮಾಣ ಪತ್ರ ನೀಡುವ ವಿಚಾರದಲ್ಲಿ ತಾಲೂಕು ಆಡಳಿತ ಅನಗತ್ಯ ವಿಳಂಬ ಹಾಗೂ ತೊಂದರೆಯಾಗುತ್ತಿರುವ ಬಗ್ಗೆ ವ್ಯಾಪಕ ದೂರುಗಳು ಕೇಳಿ ಬರುತ್ತಿವೆ. ಸಂವಿಧಾನ ಬದ್ಧವಾಗಿ ದೊರೆಯಬೇಕಾದ ಸೌಲಭ್ಯ ಮತ್ತು ದಾಖಲೆಗಳನ್ನು ಪಡೆಯಲು ಸಮಾಜದ ಜನರು ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿರುವುದು ಖಂಡನೀಯ. ವಿದ್ಯಾರ್ಥಿಗಳು, ಉದ್ಯೋಗಾಕಾಂಕ್ಷಿಗಳು ಹಾಗೂ ವಿವಿಧ ಸರ್ಕಾರಿ ಯೋಜನೆಗಳ ಸೌಲಭ್ಯ ಪಡೆಯಲು ಜಾತಿ ಪ್ರಮಾಣ ಪತ್ರ ಅತ್ಯಗತ್ಯವಾಗಿದ್ದು, ಅದರ ವಿತರಣೆಯಲ್ಲಿ ವಿಳಂಬವಾಗುವುದರಿಂದ ಸಮಾಜದ ಅನೇಕ ಕುಟುಂಬಗಳು ಸಂಕಷ್ಟ ಎದುರಿಸುತ್ತಿವೆ. ಹೀಗಾಗಿ ತಾಲೂಕು ನಾಯಕ ಸಂಘದ ಆಶ್ರಯದಲ್ಲಿ ಜಾತಿ ಪ್ರಮಾಣ ಪತ್ರ ವಿತರಣೆಯಲ್ಲಿ ವಿಳಂಬ ಖಂಡಿಸಿ ತಾಲೂಕು ಆಡಳಿತದ ವಿರುದ್ಧ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಬೇಕಾದ ಅವಶ್ಯಕತೆ ಇದೆ. ಹೀಗಾಗಿ ಸಮಾಜದ ಜನರನ್ನು ಸಂಘಟಿಸಿ ಹೋರಾಟದ ರೂಪುರೇಷೆ ಸಿದ್ಧಪಡಿಸಬೇಕು ಎಂದು ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರು ಕರೆ ನೀಡಿದರು.

ತಾಲೂಕು ನಾಯಕ ಸಂಘದ ಮಾಜಿ ಅಧ್ಯಕ್ಷ ಹೊನ್ನನಾಯಕ ಮಾತನಾಡಿದರು. ಈ ವೇಳೆ ತಿ.ನರಸೀಪುರ ಘಟಕದ ಅಧ್ಯಕ್ಷರಾಗಿ ಡಣಾಯಕನಪುರ ಸಿದ್ದರಾಜು, ಉಪಾಧ್ಯಕ್ಷ ನಾಗರಾಜು, ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಬಿ.ಜೋಗಯ್ಯ, ಸಂಘಟನಾ ಕಾರ್ಯದರ್ಶಿ ಚೆಲುವರಾಜು, ಬಿ.ರಮೇಶ್ ನಾಯಕ್, ಆರ್.ಮಹೇಶ್, ಸಹ ಕಾರ್ಯದರ್ಶಿ ಮಣಿಕಂಠ, ಪತ್ರಿಕಾ ಕಾರ್ಯದರ್ಶಿ ಚಂದ್ರ, ತಾಲೂಕು ಸಂಘಟನಾ ಕಾರ್ಯದರ್ಶಿ ಮಾಲಂಗಿ ಚಂದ್ರು, ತಾಲೂಕು ಸಂಚಾಲಕರಾದ ರಾಜೇಶ್(ಕೆಳದಿ), ಎಂ.ಅಭಿಷೇಕ್ ಹಾಗೂ ಎಸ್.ಸಚಿನ್ ಅವರಿಗೆ ನೇಮಕಾತಿ ಪತ್ರ ನೀಡಲಾಯಿತು.


ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಎಂ.ಸೋಮಣ್ಣ, ಉಪಾಧ್ಯಕ್ಷ ಶಿವಕುಮಾರಸ್ವಾಮಿ, ತಾಲೂಕು ನಾಯಕ ಸಂಘದ ಪ್ರಧಾನ ಕಾರ್ಯದರ್ಶಿ ಆಲಗೂಡು ನಾಗರಾಜು, ಎಸ್.ಎಂ.ಪರಶಿವಮೂರ್ತಿ, ತಾಯೂರು ರಾಜಣ್ಣ, ಕಣಿಯನಹುಂಡಿ ಸಿದ್ದರಾಜು, ಮುಖಂಡರಾದ ಗೋವಿಂದ, ನಾಗಲಗೆರೆ ಶಿವಕುಮಾರ್, ವಕೀಲ ಶಾಂತ ನಾಗರಾಜು, ತಿರುಮಕೂಡಲು ವಾಸು, ಡಣಾಯಕನಪುರ ಸೋಮಣ್ಣ, ಆಲಗೂಡು ರಂಗುನಾಯಕ, ತಲಕಾಡು ಸುಂದರನಾಯಕ, ಕೊಳತ್ತೂರು ಕೆ.ಎನ್.ಕುಮಾರ್ ಪ್ರಸಾದ್ ನಾಯಕ್ ಸೇರಿದಂತೆ ಮತ್ತಿತರರಿದ್ದರು.

ಕುಡುತಮ್ಮ ತಾಯಿ ವಾರ್ಷಿಕ ಮಹೋತ್ಸವ



ಬೆಟ್ಟದಪುರದ ಗ್ರಾಮದೇವತೆ ಕುಡುತಮ್ಮ ತಾಯಿದೇವರ ವಾರ್ಷಿಕ ಮಹೋತ್ಸವ ಮಂಗಳವಾರ ನಡೆಯಿತು.

ಬಿ.ವಿ.ಜಯಣ್ಣ ನಿಧನ



ಪಿರಿಯಾಪಟ್ಟಣ, ಜೂ.17– ತಾಲೂಕಿನ ಭುವನಹಳ್ಳಿ ಗ್ರಾಮದ ನಿವಾಸಿ ಬಿ.ವಿ.ಜಯಣ್ಣ(63) ಬುಧವಾರ ಸಂಜೆ ನಿಧನರಾದರು. ಮೃತರು ಪತ್ನಿ ಕಲ್ಪನಾ, ಪುತ್ರರಾದ ರಾಘವೇಂದ್ರ, ದರ್ಶನ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಗುರುವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಗುರುವಾರ 18 ಜೂನ್ 2026

ಚಾಮುಂಡಿಬೆಟ್ಟದಲ್ಲಿ ತ್ಯಾಜ್ಯ ಸಂಗ್ರಹ, ವಿಲೇವಾರಿ ವಿಶೇಷ ಅಭಿಯಾನ

● ಪಾಲಿಕೆ ಆಡಳಿತಾಧಿಕಾರಿಗಳೂ ಆದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಮಾಹಿತಿ ● ಪ್ಲಾಸ್ಟಿಕ್ ನಿಷೇಧ ಪ್ರದೇಶವೆಂದು ಘೋಷಿಸಿದರೂ ರಾಶಿ ರಾಶಿ ಪ್ಲಾಸ್ಟಿಕ್ ಸಂಗ್ರಹ ● ಚಾಮುಂಡೇಶ್ವರಿ ಸನ್ನಿಧಿ ಸಂರಕ್ಷಣೆಯಲ್ಲಿ ಪ್ರಾಧಿಕಾರ ಪೂರ್ಣ ವೈಫಲ್ಯ



ಚಾಮುಂಡಿಬೆಟ್ಟದಲ್ಲಿ ಸ್ವಚ್ಛತಾ ಅಭಿಯಾನದ ಮೂಲಕ ತ್ಯಾಜ್ಯ ಮುಕ್ತ ವಾತಾವರಣ ನಿರ್ಮಾಣ.

ಮೈಸೂರು, ಜೂ.17(ಎಂಟಿವೈ)– ಚಾಮುಂಡಿಬೆಟ್ಟದಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ ರಾರಾಜಿಸಲಾರಂಭಿಸಿದೆ. ಸಾಮಾಜಿಕ ಜಾಲ ತಾಣಗಳಲ್ಲಿ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ಎಚ್ಚೆತ್ತ ಪ್ರಾದೇಶಿಕ ಆಯುಕ್ತರೂ ಆದ ಮೈಸೂರು ಪಾಲಿಕೆ ಆಡಳಿತಾಧಿಕಾರಿ ನಿತೇಶ್ ಪಾಟೀಲ್, ತಾಕೀತು ಮಾಡಿದ್ದರಿಂದ ಚಾಮುಂಡಿಬೆಟ್ಟದಲ್ಲಿ ತ್ಯಾಜ್ಯ ಸಂಗ್ರಹ ಹಾಗೂ ವಿಲೇವಾರಿಗೆ ವಿಶೇಷ ಅಭಿಯಾನ ಆರಂಭಿಸಲಾಗಿದೆ.

ಪ್ರಮುಖವಾಗಿ ಬೆಟ್ಟದಲ್ಲಿನ ಚಾಮುಂಡೇಶ್ವರಿ ದೇಗುಲದ ಸುತ್ತ, ಮಹಿಷಾಸುರ ಪ್ರತಿಮೆ, ಬಸ್ ನಿಲ್ದಾಣ, ಪಾರ್ಕಿಂಗ್ ಕಟ್ಟಡ ಬಳಿ, ದೇವಾಲಯ ರಸ್ತೆ, ಮೆಟ್ಟಿಲು ಮಾರ್ಗದಲ್ಲಿ ಕಸದ ರಾಶಿ ರಾಶಿ ರಾರಾಜಿಸುತ್ತಿತ್ತು. ಬಾಟಲಿಗಳು ರಾಶಿ ಬಿದ್ದಿದ್ದವು. ಈ ತ್ಯಾಜ್ಯ ಸಂಗ್ರಹಿಸಿ ಸ್ವಚ್ಛಗೊಳಿಸಲು ಈಗ ಅಭಿಯಾನ ಆರಂಭಿಸಲಾಗಿದ್ದು, ದಿನಕ್ಕೆ ಮೂರು ಬಾರಿ ಸ್ವಚ್ಛತೆ ನಡೆಸಲು ನಿರ್ಧರಿಸಲಾಗಿದೆ. ಪ್ರವಾಸಿಗರು ಹಾಗೂ ಭಕ್ತರು, ಧಾರ್ಮಿಕ ಹಾಗೂ ಪ್ರವಾಸಿ ಕೇಂದ್ರವಾಗಿರುವ ಚಾಮುಂಡಿಬೆಟ್ಟದಲ್ಲಿ ಸ್ವಚ್ಛತೆ ಕಾಪಾಡುವಂತೆ ಆಗ್ರಹಿಸಿದ್ದರು.

ಪ್ರಾದೇಶಿಕ ಆಯುಕ್ತರ ಗಮನಕ್ಕೆ: ಸಾಮಾಜಿಕ ಜಾಲತಾಣಗಳಲ್ಲಿ ಕಸದ ಹೇಸಿಗೆ ಬಗ್ಗೆ ಹರಿದಾಡಿದ ವೀಡಿಯೊ ಪ್ರಾದೇಶಿಕ ಆಯುಕ್ತರೂ ಆದ ಮೈಸೂರು ಪಾಲಿಕೆ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ಅವರ ಗಮನಕ್ಕೆ ಬಂದಿತ್ತು. ಅಲ್ಲದೆ, ಕೆಲವರು ಬೆಟ್ಟದಲ್ಲಿ ಸ್ವಚ್ಛತೆ ಕಾಪಾಡಲು ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ನಿತೇಶ್ ಪಾಟೀಲ್, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಎಂ.ಜೆ. ರೂಪ ಹಾಗೂ ಡಿಸಿಎಫ್ ಕೆ.ಪರಮೇಶ್‌ಗೆ ಚಾಮುಂಡಿಬೆಟ್ಟದಲ್ಲಿ ಸ್ವಚ್ಛತೆ ಕಾಪಾಡಿ, ತ್ಯಾಜ್ಯ ಸಂಗ್ರಹಿಸಿ ವಿಲೇವಾರಿ ಮಾಡುವಂತೆ ಸೂಚಿಸಿದ್ದರು. ಅರಣ್ಯ ಇಲಾಖೆ ಸಿಬ್ಬಂದಿಯ ತ್ಯಾಜ್ಯ ಸಂಗ್ರಹಕ್ಕೆ ಬಳಸಲು ಸಾಧ್ಯವಿಲ್ಲದ ಕಾರಣ, ಪ್ರಾಧಿಕಾರದ ವತಿಯಿಂದಲೇ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ ಬೆಟ್ಟ, ರಸ್ತೆ ಮೆಟ್ಟಿಲು ಮಾರ್ಗ, ಬೆಟ್ಟದ ಅರಣ್ಯ ಪ್ರದೇಶದಲ್ಲಿ ಜನ ಬಿಸಾಡಿ ಹೋಗಿರುವ ಪ್ಲಾಸ್ಟಿಕ್ ಬಾಟಲ್, ಕವರ್ ಇನ್ನಿತರೆ ತ್ಯಾಜ್ಯ ಸಂಗ್ರಹಕ್ಕೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದರು.

> **ಸಾರ್ವಜನಿಕರು ದೂರು ನೀಡಿದ್ದರು**
>
> ಚಾಮುಂಡಿಬೆಟ್ಟದಲ್ಲಿ ತ್ಯಾಜ್ಯ ಎಲ್ಲೆಂದರಲ್ಲಿ ಬಿದ್ದಿದೆ ಎಂದು ಕೆಲವರು ವೀಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿದ್ದರು. ಅಲ್ಲದೆ, ಕೆಲವರು ನನಗೆ ಮಾಹಿತಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಸ್ವಚ್ಛತೆ ಕಾಪಾಡುವಂತೆ ಸೂಚನೆ ನೀಡಿದ್ದೆ. ಈ ಹಿನ್ನೆಲೆಯಲ್ಲಿ ಬೆಟ್ಟದಲ್ಲಿ ಸ್ವಚ್ಛತಾ ವಿಶೇಷ ಅಭಿಯಾನ ನಡೆಸಲಾಗಿದೆ. ದಿನಕ್ಕೆ ಮೂರು ಬಾರಿ ಸ್ವಚ್ಛತಾ ಕಾರ್ಯ ನಡೆಸುತ್ತಿರುವುದಾಗಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ. ಬೆಟ್ಟಕ್ಕೆ ಬರುವ ಭಕ್ತರು, ಪ್ರವಾಸಿಗರು ಬೆಟ್ಟದ ಪರಿಸರ ಕಾಪಾಡಲು ಮುಂದಾಗಬೇಕು.
>
> – **ನಿತೇಶ್ ಪಾಟೀಲ್,** ಪ್ರಾದೇಶಿಕ ಆಯುಕ್ತರು ಹಾಗೂ ಮೈಸೂರು ಪಾಲಿಕೆ ಆಡಳಿತಾಧಿಕಾರಿ

ವಿಶೇಷ ಅಭಿಯಾನ ಆರಂಭ: ಬುಧವಾರದಿಂದಲೇ ಚಾಮುಂಡಿಬೆಟ್ಟದ ವಿವಿಧೆಡೆ ಸ್ವಚ್ಛತಾ ವಿಶೇಷ ಅಭಿಯಾನ ಆರಂಭಿಸಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ವೀಡಿಯೊ ಗಮನಿಸಿ, ಅದೃಷ್ಟ ಮೇರೆಗೆ ಕಸ, ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿ ವಿಲೇವಾರಿ ಮಾಡಲಾಗಿದೆ. ಅಲ್ಲದೆ, ಬೆಟ್ಟದಲ್ಲಿರುವ ಅಂಗಡಿ, ಕ್ಯಾಂಟೀನ್, ಪೂಜಾ ಸಾಮಗ್ರಿ ಮಾರಾಟ ಮಳಿಗೆದಾರರಿಗೆ ಸ್ವಚ್ಛತೆ ಕಾಪಾಡುವಂತೆ ಸೂಚನೆ ನೀಡಲಾಗಿದೆ.

ಪ್ಲಾಸ್ಟಿಕ್ ಮುಕ್ತ ಎಂದು!: ಚಾಮುಂಡಿ ಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ವಲಯ ಎಂದು ಘೋಷಿಸಲಾಗಿದೆ. ಆದರೂ, ಇಂದಿಗೂ ಬೆಟ್ಟದಲ್ಲಿ ಪರಿಸರಕ್ಕೆ ಮಾರಕವಾದ ಏಕ ಬಳಕೆಯ ಪ್ಲಾಸ್ಟಿಕ್ ರಾಶಿಗಳು ರಾರಾಜಿಸುತ್ತಿವೆ. ಅರಣ್ಯ ಪ್ರದೇಶ ಒಳಗೊಂಡಿರುವ ಚಾಮುಂಡಿಬೆಟ್ಟದ ಸೌಂದರ್ಯಕ್ಕೆ ಪ್ಲಾಸ್ಟಿಕ್ ಮಾರಕವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಬೆಟ್ಟಕ್ಕೆ ಪ್ಲಾಸ್ಟಿಕ್ ತರುವುದನ್ನು ಪೂರ್ಣ ಪ್ರಮಾಣದಲ್ಲಿ ನಿಲ್ಲಿಸಬೇಕು. ಆಗ ಮಾತ್ರ ಬೆಟ್ಟದ ಪರಿಸರ ಸಂರಕ್ಷಣೆ ಸಾಧ್ಯವಾಗಲಿದೆ ಎಂದು ಪರಿಸರವಾದಿಗಳು ಅಭಿಪ್ರಾಯ ಪಟ್ಟಿದ್ದಾರೆ. ಈ ವಿಷಯದಲ್ಲಿ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದ ವೈಫಲ್ಯಕ್ಕೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಆಷಾಢ ಪೂಜಾ ಮಹೋತ್ಸವ

ಭಕ್ತರ ವಾಹನ ನಿಲುಗಡೆ; ಬಸ್ ಸೌಕರ್ಯಕ್ಕೆ ಉತ್ತನಹಳ್ಳಿ ಬಳಿಯ ಮೈದಾನ ಆಯ್ಕೆಗೆ ಸಲಹೆ

ಮೈಸೂರು, ಜೂ.17(ಎಂಟಿವೈ)– ಆಷಾಢ ಮಾಸದ ಶುಕ್ರವಾರದ ವಿಶೇಷ ಪೂಜಾ ಮಹೋತ್ಸವಕ್ಕೆ ಬರುವ ಭಕ್ತರು, ಪ್ರವಾಸಿಗರ ವಾಹನ ನಿಲುಗಡೆ ಹಾಗೂ ಅಲ್ಲಿಂದ ಉಚಿತ ಬಸ್‌ಗಳಲ್ಲಿ ಬೆಟ್ಟಕ್ಕೆ ಭಕ್ತರನ್ನು ಕರೆದೊಯ್ಯಲು ಉತ್ತನಹಳ್ಳಿ ಬಳಿ ಯುವ ದಸರಾ ಕಾರ್ಯಕ್ರಮ ಆಯೋಜಿಸಿದ್ದ ಸ್ಥಳ ಬಳಸಿಕೊಳ್ಳುವಂತೆ ಸಾರ್ವಜನಿಕರು ಸಲಹೆ ನೀಡಿದ್ದಾರೆ.

ಲಲಿತಮಹಲ್ ಪ್ಯಾಲೇಸ್ ಮೈದಾನಕ್ಕೆ ರಾಜವಂಶಸ್ಥರು ಬೇಲಿ ಹಾಕಿರುವ ಹಿನ್ನೆಲೆಯಲ್ಲಿ ಆಷಾಢ ಮಾಸದ ಪೂಜಾ ಮಹೋತ್ಸವಕ್ಕೆ ಖಾಸಗಿ ವಾಹನಗಳಲ್ಲಿ ಬರುವ ಭಕ್ತರನ್ನು ಕರೆದೊಯ್ಯಲು ಹಾಗೂ ಖಾಸಗಿ ವಾಹನಗಳ ನಿಲುಗಡೆಗೆ ಸ್ಥಳಾವಕಾಶದ ಸಮಸ್ಯೆ ಉದ್ಭವಿಸಿದ್ದು, ಜಿಲ್ಲಾಡಳಿತ ಹೊಸ ಸ್ಥಳ ಗುರುತಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ. ಮೈಸೂರಿನ ಮಹಾರಾಜ ಕಾಲೇಜು ಮೈದಾನ ಅಥವಾ ಸ್ಟ್ಯಾಂಡ್ಸ್ ಮತ್ತು ಗ್ರೌಂಡ್ಸ್ ಮೈದಾನ ಬಳಸಿಕೊಳ್ಳುವ ಸಲಹೆ ವ್ಯಕ್ತವಾಗಿತ್ತು.

ಆದರೆ, ಸಾವಿರಾರು ವಾಹನ ಆಗಮಿಸುವುದರಿಂದ ಮೈಸೂರು ನಗರದಲ್ಲಿ ವಾಹನ ದಟ್ಟಣೆ ಉಂಟಾಗಿ ನಾಗರಿಕರೊಂದಿಗೆ ಬೆಟ್ಟಕ್ಕೆ ಹೋಗಲು ಬರುವ ಭಕ್ತರು ಪರದಾಡುವ ಸಾಧ್ಯತೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ರಿಂಗ್ ರಸ್ತೆ ಹೊರಗೆ ಸ್ಥಳ ಗುರುತಿಸುವಂತೆ ಸಾರ್ವಜನಿಕರು ಸಲಹೆ ನೀಡಿದ್ದಾರೆ.

ಲಲಿತಮಹಲ್ ಪ್ಯಾಲೇಸ್ ಮೈದಾನದಲ್ಲಿ ತಾತ್ಕಾಲಿಕ ವ್ಯವಸ್ಥೆ ಮಾಡಬಹುದಾಗಿದ್ದು, ಆದರೆ, ರಾಜವಂಶಸ್ಥರು ಒಪ್ಪದೇ ಹೋಗಬಹುದು. ಈ ಹಿನ್ನೆಲೆಯಲ್ಲಿ ಉತ್ತನಹಳ್ಳಿ ಬಳಿ ಯುವ ದಸರಾ ಕಾರ್ಯಕ್ರಮ ನಡೆಯುವ ಸ್ಥಳವನ್ನು ಉಚಿತ ಬಸ್ ಹಾಗೂ ಖಾಸಗಿ ವಾಹನ ನಿಲುಗಡೆಗೆ ಬಳಸಿಕೊಳ್ಳುವುದು ಸೂಕ್ತ ಎಂದು ಸಲಹೆ ನೀಡಿದ್ದಾರೆ.

ಮಂದಾರ ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು, ಜೂ.17–ಬೆಂಗಳೂರು ಜ್ಞಾನ ಮಂದಾರ ಅಕಾಡೆಮಿಯು ತನ್ನ 25ನೇ ವರ್ಷದ ಬೆಳ್ಳಿ ಹಬ್ಬದ ನೆನಪಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪದವಿ ಪೂರ್ವ ಪರೀಕ್ಷೆಯಲ್ಲಿ ಶೇ.95 ಅಂಕ ಗಳಿಸಿದ ಮತ್ತು ಭರತನಾಟ್ಯ, ಸಂಗೀತ, ಯಕ್ಷಗಾನ, ಕ್ರೀಡೆ, ಚಿತ್ರಕಲೆ ಕ್ಷೇತ್ರದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಮಂದಾರ ರಾಜ್ಯ ಪುರಸ್ಕಾರವನ್ನು, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಸಮಾಜ ರತ್ನ ಪ್ರಶಸ್ತಿ ನೀಡಿ ಗೌರವಿಸಲು ಉದ್ದೇಶಿಸಿದೆ.

ಆಸಕ್ತರು ತಮ್ಮ ಇತ್ತೀಚಿನ ಭಾವಚಿತ್ರ, ವೈಯಕ್ತಿಕ ವಿವರಗಳೊಂದಿಗೆ ಜ್ಞಾನ ಮಂದಾರ ಅಕಾಡೆಮಿ, ನಂ.39, ಗಾಣಿಗರಹಳ್ಳಿ, ಚಿಕ್ಕ ಬಾಣಾವಾರ ಅಂಚೆ, ಬೆಂಗಳೂರು ಇಲ್ಲಿಗೆ ಜುಲೈ 5ರೊಳಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ.

ಮಣಿಕಂಠಗೆ ಪಿಹೆಚ್.ಡಿ

ಮೈಸೂರು: ಡಾ.ಎನ್.ಜಿ. ಯತಿರಾಜ್



ಅವರ ಮಾರ್ಗದರ್ಶನದಲ್ಲಿ ಮಣಿಕಂಠ.ವಿ ಅವರು ಗಣಕ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ತಮಿಳುನಾಡಿನ ಕೊಯಮತ್ತೂರಿನಲ್ಲಿರುವ ಭಾರತಿಯಾರ್ ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಹೈನುಗಾರಿಕೆ ಕ್ಷೇತ್ರದಲ್ಲಿ ವೈಜ್ಞಾನಿಕ ಜ್ಞಾನಕ್ಕೆ ಉತ್ತೇಜನ

ಹಾರ್ಟ್ ಸಂಸ್ಥೆಯಿಂದ ಹಸು ಸಾಕಾಣಿಕೆ, ಗುಣಮಟ್ಟದ ಹಾಲು ಉತ್ಪಾದನೆ ತರಬೇತಿ

ಮೈಸೂರು, ಜೂ.17–ಗ್ರಾಮೀಣ ರೈತರ ಆರ್ಥಿಕ ಸಬಲೀಕರಣ ಮತ್ತು ವೈಜ್ಞಾನಿಕ ಹೈನುಗಾರಿಕೆ ಉತ್ತೇಜಿಸುವ ಉದ್ದೇಶದಿಂದ ಹಾರ್ಟ್ ಸಂಸ್ಥೆಯ ವತಿಯಿಂದ ಹಸು ಸಾಕಾಣಿಕೆ ಮತ್ತು ಗುಣಮಟ್ಟದ ಹಾಲು ಉತ್ಪಾದನೆ ಕುರಿತು ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಮೈಸೂರಿನ ರಿಂಗ್ ರೋಡ್ ಸಮೀಪವಿರುವ ಹಾರ್ಟ್ ಸಂಸ್ಥೆಯಲ್ಲಿ ನಡೆಸಲಾಯಿತು.

ಕಾರ್ಯಕ್ರಮವನ್ನು ಹಾರ್ಟ್ ಸಂಸ್ಥೆಯ ಅಧ್ಯಕ್ಷ ಶಿವಕುಮಾರ್ ಉದ್ಘಾಟಿಸಿ ಮಾತನಾಡಿ, ಹೈನುಗಾರಿಕೆ ಗ್ರಾಮೀಣ ಆರ್ಥಿಕತೆಯ ಪ್ರಮುಖ ಆಧಾರವಾಗಿದ್ದು, ರೈತರು ಸಾಂಪ್ರದಾಯಿಕ ವಿಧಾನಗಳ ಜೊತೆಗೆ ವೈಜ್ಞಾನಿಕ ಪಶುಪಾಲನಾ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ. ಉತ್ತಮ ತಳಿಯ ಹಸುಗಳ ಸಾಕಾಣಿಕೆ, ಸಮರ್ಪಕ ಪೌಷ್ಟಿಕ ಆಹಾರ ನಿರ್ವಹಣೆ, ಆರೋಗ್ಯ ರಕ್ಷಣೆ ಹಾಗೂ ಸ್ವಚ್ಛ ಹಾಲು ಉತ್ಪಾದನೆಯ ಮೂಲಕ ರೈತರು ಹೆಚ್ಚಿನ ಆದಾಯ ಗಳಿಸಿ ಸ್ವಾವಲಂಬಿಗಳಾಗಬಹುದು. ಗ್ರಾಮೀಣಾಭಿವೃದ್ಧಿ ಮತ್ತು ಜೀವನಮಟ್ಟ ಸುಧಾರಣೆಗೆ ಹಾರ್ಟ್ ಸಂಸ್ಥೆ ನಿರಂತರವಾಗಿ ವಿವಿಧ ತರಬೇತಿ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ತಿಳಿಸಿದರು.



ಹಾರ್ಟ್ ಸಂಸ್ಥೆಯ ವತಿಯಿಂದ ಕೊಟ್ಟಿಪುರದಲ್ಲಿ ಆಯೋಜಿಸಲಾದ ಹಸು ಸಾಕಾಣಿಕೆ ಮತ್ತು ಗುಣಮಟ್ಟದ ಹಾಲು ಉತ್ಪಾದನೆ ತರಬೇತಿ ಕಾರ್ಯಕ್ರಮವನ್ನು ಸಂಸ್ಥೆಯ ಅಧ್ಯಕ್ಷ ಶಿವಕುಮಾರ್ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿ ಪ್ರಸನ್ನ ರೈತರಿಗೆ ವೈಜ್ಞಾನಿಕ ಹೈನುಗಾರಿಕೆ ಕುರಿತು ಮಾಹಿತಿ ನೀಡಿದರು

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಪ್ರಸನ್ನ ಅವರು ಅತ್ಯಂತ ಪರಿಣಾಮಕಾರಿ ಮತ್ತು ಪ್ರೇರಣಾದಾಯಕ ತರಬೇತಿ ಅಧಿವೇಶನ ನಡೆಸಿದರು. ಹಸುಗಳ ಆಯ್ಕೆ, ತಳಿ ಅಭಿವೃದ್ಧಿ, ಸಮತೋಲಿತ ಆಹಾರ ನಿರ್ವಹಣೆ, ರೋಗ ನಿರೋಧಕ ಕ್ರಮಗಳು, ಲಸಿಕಾ ಕಾರ್ಯಕ್ರಮಗಳು, ಹಾಲಿನ ಗುಣಮಟ್ಟ ಹೆಚ್ಚಿಸುವ ತಂತ್ರಗಳು ಹಾಗೂ ಹೈನುಗಾರಿಕೆಯನ್ನು ಲಾಭದಾಯಕ ಉದ್ಯಮವಾಗಿ ರೂಪಿಸುವ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಿದರು. ರೈತರೊಂದಿಗೆ ನೇರ ಸಂವಾದ ನಡೆಸಿ, ಅವರ ಪ್ರಶ್ನೆಗಳಿಗೆ ಪ್ರಾಯೋಗಿಕ ಉತ್ತರಗಳನ್ನು ನೀಡುವ ಮೂಲಕ ಉತ್ತಮ ಮಾರ್ಗದರ್ಶನ ಒದಗಿಸಿದರು. ತರಬೇತಿಯ ಸಂದರ್ಭದಲ್ಲಿ ಪ್ರಾಯೋಗಿಕ ಉದಾಹರಣೆಗಳು, ಅನುಭವ ಹಂಚಿಕೆ ಮತ್ತು ಸಂವಾದಾತ್ಮಕ ಚರ್ಚೆಗಳು ನಡೆದವು.

ಭಾಗವಹಿಸಿದ್ದ ರೈತರು ಮತ್ತು ಯುವಕರು ತರಬೇತಿ ಕಾರ್ಯಕ್ರಮದ ಬಗ್ಗೆ ಸಂತೋಷ ವ್ಯಕ್ತಪಡಿಸಿ, ಹೈನುಗಾರಿಕೆಯಲ್ಲಿ ಹೊಸ ಜ್ಞಾನ ಹಾಗೂ ಕೌಶಲ್ಯಗಳನ್ನು ಪಡೆದುಕೊಳ್ಳಲು ಇದು ಉತ್ತಮ ಅವಕಾಶವಾಗಿದೆ ಎಂದು ಅಭಿಪ್ರಾಯಪಟ್ಟರು. ವಿಶೇಷವಾಗಿ, ಗುಣಮಟ್ಟದ ಹಾಲು ಉತ್ಪಾದನೆ ಮತ್ತು ವೈಜ್ಞಾನಿಕ ಹಸು ಸಾಕಾಣಿಕೆ ಕುರಿತು ಪಡೆದ ಮಾಹಿತಿಯು ತಮ್ಮ ದೈನಂದಿನ ಹೈನುಗಾರಿಕಾ ಚಟುವಟಿಕೆಗಳಿಗೆ ಬಹಳ ಉಪಯುಕ್ತವಾಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಭಾಗವಹಿಸಿದ ಎಲ್ಲಾ ರೈತರು ಮತ್ತು ಅತಿಥಿಗಳಿಗೆ ಕೃತಜ್ಞತೆ ಸಲ್ಲಿಸಲಾಯಿತು. ಇಂತಹ ತರಬೇತಿ ಕಾರ್ಯಕ್ರಮಗಳು ಗ್ರಾಮೀಣ ರೈತರ ಆದಾಯ ಹೆಚ್ಚಳ, ಸ್ವಯಂ ಉದ್ಯೋಗ ಸೃಷ್ಟಿ ಹಾಗೂ ಸುಸ್ಥಿರ ಹೈನುಗಾರಿಕೆ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಲಿವೆ ಎಂಬ ವಿಶ್ವಾಸ ವ್ಯಕ್ತಪಡಿಸಲಾಯಿತು.

ರಾಜ್ಯ ಮಟ್ಟದ ವಿಚಾರ ಸಂಕಿರಣ, ಕವಿಗೋಷ್ಠಿ

ಮೈಸೂರು, ಜೂ. 17–ನನ್ನವ್ವ ಸಾಂಸ್ಕೃತಿಕ ಕಲಾ ತಂಡದ ವತಿಯಿಂದ ಜುಲೈ 1 ರಂದು ನಮನ ಕಲಾಮಂಟಪದಲ್ಲಿ ಕನ್ನಡ ನಾಡ ಕಟ್ಟಿದ ಮೊದಲ ದೊರೆ ಮಯೂರ ವರ್ಮ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿಯನ್ನು ಏರ್ಪಡಿಸಲಾಗಿದೆ. ಆಸಕ್ತರು ಕವಿಗಳು, ಸಾಹಿತಿಗಳು ಈ ಗೋಷ್ಠಿಯಲ್ಲಿ ಭಾಗವಹಿಸಲು ಜೂ.25ರೊಳಗೆ ಮಹದೇವ್, ಅಧ್ಯಕ್ಷರು, ಮೊ. 97418 34156, 996425 6477 ಸಂಪರ್ಕಿಸಲು ಕೋರಲಾಗಿದೆ.

ಸುವರ್ಣ ಪರಿಸರ ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಜೂ. 17– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸುವರ್ಣ ಬೆಳಕು ಫೌಂಡೇಷನ್ ವತಿಯಿಂದ ಪರಿಸರ ಸೇವೆಯಲ್ಲಿ ವಿಶೇಷ ಕಾಳಜಿ ಮತ್ತು ಕೊಡುಗೆ ನೀಡಿರುವ ಸಾಧಕರನ್ನು ಗುರುತಿಸಿ ಸುವರ್ಣ ಪರಿಸರ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಜೂ.20 ರಂದು ಬೆಳಗ್ಗೆ 11.30ಕ್ಕೆ ಮೈಸೂರಿನ ಪ್ರಕೃತಿ ಫುಡ್, ಕೃಷ್ಣರಾಜ ಬುಲೆವಾರ್ಡ್ ರಸ್ತೆ, ಅರಸು ಬೋರ್ಡಿಂಗ್ ಸ್ಕೂಲ್ ಎದುರು ಇಲ್ಲಿ ಡಾ. ಭೇರ್ಯ ರಾಮಕುಮಾರ್ ಮತ್ತು ಶ್ರೀ ಯೋಗ ಪ್ರಕಾಶ ಪ್ರಶಸ್ತಿ ಅವರಿಗೆ ಪ್ರದಾನ ಮಾಡಿ ಸನ್ಮಾನಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಂಟೆಡ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಪೆದ್ದಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಪರಿಮಳ & ಕಂಪನಿ (ತ)	4 ಪ್ರದರ್ಶನಗಳು
ಸಂಗಂ	
ಪೊಲೀಸ್ ಕಂಪ್ಲೆಂಟ್ (ಕ) + ಮ್ಯಾಂಗೋ ಪಚ್ಚ (ಕ)	2+2 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಲೋ ನವೀನ (ಕ)	4 ಪ್ರದರ್ಶನಗಳು

9ನೇ ಪುಟದಿಂದ ಮುಂದುವರೆದ ವರ್ಗೀಕೃತ ಜಾಹೀರಾತು

ಮೈಸೂರಲ್ಲಿ ಶೇ.40ರಷ್ಟು ವೈಟ್ ಟ್ಯಾಪಿಂಗ್; ಶೇ.60ರಷ್ಟು ಆಸ್ಫಾಲ್ಟ್ ರಸ್ತೆ ಕಾಮಗಾರಿ

● ಸಭೆಯಲ್ಲಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಅಧಿಕಾರಿಗಳ ಮಾಹಿತಿ

● ಸ್ವಚ್ಛತೆ, ಘನತ್ಯಾಜ್ಯ ನಿರ್ವಹಣೆ, ಪೌರ ಕಾರ್ಮಿಕರ ಸಮಸ್ಯೆಗಳ ನಿವಾರಣೆಗೆ ಸಚಿವರ ಸೂಚನೆ

ಮೈಸೂರು,ಜೂ.17(ಪಿಎಂ)– ಮೈಸೂರು ನಗರದಲ್ಲಿ ಶೇ.40ರಷ್ಟು ವೈಟ್ ಟ್ಯಾಪಿಂಗ್, ಶೇ.60ರಷ್ಟು ಆಸ್ಫಾಲ್ಟ್ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಅಧಿಕಾರಿಗಳು ಮಾಹಿತಿ ನೀಡಿದರು.

ಬುಧವಾರ ಬೆಂಗಳೂರಿನಲ್ಲಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ಮಹಾನಗರ ಪಾಲಿಕೆ, ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಎಂಡಿಎ) ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳು ಸಚಿವರಿಗೆ ಮಾಹಿತಿ ಒದಗಿಸಿದರು. ಬೋಗಾದಿ ರಸ್ತೆ, ಮಾನಂದವಾಡಿ ರಸ್ತೆ, ಮತ್ತಿತರ ರಸ್ತೆಗಳಲ್ಲಿ ವೈಟ್ ಟ್ಯಾಪಿಂಗ್ ಕಾಮಗಾರಿ ನಡೆಯುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಮೈಸೂರು ಸ್ವಚ್ಛ ನಗರ ಎಂಬ ಖ್ಯಾತಿ ಗಳಿಸಿದೆ. ಈ ಮನ್ನಣೆ ಉಳಿಸಿಕೊಳ್ಳಲು ನಗರದ ಸ್ವಚ್ಛತೆಗೆ ಗಮನ ಹರಿಸಬೇಕು. ಯುಜಿಡಿ ಕಾಮಗಾರಿಗಳನ್ನು ಸಮರ್ಪಕವಾಗಿ ನಡೆಸಬೇಕು. ಕಸ ವಿಂಗಡಣೆ ಸರಿಯಾಗಿ ನಡೆಯಬೇಕು. ದಸರಾ ಸಂದರ್ಭದಲ್ಲಿ ದೇಶ–ವಿದೇಶದಿಂದ ಪ್ರವಾಸಿಗರು ಬರುತ್ತಾರೆ. ಮೈಸೂರು ನಗರದ ಸ್ವಚ್ಛತೆಯತ್ತ ಅವರ ಗಮನ ಸೆಳೆಯುತ್ತದೆ ಎಂದು ಸಚಿವರು ಅಭಿಪ್ರಾಯಪಟ್ಟರು.

ಪಾಲಿಕೆ ಮಳಿಗೆಗಳ ಬಾಡಿಗೆ ಕಡಿಮೆಗೆ ಪರಿಶೀಲಿಸಿ: ಮಹಾನಗರ ಪಾಲಿಕೆಯ ಮಳಿಗೆಗಳ ಬಾಡಿಗೆ ದರ ಹೆಚ್ಚಿಸಿರುವುದಕ್ಕೆ ವಿರೋಧ ವ್ಯಕ್ತವಾಗುತ್ತಿದೆ. ಸುಮಾರು 10 ಪಟ್ಟು ಹೆಚ್ಚು ದರವನ್ನು ಒಮ್ಮೆಗೆ ಹೆಚ್ಚಿಸಿದರೆ ತುಂಬಾ ಹೊರೆಯಾಗುತ್ತದೆ. ಇದನ್ನು ಕಡಿಮೆ ಮಾಡುವ ಬಗ್ಗೆ ಪರಿಶೀಲಿಸಬೇಕು ಎಂದು ಸಚಿವರು ಸೂಚಿಸಿದರು.



ಬೆಂಗಳೂರಿನಲ್ಲಿ ಬುಧವಾರ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅಧಿಕಾರಿಗಳ ಸಭೆ ನಡೆಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅಧಿಕಾರಿಗಳು, ಸುಮಾರು 30 ವರ್ಷಗಳಿಂದ ದರ ಹೆಚ್ಚಳ ಮಾಡಿಲ್ಲ. ಈಗ ಮಾಡಿರುವ ದರವು ಪ್ರಸಕ್ತ ಸನ್ನಿವೇಶಕ್ಕೆ ಕಡಿಮೆ ಇದೆ. ಲೋಕೋಪಯೋಗಿ ಇಲಾಖೆ ನಿಗದಿಪಡಿಸಿರುವ ದರದ ಶೇ.40ರಷ್ಟು ಮಾತ್ರ ನಿಗದಿಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕೆರೆಗಳ ಅಭಿವೃದ್ಧಿ ಮಾಡಲಾಗುತ್ತಿದೆ. ಆದರೆ ಕೆರೆಗಳಿಗೆ ಕೊಳಚೆ ನೀರು ಬರುತ್ತಿದೆ ಎಂಬ ಮಾತುಗಳಿವೆ. ಕೊಳಚೆ ನೀರು ಕೆರೆಗಳಿಗೆ ಹೋಗದಂತೆ ಮಾರ್ಗ ಬದಲಿಸಬೇಕು ಅಥವಾ ನೀರನ್ನು ಸಂಸ್ಕರಿಸಬೇಕು ಎಂದು ಸಚಿವರು ನಿರ್ದೇಶನ ನೀಡಿದರು.

ಪೌರಕಾರ್ಮಿಕರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯಗಳು ಸಿಗಬೇಕು. ಪೌರ ಕಾರ್ಮಿಕರ ಸಂಘದ ಸಭೆಯನ್ನು ಇತ್ತೀಚೆಗೆ ನಡೆಸಲಾಯಿತು. ಸಭೆಯಲ್ಲಿ ಪೌರಕಾರ್ಮಿಕರು ತಮ್ಮ ಹಲವಾರು ಸಮಸ್ಯೆಗಳನ್ನು ತಿಳಿಸಿದ್ದಾರೆ. ಶೇ24.1ರ ಅನುದಾನದಲ್ಲಿ ಪೌರಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಒತ್ತು ಕೊಡಬೇಕು. ಪೌರ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಅವರ ಶಾಲಾ ಪ್ರವೇಶ ಶುಲ್ಕ ಮರುಪಾವತಿಗೆ ಉಪಯೋಗಿಸಬೇಕೆಂದು ಸಚಿವರು ತಿಳಿಸಿದರು.

ಶೇ.24.1ರ ಅನುದಾನದಲ್ಲಿ ಶೇ.20ರಷ್ಟು ಅನುದಾನವನ್ನು ಪೌರ ಕಾರ್ಮಿಕರ ಕಲ್ಯಾಣಕ್ಕಾಗಿ ವ್ಯಯಿಸಲಾಗುತ್ತಿದೆ. ಉಳಿದ ಅನುದಾನದಲ್ಲಿ ಶೇ.60ರಷ್ಟು ಸಿವಿಲ್ ಕಾಮಗಾರಿಗೆ, ಶೇ.40ರಷ್ಟು ಅನುದಾನವನ್ನು ವೈಯಕ್ತಿಕ ಸೌಲಭ್ಯಕ್ಕೆ ಬಳಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ ಅಡಿ 158 ಮನೆಗಳು ಪೂರ್ಣಗೊಂಡಿವೆ. ಮನೆಗಳ ಹಂಚಿಕೆ ಕಾರ್ಯಕ್ರಮ ನಿಗದಿಯಾಗಬೇಕು ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

> **ಸಿಎ ನಿವೇಶನ ದರಕ್ಕೆ ಒಪ್ಪುತ್ತಿಲ್ಲ...**
>
> ಸಿಎ ನಿವೇಶನಗಳಿಗೆ ನಿಗದಿಪಡಿಸಿರುವ ದರಕ್ಕೆ ಖರೀದಿಸಲು ಯಾರೂ ಒಪ್ಪುತ್ತಿಲ್ಲ ದರ ಕಡಿಮೆ ಮಾಡಬೇಕು. ನಿವೇಶನಗಳನ್ನು ಹಂಚಿಕೆ ಮಾಡಿಸಿಕೊಂಡು ಮನೆ ನಿರ್ಮಾಣ ಮಾಡದಿರುವ ಪ್ರಕರಣಗಳಲ್ಲಿ ನಿವೇಶನಗಳನ್ನು ವಾಪಸ್ಸು ಪಡೆದುಕೊಳ್ಳುವುದು ಕಷ್ಟವಾಗುತ್ತದೆ. ಇದಕ್ಕೆ ಒಂದು ಬಾರಿ ದಂಡ ವಿಧಿಸಿ, ಮತ್ತೊಂದು ಅವಕಾಶ ನೀಡುವ ಬಗ್ಗೆ ಸರ್ಕಾರದಿಂದ ಆದೇಶ ಮಾಡಿಸಿಕೊಡಬೇಕು ಎಂದು ಜಿಲ್ಲಾಧಿಕಾರಿಗಳು ಸಚಿವರನ್ನು ಕೋರಿದರು.

ಮೈಸೂರು ಅಭಿವೃದ್ಧಿ ಪ್ರಾಧಿಕಾರಗಳಲ್ಲಿ ಆರು ತಿಂಗಳಾದರೂ ಸಭೆ ನಡೆಯುತ್ತಿಲ್ಲವೆಂಬ ಮಾತಿದೆ. ಸಭೆಗಳು ವಿಳಂಬವಾದರೆ, ಸರಿಯಾದ ಸಮಯಕ್ಕೆ ಸೌಲಭ್ಯಗಳನ್ನು ಕೊಡಲಾಗುವುದಿಲ್ಲ. ಪ್ರತಿ ತಿಂಗಳು ಸಭೆ ನಡೆಯುವಂತೆ ಕ್ರಮ ವಹಿಸಬೇಕು ಎಂದು ಸಚಿವರು ಹೇಳಿದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಮಹಾನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಮಹಾನಗರ ಪಾಲಿಕೆ ಉಪ ಆಯುಕ್ತ ಜಿ.ಸೋಮಶೇಖರ್, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಇನ್ನಿತರ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರಲ್ಲಿ ಜೂ.20ರಿಂದ ಮಹಾರಾಜ ಟ್ರೋಫಿ ಟಿ–20 ಕ್ರಿಕೆಟ್ ಪಂದ್ಯಾವಳಿ

● ಸಾಂಸ್ಕೃತಿಕ ಚುಟುಕು ಕ್ರೀಡಾ ಹಬ್ಬಕ್ಕೆ ಸಿದ್ಧ ● ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್-ಗುಲ್ಬರ್ಗಾ ಮಿಸ್ಟಿಕ್ಸ್ ನಡುವೆ ಆರಂಭಿಕ ಹಣಾಹಣಿ

ಮೈಸೂರು, ಜೂ.17(ವಿವಿಹೆಚ್)– ಕ್ರಿಕೆಟ್ ಅಭಿಮಾನಿಗಳು ಕಾತರದಿಂದ ಕಾಯುತ್ತಿರುವ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ ಇದೇ ಜೂನ್ 20 ರಿಂದ ಮೈಸೂರಿನ ಮಾನಸ ಗಂಗೋತ್ರಿ ಆವರಣದಲ್ಲಿರುವ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಕ್ರೀಡಾಂಗಣದಲ್ಲಿ ಆರಂಭಗೊಳ್ಳಲಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಆಶ್ರಯದಲ್ಲಿ ನಡೆಯಲಿರುವ ಈ ಪ್ರತಿಷ್ಠಿತ ಟೂರ್ನಿಯು ರಾಜ್ಯದ ಪ್ರತಿಭಾವಂತ ಕ್ರಿಕೆಟಿಗರಿಗೆ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಉತ್ತಮ ವೇದಿಕೆಯಾಗಲಿದೆ.

5ನೇ ಆವೃತ್ತಿಯ ಮಹಾರಾಜ ಟ್ರೋಫಿಗೆ ಮೈಸೂರು ಆತಿಥ್ಯ ವಹಿಸಿದ್ದು, ಉದ್ಘಾಟನಾ ಪಂದ್ಯದಲ್ಲಿ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ಮತ್ತು ಗುಲ್ಬರ್ಗಾ ಮಿಸ್ಟಿಕ್ಸ್ ತಂಡಗಳು ಮುಖಾಮುಖಿಯಾಗಲಿವೆ. ಅದೇ ದಿನ ಸಂಜೆ ನಡೆಯುವ ಪಂದ್ಯದಲ್ಲಿ ಅತಿಥೇಯ ಮೈಸೂರು ವಾರಿಯರ್ಸ್, ಶಿವಮೊಗ್ಗ ಯೋಧಾಸ್ ತಂಡವನ್ನು ಎದುರಿಸಲಿದೆ.


ಒಂದು ವಾರಗಳ ಕಾಲ ಮೈಸೂರಿನಲ್ಲಿ ನಡೆಯುವ ಕ್ರೀಡಾ ಮನರಂಜನೆಗೆ ಮಾನಸ ಗಂಗೋತ್ರಿಯ ಗ್ಲೇಡ್ಸ್ ಮೈದಾನ ಸಾಕ್ಷಿಯಾಗಲಿದ್ದು, ಜೂ.20ರಿಂದ 25ರವರೆಗೆ ಟೂರ್ನಿಯ ಮೊದಲ 12 ಪಂದ್ಯಗಳನ್ನು ಇಲ್ಲೇ ನಡೆಸಲಾಗುತ್ತದೆ. ಪ್ರತಿನಿತ್ಯ ಹೊನಲು ಬೆಳಕಿನ ಪಂದ್ಯಾವಳಿ ಆಯೋಜಿಸಲಾಗಿದ್ದು, ಪಂದ್ಯ ಮಧ್ಯಾಹ್ನ 2.30ಕ್ಕೆ ಹಾಗೂ ಸಂಜೆ 7ಕ್ಕೆ ಆರಂಭವಾಗಲಿವೆ.

ಟೂರ್ನಿಯಲ್ಲಿ ಒಟ್ಟು 6 ತಂಡಗಳು ಭಾಗವಹಿಸುತ್ತಿದ್ದು, ಫೈನಲ್ಸ್ ಪಂದ್ಯವೂ ಸೇರಿದಂತೆ 34 ಪಂದ್ಯಗಳು ನಡೆಯಲಿವೆ.



ಮೈಸೂರು ಕ್ರೀಡಾಂಗಣದಲ್ಲಿ ಪಂದ್ಯಗಳ ಆಯೋಜನೆಗೆ ಅಗತ್ಯ ಸಿದ್ಧತೆಗಳು ಭರದಿಂದ ಸಾಗುತ್ತಿವೆ. ಪಿಚ್ ನಿರ್ವಹಣೆ, ಪ್ರೇಕ್ಷಕರ ಆಸನ ವ್ಯವಸ್ಥೆ, ಭದ್ರತೆ ಸೇರಿದಂತೆ ಮೂಲಸೌಕರ್ಯಗಳ ಸಿದ್ಧತೆಗೆ ವಿಶೇಷ ಗಮನ ಹರಿಸಿದ್ದಾರೆ. ಮೈಸೂರಿನಲ್ಲಿ ನಡೆಯುತ್ತಿರುವ ಈ ಟೂರ್ನಿಯಿಂದ ನಗರದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಮತ್ತಷ್ಟು ಉತ್ತೇಜನ ದೊರೆಯಲಿದ್ದು, ರಾಜ್ಯಾದ್ಯಂತ ಯುವ ಪ್ರತಿಭೆಗಳನ್ನು ಗುರುತಿಸಿ, ರಾಷ್ಟ್ರದ ಪರವಾಗಿ ಆಡುವಂತೆ ಪ್ರೇರೇಪಿಸುವುದು ನಮ್ಮ ಉದ್ದೇಶವಾಗಿದೆ.

–ಶ್ರೀನಿವಾಸ್ ಪ್ರಸಾದ್, ಸಂಚಾಲಕ, ಕೆಎಸ್‌ಸಿಎ ಮೈಸೂರು ವಲಯ.



ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣ.

ಪ್ರತಿ ತಂಡವು ತಲಾ 10 ಪಂದ್ಯಗಳನ್ನು ಆಡಲಿದ್ದು, ಮೊದಲ ನಾಲ್ಕು ಸ್ಥಾನಗಳಲ್ಲಿ ಉಳಿದುಕೊಳ್ಳುವ ತಂಡಗಳು ಮುಂದಿನ ಹಂತಕ್ಕೆ ಅರ್ಹತೆ ಪಡೆದುಕೊಳ್ಳಲಿವೆ. ಐಪಿಎಲ್ ಮಾದರಿಯಲ್ಲಿಯೇ ಕ್ವಾಲಿಫೈಯರ್ ಪಂದ್ಯಗಳು ನಡೆಯಲಿದ್ದು, ಪಾಯಿಂಟ್ಸ್ ಪಟ್ಟಿಯಲ್ಲಿ ಮೊದಲೆರಡು ಸ್ಥಾನ ಪಡೆಯುವ ತಂಡಕ್ಕೆ ಎಲಿಮಿನೇಟರ್‌ನಲ್ಲಿ ಸೋತರೂ ಮತ್ತೊಂದು ಅವಕಾಶ ಸಿಗಲಿದೆ.

ಪಿಚ್ ಹೀಗಿದೆ: ಮಹಾರಾಜ ಟ್ರೋಫಿಗಾಗಿ 2 ತಿಂಗಳ ವಿರಾಮವನ್ನು ಗ್ಲೇಡ್ಸ್ ಮೈದಾನಕ್ಕೆ ನೀಡಲಾಗಿದೆ. ಹಸಿರು ಹುಲ್ಲಿನಿಂದ ಮೈದಾನ ಕಂಗೊಳಿಸುತ್ತಿದ್ದು, ಹೊಸ ಸ್ವರೂಪವನ್ನು ಪಡೆದುಕೊಂಡಿದೆ. ಇನ್ನು ತಂಡಗಳ ಅಭ್ಯಾಸಕ್ಕಾಗಿ ಕ್ರೀಡಾಂಗಣದ ಆವರಣದಲ್ಲಿ ನೆಟ್ ಪ್ರ್ಯಾಕ್ಟಿಸ್‌ಗಾಗಿ 9 ಇತರೆ ಟ್ರ್ಯಾಕ್‌ಗಳನ್ನು ಸಿದ್ಧಪಡಿಸಲಾಗಿದೆ. ಬ್ಯಾಟಿಂಗ್ ಹಾಗೂ ಬೌಲಿಂಗ್ ಎರಡೂ ವಿಭಾಗಗಳಿಗೂ ಹೊಂದಾಣಿಕೆಯಾಗುವಂತಹ ಟ್ರ್ಯಾಕ್ ನಿರ್ಮಿಸಲಾಗಿದ್ದು, ರಣರೋಚಕತೆಯ ಕಾದಾಟಕ್ಕೆ ಸ್ಟೇಡಿಯಂ ಸಾಕ್ಷಿಯಾಗಲಿದೆ.

> ಈ ಬಾರಿಯ ನೇರ ಪ್ರಸಾರದ ಹಕ್ಕನ್ನು ಸೋನಿ ಸಂಸ್ಥೆ ಪಡೆದಿದ್ದು, ಕನ್ನಡದಲ್ಲಿಯೂ ಈ ಚಾನೆಲ್ ಲಭ್ಯವಿದೆ. ಮೊಬೈಲ್‌ನಲ್ಲಿ ಸೋನಿ ಅಪ್ಲಿಕೇಷನ್ ಹಾಗೂ ಫ್ಯಾನ್‌ಕೋಡ್ ಆಪ್ ಮೂಲಕ ಲೈವ್ ಸ್ಟ್ರೀಮಿಂಗ್ ಮಾಡಬಹುದಾಗಿದೆ. ಜೂ.20ರಂದು ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಬಿಸಿಸಿಐ ಮಾಜಿ ಅಧ್ಯಕ್ಷ ರೋಜರ್ ಬಿನ್ನಿ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಉಪಸ್ಥಿತರಿರಲಿದ್ದಾರೆ.

100 ರೂ. ಟಿಕೆಟ್: 2025ರಲ್ಲಿ ಐಪಿಎಲ್ ಕಪ್ ಗೆದ್ದ ಆರ್‌ಸಿಬಿ ವಿಜಯೋತ್ಸವ ಸಂಭ್ರಮಾಚರಣೆ ವೇಳೆ ಸಂಭವಿಸಿದ ಕಾಲ್ತುಳಿತ ಪ್ರಕರಣದಿಂದ ಪ್ರೇಕ್ಷಕರಿಲ್ಲದೇ ಮೊದಲ ಬಾರಿಗೆ ಮಹಾರಾಜ ಟ್ರೋಫಿಯನ್ನು ನಡೆಸಲಾಗಿತ್ತು. ಸಂಪೂರ್ಣ ಪಂದ್ಯಾವಳಿ ಮೈಸೂರಿನ ಗಂಗೋತ್ರಿ ಗ್ಲೇಡ್ಸ್‌ನಲ್ಲಿಯೇ ಆಯೋಜನೆಯಾಗಿತ್ತು.

ಇದೀಗ ಈ ಎಲ್ಲಾ ಆತಂಕ ಸರಿದಿದ್ದು, ಮತ್ತೆ ಟಿಕೆಟ್ ಮೂಲಕ ಪಂದ್ಯ ವೀಕ್ಷಣೆಗೆ ಪ್ರವೇಶ ನೀಡಲಾಗುತ್ತಿದೆ. ಬುಧವಾರ ದಿಂದ (ಜೂ.17) ಆನ್‌ಲೈನ್ ಹಾಗೂ ಮೈದಾನದಲ್ಲೇ ಟಿಕೆಟ್‌ಗಳು ಸಿಗಲಿವೆ.

ಪ್ರೇಕ್ಷಕರಿಗಾಗಿ ಐದೂವರೆ ಸಾವಿರ ಆಸನ ವ್ಯವಸ್ಥೆ ಮಾಡಲಾಗಿದ್ದು, 100 ರೂ.ಗೆ ಸಾಮಾನ್ಯ ಟಿಕೆಟ್, 200 ರೂ.ಗೆ ಸಿಲ್ವರ್ ಟಿಕೆಟ್ ಹಾಗೂ 250 ರೂ.ಗೆ ಪ್ರೀಮಿಯಂ ಟಿಕೆಟ್‌ಗಳು ಲಭ್ಯವಿದೆ. 7 ಪ್ರವೇಶ ದ್ವಾರಗಳ ಮೂಲಕ ಕ್ರೀಡಾಸಕ್ತರಿಗೆ ಮೈದಾನಕ್ಕೆ ಪ್ರವೇಶ ಇರಲಿದೆ.

ವೈಟ್ ಟ್ಯಾಪಿಂಗ್ ಕಾಮಗಾರಿ; ಟ್ರಾಫಿಕ್ ಕಿರಿಕಿರಿ: ಕ್ರೀಡಾಂಗಣಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಾದ ಕುಕ್ಕರಹಳ್ಳಿ ರಸ್ತೆ ಕಾಮಗಾರಿ ನಡೆಯುತ್ತಿರುವುದು ಕೆಎಸ್‌ಸಿಎಗೆ ತಲೆ ನೋವಾಗಿದೆ.

ಬೋಗಾದಿ ವೃತ್ತದಿಂದ ಕುಕ್ಕರಹಳ್ಳಿ ಕೆರೆ ಜಂಕ್ಷನ್‌ವರೆಗೆ ನಡೆಯುತ್ತಿರುವ ವೈಟ್ ಟ್ಯಾಪಿಂಗ್ ಕಾಮಗಾರಿಯಿಂದ ಕ್ರೀಡಾಂಗಣಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಬಂದ್ ಆಗಿದೆ. ಮೈಸೂರು ವಿವಿ ಮುಖ್ಯದ್ವಾರ ಹಾಗೂ ಬಯಲು ರಂಗಮಂದಿರ ದ್ವಾರಗಳು ಬಹುತೇಕ ಬಂದ್ ಆಗಿದ್ದು, ಪರ್ಯಾಯವಾಗಿ ಕೆಎಸ್‌ಓಯು ಮುಖ್ಯ ದ್ವಾರ ಅಥವಾ ಎಸ್‌ಜೆಸಿಇ ಮಾರ್ಗವನ್ನೇ ಅವಲಂಬಿಸಬೇಕಿದೆ.

ಪಾರ್ಕಿಂಗ್‌ಗಾಗಿ ಗಂಗೋತ್ರಿ ಆವರಣದಲ್ಲಿ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಪ್ರತಿದಿನ 5000 ಸಾವಿರಕ್ಕೂ ಅಧಿಕ ಮಂದಿ ಮೈದಾನಕ್ಕೆ ಭೇಟಿ ಕೊಡುವ ನಿರೀಕ್ಷೆಯಿದೆ.

3 ಮೈದಾನಗಳ ಆತಿಥ್ಯ: ಈ ಬಾರಿಯ ಮಹಾರಾಜ ಟ್ರೋಫಿ ಟೂರ್ನಿಗೆ 3 ಮೈದಾನಗಳು ವೇದಿಕೆಯಾಗಲಿವೆ. ಮೈಸೂರಿನ ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನ, ಹುಬ್ಬಳ್ಳಿಯ ಕೆಎಸ್‌ಸಿಎ ಕ್ರಿಕೆಟ್ ಮೈದಾನ ಹಾಗೂ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ಆಯೋಜಿಸಲಾಗಿದೆ.

ಸಂಪೂರ್ಣ ವೇಳಾಪಟ್ಟಿ ಮೈಸೂರು

ಜೂ.20 : ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ VS ಗುಲ್ಬರ್ಗಾ ಮಿಸ್ಟಿಕ್ಸ್ (ಮಧ್ಯಾಹ್ನ–2.30) ಶಿವಮೊಗ್ಗ ಯೋಧಾಸ್ VS ಮೈಸೂರು ವಾರಿಯರ್ಸ್ (ಸಂಜೆ–7)

ಜೂ.21: ಕೋಸ್ಟಲ್ ಕಿಂಗ್ ಮಂಗಳೂರು VS ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ–2.30) ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ VS ಶಿವಮೊಗ್ಗ ಯೋಧಾಸ್ (ಸಂಜೆ–7)

ಜೂ.22: ಮೈಸೂರು ವಾರಿಯರ್ಸ್ VS ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ–2.30) ಗುಲ್ಬರ್ಗಾ ಮಿಸ್ಟಿಕ್ಸ್ VS ಕೋಸ್ಟಲ್ ಕಿಂಗ್ಸ್ ಮಂಗಳೂರು (ಸಂಜೆ–7)

ಜೂ.23: ಗುಲ್ಬರ್ಗಾ ಮಿಸ್ಟಿಕ್ಸ್ VS ಶಿವಮೊಗ್ಗ ಯೋಧಾಸ್ (ಮಧ್ಯಾಹ್ನ–2.30) ಮೈಸೂರು ವಾರಿಯರ್ಸ್ VS ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ (ಸಂಜೆ–7)

ಜೂ.24: ಕೋಸ್ಟಲ್ ಕಿಂಗ್ ಮಂಗಳೂರು VS ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ (ಮಧ್ಯಾಹ್ನ–2.30) ಹುಬ್ಬಳ್ಳಿ ಟೈಗರ್ಸ್ VS ಶಿವಮೊಗ್ಗ ಯೋಧಾಸ್ (ಸಂಜೆ–7)

ಜೂ.25: ಕೋಸ್ಟಲ್ ಕಿಂಗ್ ಮಂಗಳೂರು VS ಮೈಸೂರು ವಾರಿಯರ್ಸ್ (ಮಧ್ಯಾಹ್ನ–2.30) ಹುಬ್ಬಳ್ಳಿ ಟೈಗರ್ಸ್ VS ಗುಲ್ಬರ್ಗಾ ಮಿಸ್ಟಿಕ್ಸ್ (ಸಂಜೆ–7)

ಹುಬ್ಬಳ್ಳಿ

ಜೂ.27: ಶಿವಮೊಗ್ಗ ಯೋಧಾಸ್ VS ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ (ಮಧ್ಯಾಹ್ನ–2.30). ಮೈಸೂರು ವಾರಿಯರ್ಸ್ VS ಗುಲ್ಬರ್ಗಾ ಮಿಸ್ಟಿಕ್ಸ್ (ಸಂಜೆ–7)

ಜೂ.28: ಶಿವಮೊಗ್ಗ ಯೋಧಾಸ್ VS ಕೋಸ್ಟಲ್ ಕಿಂಗ್ ಮಂಗಳೂರು (ಸಂಜೆ–7)

ಜೂ.29: ಗುಲ್ಬರ್ಗಾ ಮಿಸ್ಟಿಕ್ಸ್ VS ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ–2.30) ಕೋಸ್ಟಲ್ ಕಿಂಗ್ ಮಂಗಳೂರು VS ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ (ಸಂಜೆ–7)

ಜೂ.30: ಗುಲ್ಬರ್ಗಾ ಮಿಸ್ಟಿಕ್ಸ್ VS ಶಿವಮೊಗ್ಗ ಯೋಧಾಸ್ (ಮಧ್ಯಾಹ್ನ–2.30). ಮೈಸೂರು ವಾರಿಯರ್ಸ್ VS ಕೋಸ್ಟಲ್ ಕಿಂಗ್ ಮಂಗಳೂರು (ಸಂಜೆ–7)

ಜು.1: ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ VS ಹುಬ್ಬಳ್ಳಿ ಟೈಗರ್ಸ್ (ಸಂಜೆ–7)

ಜು.2: ಮೈಸೂರು ವಾರಿಯರ್ಸ್ VS ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ–2.30) ಕೋಸ್ಟಲ್ ಕಿಂಗ್ ಮಂಗಳೂರು VS ಶಿವಮೊಗ್ಗ ಯೋಧಾಸ್ (ಸಂಜೆ–7)

ಜು.3: ಮೈಸೂರು ವಾರಿಯರ್ಸ್ VS ಗುಲ್ಬರ್ಗಾ ಮಿಸ್ಟಿಕ್ಸ್ (ಮಧ್ಯಾಹ್ನ–2.30) ಹುಬ್ಬಳ್ಳಿ ಟೈಗರ್ಸ್ VS ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ (ಸಂಜೆ–7)

ಬೆಂಗಳೂರು

ಜು.5: ಮೈಸೂರು ವಾರಿಯರ್ಸ್ VS ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ (ಮಧ್ಯಾಹ್ನ–2.30) ಹುಬ್ಬಳ್ಳಿ ಟೈಗರ್ಸ್ VS ಶಿವಮೊಗ್ಗ ಯೋಧಾಸ್ (ಸಂಜೆ–7)

ಜು.6: ಹುಬ್ಬಳ್ಳಿ ಟೈಗರ್ಸ್ VS ಕೋಸ್ಟಲ್ ಕಿಂಗ್ಸ್ ಮಂಗಳೂರು (ಮಧ್ಯಾಹ್ನ–2.30) ಗುಲ್ಬರ್ಗಾ ಮಿಸ್ಟಿಕ್ಸ್ VS ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ (ಸಂಜೆ–7)

ಜು.7: ಶಿವಮೊಗ್ಗ ಯೋಧಾಸ್ VS ಮೈಸೂರು ವಾರಿಯರ್ಸ್ (ಸಂಜೆ–7) ಕೋಸ್ಟಲ್ ಕಿಂಗ್ ಮಂಗಳೂರು VS ಗುಲ್ಬರ್ಗಾ ಮಿಸ್ಟಿಕ್ಸ್ (ಸಂಜೆ–7)

ಜು.9: ಮೊದಲ ಎಲಿಮಿನೇಟರ್ ಪಂದ್ಯ (ಮಧ್ಯಾಹ್ನ–2.30), ಕ್ವಾಲಿಫೈಯರ್–1 (ಸಂಜೆ–7)

ಜು.10: ಕ್ವಾಲಿಫೈಯರ್–2 (ಸಂಜೆ–7) **ಜು.12:** ಫೈನಲ್ಸ್ (ಸಂಜೆ–7)

ಮೆಸ್ಸಿ ಹ್ಯಾಟ್ರಿಕ್ ಗೋಲು: ಅರ್ಜೆಂಟೀನಾಗೆ ಸೂಪರ್ ಗೆಲುವು

ಕಾನ್ಸಾಸ್ ಸಿಟಿ, ಜೂ.17– ಅರ್ಜೆಂಟೀನಾವನ್ನು ಸತತ 2ನೇ ಬಾರಿಗೆ ಫಿಫಾ ವಿಶ್ವಕಪ್ ಚಾಂಪಿಯನ್ ಪಟ್ಟಕ್ಕೆ ಕೊಂಡೊಯ್ಯುವ ಗುರಿ ಹೊಂದಿರುವ ಲಿಯೋನೆಲ್ ಮೆಸ್ಸಿ ಅವರು ಟೂರ್ನಿಯ ಮೊದಲ ಪಂದ್ಯದಲ್ಲೇ ಅಲ್ಜೀರಿಯಾ ವಿರುದ್ಧ 3–0 ಅಂತರದ ಗೆಲುವು ತಂದುಕೊಟ್ಟಿದ್ದಾರೆ.

ಇಲ್ಲಿನ ಕಾನ್ಸಾಸ್ ಸಿಟಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 200 ನೇ ಅಂತಾರಾಷ್ಟ್ರೀಯ ಪಂದ್ಯ ವಾಡಿದ ಮೆಸ್ಸಿ, ಅಲ್ಜೀರಿಯಾದ ಬಲಿಷ್ಠ ರಕ್ಷಾ ಪಡೆ ನಡುವೆಯೂ ಅದ್ಭುತ ಪ್ರದರ್ಶನ ಮೂಲಕ ಹ್ಯಾಟ್ರಿಕ್ ಗೋಲು ದಾಖಲಿಸಿದರು. ಪಂದ್ಯದ 17ನೇ ನಿಮಿಷದಲ್ಲಿ ಮೆಸ್ಸಿ ಹೊಡೆದ ಶಾಟ್ ಅಲ್ಜೀರಿಯಾ ಗೋಲ್‌ಕೀಪರ್‌ನನ್ನು ಮೀರಿಸಿ ನೆಟ್‌ಗೆ ಹಾರಿತು. ಆ ಮೂಲಕ ಮೊದಲ ಗೋಲು ದಾಖಲಿಸಿದರು. ಪಂದ್ಯದ ಮೊದಲ ಅವಧಿ (45 ನಿಮಿಷ) ಮಕ್ತಾಯಕ್ಕೆ ಅರ್ಜೆಂಟೀನಾ ತಂಡ ಅಲ್ಜೀರಿಯಾ ವಿರುದ್ಧ 1–0 ಮುನ್ನಡೆ ಸಾಧಿಸಿತ್ತು. ಅಲ್ಜೀರಿಯಾ ಸಾಕಷ್ಟು ಪ್ರಯತ್ನ ಪಟ್ಟರೂ ಸಮಬಲ ಸಾಧಿಸಲು ಸಾಧ್ಯವಾಗಲಿಲ್ಲ.



ಲಿಯೋನೆಲ್ ಮೆಸ್ಸಿ

ನಂತರ ದ್ವಿತೀಯಾರ್ಧದಲ್ಲೂ ಮೆಸ್ಸಿ ಪ್ರಾಬಲ್ಯ ಸಾಧಿಸಿದರು. ಪಂದ್ಯದ 60ನೇ ನಿಮಿಷದಲ್ಲಿ ಅವರು ತಮ್ಮ ಎರಡನೇ ಗೋಲು ಗಳಿಸುವ ಮೂಲಕ ಟೂರ್ನಮೆಂಟ್‌ನಲ್ಲಿ 15 ಗೋಲುಗಳ ದಾಖಲೆಯನ್ನು ತಲುಪಿದರು.

ರಿಯಾದ್ ಮಹ್ರೆಜ್ ಸೇರಿದಂತೆ ಬಲಿಷ್ಠ ತಂಡ ಕಣಕ್ಕಿಳಿಸಿದ ಅಲ್ಜೀರಿಯಾ ಅರ್ಜೆಂಟೀನಾದ ರಕ್ಷಣಾತ್ಮಕ ಗೋಡೆ ಮುರಿಯಲು ಸಾಧ್ಯವಾಗಲಿಲ್ಲ. ಕ್ರಿಶ್ಚಿಯನ್ ರೊಮೆರೊ ಮತ್ತು ಲಿಸಾಂಡ್ರೊ ಮಾರ್ಟಿನೆಜ್ ನೇತೃತ್ವದ ರಕ್ಷಣಾತ್ಮಕ ವಿಭಾಗ ಅಲ್ಜೀರಿಯಾಗೆ ಯಾವುದೇ ಅವಕಾಶ ನೀಡಲಿಲ್ಲ. ಅಲ್ಜೀರಿಯಾ ಗೋಲು ಗಳಿಸಲು ಶ್ರಮಿಸಿದರೂ ಗೋಲ್‌ಕೀಪರ್ ಎಮಿಲಿಯಾನೊ ಮಾರ್ಟಿನೆಜ್ ಎಲ್ಲಾ ಪ್ರಯತ್ನಗಳನ್ನು ವಿಫಲಗೊಳಿಸಿದರು.

ಪಂದ್ಯದಲ್ಲಿ 2 ಗೋಲು ದಾಖಲಿಸಿದ್ದ ಮೆಸ್ಸಿ 76ನೇ ನಿಮಿಷದಲ್ಲಿ ಮೂರನೇ ಗೋಲು ಗಳಿಸುವ ಮೂಲಕ ತಂಡದ ಗೆಲುವನ್ನು ಖಚಿತ ಪಡಿಸಿದರು. ಇದರೊಂದಿಗೆ ವಿಶ್ವಕಪ್ ಇತಿಹಾಸದಲ್ಲಿ ಅತೀ ಹೆಚ್ಚು ಗೋಲುಗಳನ್ನು ಗಳಿಸಿದ ಆಟಗಾರ ಜರ್ಮನಿಯ ದಂತಕಥೆ ಸ್ಟ್ರೈಕರ್ ಮಿರೋಸ್ಲಾವ್ ಕ್ಲೋಸ್ ಅವರ 16 ಗೋಲುಗಳ ಸಾರ್ವಕಾಲಿಕ ದಾಖಲೆಯನ್ನು ಲಿಯೋನಲ್ ಮೆಸ್ಸಿ ಸರಿಗಟ್ಟಿದರು.

ವಿಶ್ವಕಪ್ ಇತಿಹಾಸದಲ್ಲಿ 11 ವಿಭಿನ್ನ ದೇಶಗಳ ವಿರುದ್ಧ ಗೋಲು ಗಳಿಸಿದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೂ ಮೆಸ್ಸಿ ಪಾತ್ರರಾದರು. ವಿಶ್ವಕಪ್‌ನಲ್ಲಿ ಬಾಕ್ಸ್ ಹೊರಗಿನಿಂದ 5 ಗೋಲು ಗಳಿಸಿದ ಬ್ರೆಜಿಲ್‌ನ ದಂತಕಥೆ ರಿವೆಲ್ಲಿನೊ ಅವರ 60 ವರ್ಷಗಳ ಹಳೆಯ ದಾಖಲೆ ಮೆಸ್ಸಿ ಸರಿಗಟ್ಟಿದರು. ಮೆಸ್ಸಿ ಈಗ ವಿಶ್ವಕಪ್‌ನಲ್ಲಿ ಅರ್ಜೆಂಟೀನಾ ಪರ ಗೋಲು ಗಳಿಸಿದ ಅತ್ಯಂತ ಕಿರಿಯ ಮತ್ತು ಹಿರಿಯ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಸೆನೆಗಲ್ ವಿರುದ್ಧ ಗೆದ್ದ ಫ್ರಾನ್ಸ್ ಶುಭಾರಂಭ

ನ್ಯೂಯಾರ್ಕ್, ಜೂ.17– ಇಲ್ಲಿನ ಮೆಟ್‌ಲೈಫ್ ಕ್ರೀಡಾಂಗಣದಲ್ಲಿ ನಡೆದ ರೋಚಕ ಪಂದ್ಯದಲ್ಲಿ ಸೆನೆಗಲ್ ತಂಡವನ್ನು 3–1 ಗೋಲುಗಳಿಂದ ಸೋಲಿಸುವ ಮೂಲಕ ಫಿಫಾ ವಿಶ್ವಕಪ್ 23ನೇ ಆವೃತ್ತಿಯಲ್ಲಿ ಫ್ರಾನ್ಸ್ ತಂಡ ಶುಭಾರಂಭ ಮಾಡಿದೆ.

ನಾಯಕ ಕೈಲಿಯನ್ ಎಂಬಪ್ಪೆ 2 ಗೋಲುಗಳನ್ನು ದಾಖಲಿಸಿ ಫ್ರೆಂಚ್ ತಂಡಕ್ಕೆ ಅದ್ಭುತ ಗೆಲುವು ತಂದುಕೊಟ್ಟರು. ಈ ಗೆಲುವಿನೊಂದಿಗೆ, ಎಂಬಪ್ಪೆ ಫ್ರಾನ್ಸ್ ಪರ ಸಾರ್ವಕಾಲಿಕ ದಾಖಲೆ ಬರೆದಿದ್ದಾರೆ.

ಪಂದ್ಯದ ಮೊದಲಾರ್ಧದಲ್ಲಿ ಸೆನೆಗಲ್ ಆಕ್ರಮಣಕಾರಿ ಪ್ರದರ್ಶನ ನೀಡಿತು. ಆದರೆ ಗೋಲು ಗಳಿಸುವಲ್ಲಿ ವಿಫಲವಾಯಿತು. ಆದಾಗ್ಯೂ, ದ್ವಿತೀಯಾರ್ಧದಲ್ಲಿ ಫ್ರಾನ್ಸ್ ಪಂದ್ಯದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿತು. ಎಂಬಪ್ಪೆ 66ನೇ ನಿಮಿಷದಲ್ಲಿ ಫ್ರಾನ್ಸ್ ಪರ ಮೊದಲ ಗೋಲು ಗಳಿಸಿದರು. ಔಸ್ಮಾನೆ ಡೆಂಬೆಲೆ ಬದಲಿಗೆ ಬಂದ ಬ್ರಾಡ್ಲಿ ಬಾರ್ಕೋಲಾ 82ನೇ ನಿಮಿಷದಲ್ಲಿ ಮತ್ತೊಂದು ಗೋಲು ಗಳಿಸಿ 2–0 ಫ್ರಾನ್ಸ್‌ಗೆ ಮುನ್ನಡೆ ತಂದುಕೊಟ್ಟರು.

ಪಂದ್ಯ ಮುಗಿಯಲು ಕೆಲವೇ ನಿಮಿಷಗಳು ಬಾಕಿ ಇರುವಾಗ ಸೆನೆಗಲ್ 90ನೇ ನಿಮಿಷದಲ್ಲಿ 18 ವರ್ಷದ ಇಬ್ರಾಹಿಂ ಮೂಲಕ ಗೋಲಿನ ಖಾತೆ ತೆರೆಯಿತು. ಇದರೊಂದಿಗೆ ಇಬ್ರಾಹಿಂ ವಿಶ್ವಕಪ್ ಇತಿಹಾಸದಲ್ಲಿ ಗೋಲು ಗಳಿಸಿದ ಅತ್ಯಂತ ಕಿರಿಯ ಆಫ್ರಿಕನ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಆದರೆ ಇದಾದ ಮುಂದಿನ ನಿಮಿಷದಲ್ಲಿ (95ನೇ ನಿಮಿಷ), ಎಂಬಪ್ಪೆ 30 ಗಜ ದೂರದಿಂದ ಚೆಂಡನ್ನು ಗೋಲಿಗಟ್ಟಿ 3–1 ರೊಂದಿಗೆ ಪಂದ್ಯವನ್ನು ಮುಗಿಸಿದರು.

ಇದರೊಂದಿಗೆ ಫ್ರಾನ್ಸ್ ತಂಡ 2002ರ ಸೋಲಿಗೆ ಸೇಡು ತೀರಿಸಿಕೊಂಡಿತು. ಅಂದು ವಿಶ್ವಕಪ್‌ನ ಕಿಕ್‌ಆಫ್ ಪಂದ್ಯದಲ್ಲಿ ಸೆನೆಗಲ್ ತಂಡವು ಆಗಿನ ವಿಶ್ವ ಚಾಂಪಿಯನ್ ಫ್ರಾನ್ಸ್ ತಂಡವನ್ನು ಏಕಪಕ್ಷೀಯವಾಗಿ ಸೋಲಿಸಿತ್ತು. ಇದರಿಂದಾಗಿ ಫ್ರಾನ್ಸ್ ಗ್ರೂಪ್ ಹಂತದಿಂದಲೇ ಹೊರಬಿತ್ತು. ಈ ಬಾರಿ ಫ್ರಾನ್ಸ್ ಸೆನೆಗಲ್‌ಗೆ ಅಂತಹ ಅವಕಾಶ ನೀಡಲಿಲ್ಲ. ಏತನ್ಮಧ್ಯೆ ಈ ಪಂದ್ಯದಲ್ಲಿ ಎರಡು ಗೋಲುಗಳೊಂದಿಗೆ, ಎಂಬಪ್ಪೆ ಫ್ರಾನ್ಸ್ ಪರ ಸಾರ್ವಕಾಲಿಕ ದಾಖಲೆ ಬರೆದರು. ವಿಶ್ವಕಪ್‌ನಲ್ಲಿ ಹೆಚ್ಚು ಗೋಲು ಗಳಿಸಿದ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು.




ಕೈಲಿಯನ್ ಎಂಬಪ್ಪೆ

ಇತಿಹಾಸ ಸೃಷ್ಟಿಸಿದ ಎಂಬಪ್ಪೆ: ಪಂದ್ಯದಲ್ಲಿ 2 ಗೋಲು ಗಳಿಸುವ ಮೂಲಕ ಎಂಬಪ್ಪೆ ಇತಿಹಾಸ ನಿರ್ಮಿಸಿದರು. ಅವರು ತಮ್ಮ ಅದ್ಭುತ ವೃತ್ತಿ ಜೀವನಕ್ಕೆ ಮತ್ತೊಂದು ಪ್ರಮುಖ ಸಾಧನೆಯನ್ನು ಸೇರಿಸಿದರು. ಈಗ ಫ್ರಾನ್ಸ್ ಪರ 58 ಗೋಲುಗಳನ್ನು ಗಳಿಸಿ ಅತಿ ಹೆಚ್ಚು ಗೋಲು ಗಳಿಸಿದ ಆಟಗಾರ ಎನಿಸಿಕೊಂಡಿದ್ದಾರೆ. ಇದರೊಂದಿಗೆ 57 ಗೋಲುಗಳ ಆಲಿವಿಯರ್ ಗಿರೌಡ್ ಅವರನ್ನು ಹಿಂದಿಕ್ಕಿದ್ದಾರೆ. ಇದರೊಂದಿಗೆ ಅವರ ವಿಶ್ವಕಪ್‌ನಲ್ಲಿ ಗೋಲುಗಳ ಸಂಖ್ಯೆ ಈಗ 14ಕ್ಕೆ ತಲುಪಿದ್ದು, ಮೂರನೇ ಸ್ಥಾನಕ್ಕೆ ತಲುಪಿದ್ದಾರೆ. ಬ್ರೆಜಿಲ್‌ನ ಮಾಜಿ ಪ್ಲೇಯರ್ ರೊನಾಲ್ಡೊ (15) ಮತ್ತು ಜರ್ಮನಿಯ ಮಿರೋಸ್ಲಾವ್ ಕ್ಲೋಸ್ ಮತ್ತು ಅರ್ಜೆಂಟಿನಾದ ಲಿಯೊನೆಲ್ ಮೆಸ್ಸಿ (16) ಮಾತ್ರ ಅವರಿಗಿಂತ ಹೆಚ್ಚು ಗೋಲುಗಳನ್ನು ಗಳಿಸಿ ವಿಶ್ವಕಪ್‌ನಲ್ಲಿ ಮುಂದಿದ್ದಾರೆ.

ನಾಳೆ ಯೋಗ ಅರಿವು ಮೂಡಿಸುವ ಕಾರ್ಯಕ್ರಮ

ಮೈಸೂರು, ಜೂ.17– ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಹಾಗೂ ಆಯುಷ್ ಇಲಾಖೆ ಸಹಯೋಗದೊಂದಿಗೆ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಮೈಸೂರು ಇವರು 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಯೋಗದ ಅರಿವು ಮೂಡಿಸಲು ಕಾರ್ಯಕ್ರಮವನ್ನು ಜೂನ್ 19 ರಂದು ಸಂಜೆ 5 ಗಂಟೆಗೆ ಮೈಸೂರಿನ ಚಿಕ್ಕಗಡಿಯಾರ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ.



PUBLIC NOTICE

It is hereby brought to the notice of the general public that my client, Sri. M. Satyanarayana is a shareholder holding 48% of the total shareholding of the private limited company incorporated as Magnum Metrolics India Private Limited (the Company) bearing CIN U36999-KA2007PTC044591, having its registered office at No.C-123/124, Industrial Estate, Yadavagiri, Mysore, Karnataka, India 570020. My client is also a director of the said Company. My client has recently learnt that the Company, through its managing director, Sri. M. V. Nandakumar is attempting to create third party interests over the Schedule Property (more fully described below), without the consent of the board of directors of the Company, or requisite resolutions of the shareholders of the Company. Any attempt to create third party interests over the Schedule Property, whether by way of alienation, lease, mortgage, or any other transfer, without the express consent of the Board of Directors and shareholders of the Company, is against applicable law.

Therefore, the general public is hereby cautioned not to deal / transact with the aforenamed individual either in capacity of the Managing Director or shareholder of the Company or with any other persons associated / claimed to be associated with the Company or acting under them or through them, in respect of the Schedule Property in any manner whatsoever. Should any person deal / transact in respect of the Schedule Property or any other property belonging to the Company, they will be doing so on their own risk and cost, and any such transaction will be impugned before the appropriate legal forum.

SCHEDULE

Shed No. C-122 and C-123, admeasuring about 2950 Sq. Ft. in KSIIDC, Yadavgiri Industrial Estate, Yadavagiri, Mysore - 570 020.

Sd/- Raghuram Cadambi
Advocate
No. 519 520, Prestige Center Point, Level 5, No. 7, Cunningham Road, Bengaluru - 560 052
Mob:990039859